ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

03 ಏಪ್ರಿಲ್, 2013 ಪುಟ 16 ರೂ. 14/-




ಅಂಬೇಡ್ಕರ್ ಪ್ರತಿಮೆಯ ವಾಸ್ತು



ಕ್ಕಿ ಮಾಫಿಯಾ ಪಿತಾಮಹ



JDSಗೆ IAS ವೀರಭದ್ರಯ್ಯನ ಕಳ್ಳ ದುಡ್ಡು



ಸಿಪ್ಪೆ ತಿಂದ ಅಯ್ಯಪ್ಪ ಜೈಲಿಗೆ ಹಣ್ಣು ತಿಂದ ವಿಶ್ವನಾಥ ಎಲ್ಲಿಗೆ?




ಮದಾಸನ ‘ಬೀದಿ’ ಸರತ್ತು




ಕರಾವಳಿ
ಕಂಗೆಟ್ಟ ಕಲ್ಲಡ್ಕ



ಪಾಟೀಲನಿಗೆ
ಸೋಲಿನ ಗುಂಡೇಟು



ಮೊಳಕಾಲ್ಮೂರು
ಬಿಎಸ್ಸಾರ್ ಪರ ಅಲೆ






ಅಂಬೇಡ್ಕರ್ ಪ್ರತಿಮೆಯ ವಾಸ

ಅಂಚಿನಿಂದ

ಡಾ.ವಾಸು ಎಚ್.ವಿ.



ಕಳೆದ ಒಂದು ವರ್ಷದಿಂದ 'ವಿವಾದ'ಗೊಳಿಸಲಾಗಿದ್ದ ವಿಧಾನಸೌಧದ ಮುಂದಿನ ಅಂಬೇಡ್ಕರ್ ಪ್ರತಿಮೆಯು ಈಗೆರಡು ತಿಂಗಳಿಂದ ಅಕ್ಷರಶಃ ತೂಗುಯ್ಯಾಲೆಯಲ್ಲಿತ್ತು. ಮೆಟ್ರೋ ಕಾಮಗಾರಿಯ ಹಿನ್ನೆಲೆಯಲ್ಲಿ ಹೈಕೋರ್ಟ್ ಆ ವಿಚಾರದಲ್ಲಿ ಮಧ್ಯೆ ಪ್ರವೇಶಿಸಿ ಸ್ಥಳಾಂತರಕ್ಕೆ ಆದೇಶಿಸಿತು. ಇದೀಗ ಸ್ಥಳಾಂತರ ಮಾಡಲಾಗುತ್ತಿದೆ. ಆದರೆ ಪತ್ರಿಕಾ ವರದಿಗಳ ಪ್ರಕಾರ ಕೇವಲ ಸ್ಥಳಾಂತರ ಮಾತ್ರ ಮಾಡಲಾಗುತ್ತಿಲ್ಲ, ಬದಲಿಗೆ ಅಂಬೇಡ್ಕರ್‌ರ ಚಿಂತನೆಗಳ ದೇಶಾಂತರ ಕೂಡಾ ನಡೆಯುತ್ತಿದೆ. ವಿಧಾನಸೌಧದ ಪಶ್ಚಿಮ ದ್ವಾರಕ್ಕೆ ಅಂಬೇಡ್ಕರರ ಪ್ರತಿಮೆ ಸ್ಥಳಾಂತರಗೊಳ್ಳುವುದು 'ವಾಸ್ತು'ವಿಗೆ ಸರಿಹೊಂದುವುದಿಲ್ಲವಾದ್ದರಿಂದ, ಈಗ ಪೂರ್ವ ದ್ವಾರದ ಬಳಿಯ ಗುಲಾಬಿ ತೋಟದ ಹತ್ತಿರವೇ ಉಳಿಸಬೇಕೆಂದು ತೀರ್ಮಾನಿಸಲಾಗಿದೆಯಂತೆ.

ಇದೀ ಪ್ರಕರಣವೇ ಬಾಬಾಸಾಹೇಬ್ ಅಂಬೇಡ್ಕರ್‌ರನ್ನು ಮತ್ತು ಅವರ ಚಿಂತನೆ ಹಾಗೂ ಆಶಯಗಳನ್ನು ವಿಚಿತ್ರ ರೀತಿಯಲ್ಲಿ ಅಪಹಾಸ್ಯ ಮಾಡುವಂತೆ ಕಾಣುತ್ತಿದೆ. ಏಕಕಾಲದಲ್ಲಿ ಈ ವಿದ್ಯಮಾನವು ಸಮಾಜದಲ್ಲಿ ನಾಲ್ಕೈದು ರೀತಿಯ ಪ್ರತಿಕ್ರಿಯೆಗಳನ್ನೂ ಮತ್ತು ಪರಿಣಾಮಗಳನ್ನೂ ಉಂಟು ಮಾಡಿವೆ. ಆದರೆ ಯಾವೊಂದೂ ಸಹಾ ಅಂಬೇಡ್ಕರರ ವಿಚಾರಗಳನ್ನು, ನಾಡಿನ ಮತ್ತು ನಾಡಿನ ದಮನಿತ ಜನತೆಯ ಹಿತಾಸಕ್ತಿಗಳನ್ನು ಮುಂದಕ್ಕೊಯ್ಯದೇ ವಿರೂಪಗೊಳಿಸಿವೆ. ಹಾಗಾಗಿ ಇದನ್ನು ಗಂಭೀರವಾಗಿ ಚರ್ಚಿಸುವ ಅಗತ್ಯ ಏರ್ಪಟ್ಟಿದೆ.

ಯಾವ ಪ್ರತಿಮೆಯ ಅಗತ್ಯವೂ ಇಲ್ಲ, ಮಹಾನ್ ದಾರ್ಶನಿಕರ ವಿಚಾರಗಳನ್ನು ಅಗತ್ಯವಿರುವಷ್ಟು ವಿಮರ್ಶೆಯೊಂದಿಗೆ ನಮ್ಮದಾಗಿಸಿಕೊಳ್ಳುವುದೇ ಅವರಿಗೆ ಸಲ್ಲಿಸಬಹುದಾದ ಗೌರವವೆಂದು ಭಾವಿಸಿರುವ ಕೆಲವರಿದ್ದಾರೆ. ಆದರೆ ಪ್ರತಿಮೆಗಳೂ, ರೂಪಕಗಳೂ, ಸಂಕೇತಗಳೂ, ಐಕಾನ್‌ಗಳೂ ಇಲ್ಲದ ಸಮಾಜವಾವುದೂ ಇಲ್ಲ. ನಾಯಕರು, ನಾಯಕಿಯರು, ತಾವು ಆರಾಧಿಸಿ ಅನುಕರಿಸಬಹುದಾದಂತಹ ದಾರ್ಶನಿಕರಿಗೆ ಎಲ್ಲಾ ಸಮಾಜಗಳು ದೊಡ್ಡ ಸ್ಥಾನವನ್ನು ಕೊಟ್ಟಿವೆ. ಕೆಲವೊಮ್ಮೆ ದೈವೀಕರಿಸಿವೆ. ಇತಿಹಾಸದಲ್ಲಿ ಹೀಗೆ ದೈವೀಕರಣಕ್ಕೊಳಪಟ್ಟವರಲ್ಲಿ ಕೆಲವರ ಕಥನಗಳು ಇತಿಹಾಸವೋ, ಪುರಾಣವೋ ಗೊತ್ತಾಗದಷ್ಟು ಬೆಳೆಸಲ್ಪಟ್ಟಿವೆ. ಒಟ್ಟಿನಲ್ಲಿ ನಾವು ಬಯಸುತ್ತೇವೋ ಇಲ್ಲವೋ, ಅದು ಸಮಾಜದ ಒಂದು ವಾಸ್ತವವಾಗಿ ಅಸ್ತಿತ್ವದಲ್ಲಿದೆ. ಇರುತ್ತದೆ. ಹೀಗಾಗಿ ಈ ವಾಸ್ತವದ ಹಿನ್ನೆಲೆಯಲ್ಲಿ ನಾವೇನು ನಿಲುವು ತೆಗೆದುಕೊಳ್ಳುತ್ತೇವೆ ಎಂಬ ಆಯ್ಕೆಯಷ್ಟೇ ನಮಗುಳಿದಿರುತ್ತದೆ.

ಆ ಲೆಕ್ಕದಲ್ಲಿ ನೋಡಿದರೆ, ಎಲ್ಲಾ ರೀತಿಯಿಂದಲೂ ಈ ನೆಲದ ಒಬ್ಬ ಐಕಾನ್ ಆಗಿರಲು ಬೇಕಾದ ಸಾಧನೆಯನ್ನು ಅಂಬೇಡ್ಕರ್‌ರು ನಿಸ್ಸಂದೇಹವಾಗಿ ಮಾಡಿದ್ದಾರೆ. ಅದರಲ್ಲೂ ದಲಿತ ಸಮುದಾಯವು ತನ್ನ ವಿಮೋಚನೆಯ ಹರಿಕಾರನೆಂದು ಅಂಬೇಡ್ಕರ್‌ರನ್ನು ಕಂಡಿರುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೂ 1975ರ ನಂತರ ದಲಿತ ಚಳವಳಿಯು ದೊಡ್ಡ ಪ್ರಮಾಣದಲ್ಲಿ ಬೆಳೆಯುವವರೆಗೆ ಸರ್ಕಾರಗಳು ಮತ್ತು ಸ್ಥಾಪಿತ ಹಿತಾಸಕ್ತಿಗಳು ಅದನ್ನು ಮಾನ್ಯ ಮಾಡಿರಲಿಲ್ಲ. ಮಹಾರಾಷ್ಟ್ರ ಮತ್ತು ಆ ನಂತರ ಕರ್ನಾಟಕದಲ್ಲಿ ಅಂಬೇಡ್ಕರ್ ಕೃತಿಗಳನ್ನು ಸರ್ಕಾರವು ಪ್ರಕಟಿಸಲು ಹಲವು ದಶಕಗಳು ಬೇಕಾದವು ಎಂಬುದೇ ಇದನ್ನು ತೋರಿಸುತ್ತದೆ.

ದಲಿತ ಚಳವಳಿಯ ಬೆಳವಣಿಗೆ ಮತ್ತು ದಲಿತ ಓಟ್‌ಬ್ಯಾಂಕ್‌ನ ಬೆಳವಣಿಗೆಯು ಅಂಬೇಡ್ಕರ್‌ರ ಮಹತ್ವವನ್ನು ಆಳುವ ಶಕ್ತಿಗಳೂ ಮಾನ್ಯ ಮಾಡಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿತು. ಇದು ಅಂಬೇಡ್ಕರ್‌ರ ಪ್ರತಿಮೆಗಳು ಆಯಕಟ್ಟಿನ ಜಾಗಗಳಲ್ಲಿ ಸ್ಥಾಪಿತವಾಗಲು ಕಾರಣವಾಯಿತು. ಅದೇ ಸಂದರ್ಭದಲ್ಲಿ ಅಂಬೇಡ್ಕರರು ಯಾವುದಕ್ಕಾಗಿ ರಾಜಿರಹಿತ ಹೋರಾಟ ನಡೆಸಿದರೋ, ತಮ್ಮ ಬದುಕಿನ ಕಡೆಯ ದಿನಗಳವರೆಗೂ ಅವಿರತವಾಗಿ ಶ್ರಮಿಸಿದರೋ, ಅದನ್ನು ಬಾಯಿಯಲ್ಲಿ ಹರಿಸುತ್ತಾ, ವಾಸ್ತವದಲ್ಲಿ ಜಾರಿಗೆ ತರದೇ ಇರುವುದೂ ಸರ್ಕಾರಗಳಿಗೆ ಸುಲಭವಾಯಿತು. ಅಂಬೇಡ್ಕರರ ಪ್ರತಿಮೆಗಳಿಗೆ ಮಾಲಾರ್ಪಣೆ ಮತ್ತು ಜಯಂತಿ ಆಚರಣೆಗಳನ್ನು, ಇವೇ ಸರ್ಕಾರಗಳು ನೆಪ ಮಾತ್ರಕ್ಕೆ ಮಾಡುತ್ತಾ ಕಾಲ ಕಳೆದಿದ್ದಾರೆನ್ನುವುದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ.


ಈ ವಿದ್ಯಮಾನದ ಜೊತೆ ಜೊತೆಗೇ ಅಂಬೇಡ್ಕರರು ಈ ದೇಶದಲ್ಲಿ ಅತ್ಯಂತ ಹೆಚ್ಚು ಆರಾಧನೆಗೊಳಗಾಗುವ ಐಕಾನ್ ಆಗಿ ಸ್ಥಿರಗೊಂಡರು. ಅಸ್ಪೃಶ್ಯ ಸಮುದಾಯಗಳು ಅದನ್ನು ಹೆಚ್ಚಾಗಿ ಮಾಡಿದರೂ, ಎಲ್ಲಾ ದಮನಿತ ಸಮುದಾಯಗಳ ಸ್ಫೂರ್ತಿಯ ಸೆಲೆಯಾಗಿ ಅಂಬೇಡ್ಕರ್‌ರಿಗೆ ವ್ಯಾಪಕ ಮನ್ನಣೆಯು ಬೆಳೆಯತೊಡಗಿತು. ಮೇಲ್ಜಾತಿಗಳ ಮತ್ತು ಬಲಪಂಥೀಯ ಶಕ್ತಿಗಳ ಸಿಟ್ಟಿಗೂ ಅಂಬೇಡ್ಕರರ ಪ್ರತಿಮೆಗಳು ಗುರಿಯಾದವು. ಚಪ್ಪಲಿ ಹಾರ ಹಾಕುವುದು, ವಿರೂಪಗೊಳಿಸುವುದನ್ನು ಅವರು ಮಾಡುವುದೂ ಮತ್ತು ದಲಿತ ಸಮುದಾಯ ಹಾಗೂ ಇತರ ಪ್ರಜ್ಞಾವಂತರು ಅದನ್ನು ವಿರೋಧಿಸಿ ಪ್ರತಿಭಟನೆ ಮಾಡುವುದೂ ಅದೆಷ್ಟೋ ಸಾರಿ ನಡೆದಿದೆ.

ವಿಧಾನಸೌಧದ ಮುಂಭಾಗದ ಮೆಟ್ರೋ ಕಾಮಗಾರಿಯ ಹಿನ್ನೆಲೆಯಲ್ಲಿ ಅಂಬೇಡ್ಕರ್ ಪ್ರತಿಮೆ ಸುತ್ತ 'ಸೃಷ್ಟಿಸಲಾಗಿರುವ' ವಿವಾದವನ್ನೂ ಇದೇ ಹಿನ್ನೆಲೆಯಲ್ಲೇ ನೋಡಬೇಕಿದೆ. ವಿಧಾನಸೌಧದ ಮುಂದೆ ಸ್ಥಾಪನೆಯಾಗಿರುವ ಪ್ರತಿಮೆಯು ದಲಿತರ ಆತ್ಮಾಭಿಮಾನದ ಸಂಕೇತವಾಗಿ, ಸಂವಿಧಾನದಲ್ಲಿ ದತ್ತವಾಗಿರುವ ಕೆಲವು ಹಕ್ಕುಗಳನ್ನು ಖಾತ್ರಿಗೊಳಿಸಿಕೊಳ್ಳುವ ಚಳವಳಿಗೆ ಸ್ಫೂರ್ತಿ ಕೊಡುವ ಮೂರ್ತಿಯಾಗಿ, ಸಂವಿಧಾನವನ್ನು ಕೈಯ್ಯಲ್ಲಿ ಹಿಡಿದಿರುವ ಬಾಬಾಸಾಹೇಬರಿದ್ದಾರೆಂದೂ ಭಾವಿಸಲಾಗಿದೆ. ಈ ಪ್ರತಿಮೆಗೆ ಆಗುವ ಹಾನಿಯು ಆತ್ಮಾಭಿಮಾನಕ್ಕೂ, ಸಂವಿಧಾನ ಬದ್ಧ ಸರ್ಕಾರದಲ್ಲಿ ತಮ್ಮ ಹಕ್ಕುಗಳಿಗೆ ಆಗುವ ಚ್ಯುತಿಗೆ ಪ್ರತೀಕವಾದುದೂ ಆಗಿರುತ್ತದೆನ್ನುವ ರೀತಿಯಲ್ಲಿ ದಲಿತ ಸಮುದಾಯವು ಪ್ರತಿಕ್ರಿಯಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಅವಮಾನ, ತಾರತಮ್ಯ ಹಾಗೂ ದೌರ್ಜನ್ಯಗಳನ್ನು ತನ್ನ ಸ್ಮೃತಿಯಲ್ಲಿ ಗಾಢವಾಗಿ ಹೊಂದಿರುವ ಜನಸಮುದಾಯವು, ತನಗೆ ಯಾವುದೋ ಪ್ರಮಾಣಕ್ಕೆ ದಕ್ಕಿರುವ ಹಕ್ಕುಗಳು ದುರ್ಬಲಗೊಳ್ಳುವುದರ ಸಂಕೇತ ಇದೂ ಎಂತಲೂ ತಿಳಿದುಕೊಂಡು ಅಭದ್ರತೆಯನ್ನು ಅನುಭವಿಸಲಿಕ್ಕೂ ಸಾಧ್ಯವಿದೆ. ಅಲ್ಲಲ್ಲಿ ಅಂಬೇಡ್ಕರರ ಪ್ರತಿಮೆಯನ್ನು ಹಾನಿಗೊಳಿಸಿರುವ ಪ್ರಕರಣಗಳೂ ದಲಿತ ಸಮುದಾಯವನ್ನು ಕೆಣಕಿದೆ ಹಾಗೂ ಜಾಗೃತರನ್ನಾಗಿಸಿದೆ.

ಈ ನೆಲೆಯಲ್ಲಿ ಮೆಟ್ರೋ ಕಾಮಗಾರಿಗೆ 'ಅಡ್ಡಿ'ಯಾಗಿರುವ ಅಂಬೇಡ್ಕರರ ಪ್ರತಿಮೆಯ ಸ್ಥಳಾಂತರಕ್ಕೆ ಬಂದಿರುವ ವಿರೋಧವನ್ನು ನೋಡಬಹುದು. ಆದರೆ ಇದಕ್ಕೆ ಬೇರೆ ಆಯಾಮಗಳೂ ಇವೆ. ನಗರದಲ್ಲಿ ಸಂಚಾರ ಸುಗಮಗೊಳಿಸಲೆಂದು ಯೋಜಿತವಾಗಿರುವ ಒಂದು ಸಂಪರ್ಕ ಜಾಲದ ಕಾಮಗಾರಿಯನ್ನು ವರ್ಷಾನುಗಟ್ಟಲೆ ವಿಳಂಬಗೊಳಿಸುವುದಾದರೆ, ಅದಕ್ಕಾಗಿ ನೂರಾರು ಕೋಟಿ (ಈ ವರ್ಷ ಮತ್ತು ನೂರು ಕೋಟಿಗಳು ಉತ್ಪ್ರೇಕ್ಷೆಯೆಂದು ಸಮಾಜ ಕಲ್ಯಾಣ ಇಲಾಖೆಯು ಮೆಟ್ರೋ ನಿಗಮಕ್ಕೆದುರಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸಿದೆ) ಹೆಚ್ಚಿಗೆ ವ್ಯಯವಾಗುವುದಾದರೆ ತಾತ್ಕಾಲಿಕವಾಗಿ ಬೇರೆಡೆಗೆ ಸ್ಥಳಾಂತರಿಸಿದರೆ ತಪ್ಪೇನು ಎಂಬ ಪ್ರಶ್ನೆಯೂ ಹಲವರಲ್ಲಿದೆ. ಅಲ್ಲಿಂದ ತಾತ್ಕಾಲಿಕವಾಗಿ ತೆಗೆಯಲ್ಪಡುವ ಪ್ರತಿಮೆಯನ್ನು ಮತ್ತೆ ಅದೇ ಜಾಗದಲ್ಲಿ ಅಥವಾ ಮತ್ತೊಂದು 'ಮಹತ್ವದ' ಜಾಗದಲ್ಲಿ ಪ್ರತಿಷ್ಠಾಪಿಸದಿರುವ ಧೈರ್ಯವನ್ನು ಯಾವುದೇ ಸರ್ಕಾರವು ಮಾಡುತ್ತದೆಯಾ? ಅಂಬೇಡ್ಕರರ ಮೇಲಣ ಗೌರವದಿಂದಲ್ಲವಾದರೂ, ಸರ್ಕಾರವನ್ನು ನಡೆಸುವ ಪಕ್ಷಗಳು ದಲಿತ ಓಟ್‌ಬ್ಯಾಂಕಿನ ದೃಷ್ಟಿಯಿಂದಲಾದರೂ ಅಂತಹ ಕೆಲಸವನ್ನು ಮಾಡುವುದಿಲ್ಲ ಎಂಬುದು ಖಚಿತ.

ಹೀಗಿದ್ದ ಮೇಲೆ ದಲಿತ ಸಮುದಾಯದ ಪ್ರಜ್ಞಾವಂತರೂ ಮೇಲೆ ಹೇಳಲಾದ ಕಾರಣಗಳಿಗಾಗಿಯಷ್ಟೇ ಈ ಸ್ಥಳಾಂತರವನ್ನು ತೀವ್ರವಾಗಿ ವಿರೋಧಿಸಿದರು ಮತ್ತು ಅದಕ್ಕಾಗಿಯೇ ಅದರ ಸ್ಥಳಾಂತರ ವಿಳಂಬವಾಯಿತೆಂದು ಹೇಳುವುದು ಕಷ್ಟ. ಏಕೆಂದರೆ ಅಂಬೇಡ್ಕರ್‌ರ ಪ್ರತಿಮೆಯನ್ನು ಮಹತ್ವವಲ್ಲದ ಜಾಗಕ್ಕೆ ಎತ್ತಿಹಾಕಿಬಿಡುತ್ತಾರೆ ಎಂದು ಯಾರೂ ಅಂದುಕೊಂಡಿರಲಾರರು. ಆದರೆ ಈ ರೀತಿಯಾಗಿ ಎಲ್ಲಾ ದಲಿತ ಸಂಘಟನೆಗಳಿಂದ ಈ ಸ್ಥಳಾಂತರಕ್ಕೆ ತೀವ್ರ ವಿರೋಧವಿದೆ ಎಂದು ಬಿಂಬಿಸುವ ಕೆಲಸದಲ್ಲೇ ಒಂದು ಹುನ್ನಾರವಿದೆ ಎನಿಸುತ್ತದೆ. ಅಂತಹ ವಿರೋಧವಿರುವವರನ್ನು ಕರೆದು, ಮೆಟ್ರೋ ಕಾಮಗಾರಿಯ ವಿವರಗಳನ್ನು ಮುಂದಿಟ್ಟು, ಸ್ಥಳಾಂತರ ಮತ್ತು ಪುನರ್‌ಸ್ಥಾಪನೆಯ ಕುರಿತು ಸ್ಪಷ್ಟವಾದ ಯೋಜನೆಯನ್ನು ಮುಂದಿಟ್ಟಿದ್ದರೆ ಅದಕ್ಕೆ ದೊಡ್ಡ ವಿರೋಧವೇನೂ ಬರುತ್ತಿರಲಿಲ್ಲ. ತಮ್ಮದೇ ಹಿತಾಸಕ್ತಿಗೆ ಯಾರಾದರೂ ಅಂತಹ ವಿರೋಧ ಮಾಡಿದ್ದರೆ, ಮಿಕ್ಕವರನ್ನು ಮನವೊಲಿಸುವ ಮೂಲಕ ಮುಂದಕ್ಕೆ ಸಾಗಬಹುದಿತ್ತು.

ಆದರೂ ಸರ್ಕಾರವು ಉದ್ದೇಶಪೂರ್ವಕವಾಗಿ 'ದಲಿತ ಸಂಘಟನೆಗಳು ಮೆಟ್ರೋ ಕಾಮಗಾರಿಯ ಮೇಲ್ಭಾಗದಲ್ಲಿ



ಬರುವ ಅಂಬೇಡ್ಕರ್ ಪ್ರತಿಮೆ ಸ್ಥಳಾಂತರಕ್ಕೆ' ವಿರೋಧಿಸಿದ್ದಾವೆ ಎಂದು ಬಿಂಬಿಸುವ ಮೂಲಕ ಬಿಜೆಪಿ ಸರ್ಕಾರಕ್ಕೆ ಲಾಭವಾಗಿದೆ. ಪ್ರತಿಮೆಯನ್ನು ತಾತ್ಕಾಲಿಕವಾಗಿ ಸ್ಥಳಾಂತರ ಮಾಡುವುದಕ್ಕೂ ಬಿಡದೆ ದಲಿತ ಸಂಘಟನೆಗಳು ಸುಮ್ಮನೇ ತೊಂದರೆ ಕೊಡುತ್ತಿದ್ದಾರೆ ಎಂದು ಸಮಾಜದಲ್ಲಿ ಬಿಂಬಿತವಾಗುವುದರಿಂದ ಮೇಲ್ಜಾತಿಗಳಿಗೇ ಲಾಭವಾಗುತ್ತದೆ. ಮೆಟ್ರೋವನ್ನು ಎದುರು ನೋಡುತ್ತಿರುವ ಬೆಂಗಳೂರಿನ ಮಧ್ಯಮ ವರ್ಗದ 'ನಾಗರಿಕರ' ಮನಸ್ಸಿನಲ್ಲಿ ಇದನ್ನು ಬಿತ್ತುವುದರಿಂದ ಮೆಟ್ರೋ ಅಂಶ ಒಂದಾದರೆ, ಇನ್ನೂ ಒಂದು ಸಾಧನೆಯೂ ಸಂಘಪರಿವಾರದ ಸಿದ್ಧಾಂತಕ್ಕೆ ಲಾಭ ತಂದುಕೊಡುತ್ತದೆ. ವಿಚಾರ ಹಾಗೂ ಆಶಯಗಳನ್ನು ಬಿಟ್ಟು ಪ್ರತಿಮೆಗೆ ಗಂಟು ಬೀಳುವವರು ಇವರು ಎಂದು ಸಮಾಜದ ಮುಂದೆ ಬಿಂಬಿಸಿದಂತಾಗುತ್ತದೆ.

ಈ ಲಾಭಗಳ ಲೆಕ್ಕಾಚಾರವಿಲ್ಲದಿದ್ದರೆ, ಪ್ರತಿಮೆ ಸ್ಥಳಾಂತರದ ವಿರೋಧಿಗಳನ್ನು ಮನವೊಲಿಸುವುದು ಸರ್ಕಾರಕ್ಕೆ ಕಷ್ಟವೇನಾಗಿರಲಿಲ್ಲ ಎಂದೇ ಹೇಳಬೇಕಾಗುತ್ತದೆ. ಸಕಾರಣಗಳಿಗಾಗಿ ಇದನ್ನು ವಿರೋಧಿಸುವವರು, ವಿನಾಕಾರಣ ವಿರೋಧಿಸುವವರು ಇದ್ದಂತೆಯೇ 'ತಾತ್ಕಾಲಿಕ ಸ್ಥಳಾಂತರಕ್ಕೆ ನಮ್ಮ ಅಭ್ಯಂತರವೇನಿಲ್ಲ' ಎಂದು ಹೇಳುತ್ತಿ[...] ಸಂಘಟನೆಗಳವರೂ ಇದ್ದರು, ಇದ್ದಾರೆ. ಇಷ್ಟ[...] ಅಂಬೇಡ್ಕರರನ್ನು ದಲಿತ ಸಮುದಾಯಕ್ಕೆ[...] ಸಂಘಟನೆಗಳಿಗೆ ಸೀಮಿತಗೊಳಿಸುವುದೂ ಇದರಿಂ[...] ಒಂದು ಮತ್ತೊಂದು ನಕಾರಾತ್ಮಕ ಉಪ ಉತ್ಪ[...]

ಹೀಗಾಗಿ ಪ್ರತಿಮೆ ಸ್ಥಳಾಂತರವೆನ್ನುವುದು 'ವಿವ[...] ಮಾರ್ಪಟ್ಟಿತು. ಕೊನೆಗೆ ಅಂಬೇಡ್ಕರ್‌ರ[...] ಸ್ಥಳಾಂತರವಾಗದೇ ಇದ್ದರೇನೇ ಅದಕ್ಕೆ ಹಾನಿಯ[...] ಎಂದು ಹೇಳಲಾಯಿತು. ಪ್ರತಿಮೆಯ ಕೆಳಗಿನ 60 ಮಿ.ಮೀ.ನಷ್ಟು ಕುಸಿದಿದೆ ಎಂಬ [...] ಪ್ರಚಾರವಾಯಿತು. ಅದನ್ನೇ ಕೋರ್ಟ್‌ಗೆ ಹೇಳಿ[...] ಸ್ಥಳಾಂತರವಾಗದೇ ಇದ್ದರೆ, ಕಾಮಗಾರಿಯಿಂದ[...] ಹಾನಿಯಾಗುವುದರಿಂದ ಸ್ಥಳಾಂತರ ಮಾಡಿ' ಎಂಬ[...] ಪಡೆದುಕೊಳ್ಳಲಾಯಿತು. ಭೂಮಿ ಕುಸಿ[...] ತೊಂದರೆಯಾಗದಿರಲಿ ಎನ್ನುವ ಕಾರಣಕ್ಕೆ ಬೆಲ[...] ಹಾಕಿ ಪ್ರತಿಮೆಯನ್ನು ತೂಗಲಾಯಿತು.

ಇವೆಲ್ಲಕ್ಕೂ ಕಳಶವಿಟ್ಟಂತೆ ಈಗ ಇನ[...] ಆಘಾತಕಾರಿ ಸುದ್ದಿಯನ್ನು ತೇಲಿಬಿಡಲಾಗಿದೆ. ಅದ[...] ತಾತ್ಕಾಲಿಕವಾಗಿ ವಿಧಾನಸೌಧದ ಪಶ್ಚಿಮ ಭಾಗಕ್ಕೆ ಸ[...] ಮಾಡುವುದರಿಂದ 'ವಾಸ್ತು' ಸಮಸ್ಯೆ ಆಗುತ್ತದೆಂದು[...] ಸಂಘಟನೆಗಳು' ಆಕ್ಷೇಪಣೆ ಎತ್ತಿವೆಯಂತೆ. ಯಾವ[...] ಸಂಘಟನೆಗಳು ಎಂಬ ಬಗ್ಗೆ ಸುದ್ದಿಯಲ್ಲಿ ವಿವ[...] ಆರೆಸ್ಸೆಸ್‌ಅನ್ನು ಬೆಂಬಲಿಸುವ ಒಂದು ದಲಿತ ಲೆಟ[...] ಸಂಘಟನೆಗೂ ದಲಿತ ಚಳವಳಿಗೂ ಯಾವ ಸಂಬ[...] ಇಲ್ಲ, ಅದನ್ನು ಹೊರತುಪಡಿಸಿದರೆ ವಾಸ್ತುವೆಂಬ ಮ[...] ಎತ್ತಿ ಹಿಡಿಯುವ ನಿಜವಾದ ದಲಿತ ಸಂಘಟ[...] ರಾಜ್ಯದಲ್ಲಿ ಇಲ್ಲ. ಏನೇ ಭಿನ್ನಾಭಿಪ್ರಾಯ[...] ಅಸಮಾಧಾನಗಳೂ ಇರಬಹುದಾದರೂ, ಕೋಮು[...] ವಿಚಾರದಲ್ಲಿ ಮತ್ತು ವೈದಿಕಶಾಹಿ ಮೌಢ್ಯಗಳ ವಿಚಾ[...] ಈ ರಾಜ್ಯದ ದಲಿತ ಸಂಘಟನೆಗಳು ಹೆಚ್ಚು[...] ಒಂದೇ ನಿಲುವನ್ನು ಹೊಂದಿವೆ.

ಹೀಗಿದ್ದೂ ಇಂತಹದೊಂದು ಸುದ್ದಿ[...] ಹರಿಯಬಿಡುವುದರಿಂದ ಅಂಬೇಡ್ಕರರ ಚಿಂತ[...] ಅಮಾನ್ಯವಾಗುತ್ತವೆ ಮತ್ತು ವಾಸ್ತು ಮಾನ್ಯವಾಗುತ್ತದ[...] ಅರ್ಥವಾಗದ ದಲಿತ ಸಂಘಟನೆ ಯಾವುದಾದರೂ[...] ಅದನ್ನು ವಿರೋಧಿಸಲು ಯಾವ ಹಿಂಜರಿಕ[...] ಇರಬೇಕಿಲ್ಲ. ಅದಕ್ಕಿಂತ ಮುಖ್ಯವಾಗಿ ಇದರ ಹಿಂದೆ[...] ಹುನ್ನಾರವನ್ನು ಖಂಡಿಸುವುದರಲ್ಲಿ ಎಲ್ಲಾ ದ[...] ಸಮುದಾಯಗಳ ಸಂಘಟನೆಗಳು, ಪ್ರಗತಿ[...] ಒಂದಾಗಲೇಬೇಕಿದೆ.

ಅಂಬೇಡ್ಕರ್‌ರ ಪ್ರತಿಮೆಯನ್ನು ವಿಧಾನ[...] ಯಾವುದೇ ಪ್ರಮುಖ ಭಾಗಕ್ಕೆ ಸ್ಥಳಾಂತರಿಸಲಿ[...] ಮೆಟ್ರೋ ಕಾಮಗಾರಿ ಮುಗಿದ ಮೇಲೆ ಮೊ[...] ಜಾಗದಲ್ಲಿ ಅಥವಾ ಅದರ ಪಕ್ಕದಲ್ಲಿ ಸೂಕ್ತವ[...] ಜಾಗದಲ್ಲಿ ಸ್ಥಾಪಿಸಲಿ - ಇದು ಬಹುಶಃ ಸರ[...] ಪರಿಹಾರ. ನಿಜಕ್ಕೂ ಆಗಬೇಕಾದ್ದು ಸಂವಿಧಾನದ[...] ನಿರ್ದೇಶನ ತತ್ವಗಳಲ್ಲಿ ವ್ಯಕ್ತವಾಗಿರುವ ಬಾಬಾಸಾ[...] ಆಶಯಗಳು ಜಾರಿಯಾಗಬೇಕು; ಸಂವಿಧಾನ[...] ಸಭೆಯೊಳಗಿನ ಕೆಲವು ಪ್ರತಿಗಾಮಿಗಳ ತಡೆಯಿ[...] ಅಂಬೇಡ್ಕರರು ಬರೆದಿದ್ದ 'ರಾಜ್ಯಗಳು ಮತ್ತು ಅಲ್ಪಸಂ[...] (states and minorities)' ಪುಸ್ತಕದಲ್ಲಿನ ಆಶ[...] ಈಡೇರಲು ಕಾನೂನುಗಳ ತಿದ್ದುಪಡಿಯಾಗಬೇಕು. [...] ಮಾತ್ರವೇ ಅಂಬೇಡ್ಕರರಿಗೆ ಸಲ್ಲಬಹುದಾದ ನಿಜ[...] ಗೌರವವಾಗಿರುತ್ತದೆ.

ಮುಳುಗೇಳುವ ಪ್ರಶ್ನೆಗಳು- ಒಂದು ಪ್ರತಿಸ್ಪಂದನ

ಮಾರ್ಚ್ 27, 2013ರ ವಿಶೇಷ ಸಂಚಿಕೆಯ 19ನೇ ಪುಟದಲ್ಲಿ ಪ್ರಕಟವಾಗಿರುವ ನೀಳ್ಗವನ 'ಮುಳುಗೇಳುವ ಪ್ರಶ್ನೆಗಳು' -ನನ್ನಲ್ಲಿ ಪ್ರತಿಸ್ಪಂದನೆಯ ಅಲೆಗಳನ್ನೇ ಎಬ್ಬಿಸಿದೆ. ಪಶ್ಚಿಮ ಘಟ್ಟದ ಬಿ.ಜಿ.ಕೆ. ಮುಂಜಾನೆ ಮತ್ತು ಸಂಜೆ ಹೊತ್ತುಗಳಲ್ಲಿ ಏಳುವ ಮುಳುಗುವ ಸೂರ್ಯಚಂದ್ರರ ಚಲನೆಗಳನ್ನು ಗಮನಿಸುತ್ತಾ ಈ ಕವನ ಬರೆದಿರಬೇಕು. ತನ್ನ ಸೂಚ್ಯ ಮತ್ತು ಪ್ರತಿಮಾ ವಿಧಾನದಿಂದಾಗಿ ಈ ಕವನ ಅತ್ಯುತ್ತಮವಾಗಿ ಒಡಮೂಡಿ ಬಂದಿದೆ.

ಮೊದಲ ಚರಣದಲ್ಲಿ 'ನಾನು' ಸರ್ವನಾಮದೊಂದಿಗೆ ಹಲವು ಮನ ಕಲಕುವ ಪ್ರಶ್ನೆಗಳನ್ನು ಬಿ.ಜಿ.ಕೆ. ಹೇಳಿದ್ದಾರೆ.

"ನಾನು ಎಲ್ಲಿ ಮುಳುಗಿ ಎಲ್ಲಿ ಏಳುತ್ತಿದ್ದೇನೆ?
ಎಲ್ಲಿ ಎದ್ದು ಎಲ್ಲಿ ಮುಳುಗುತ್ತಿದ್ದೇನೆ?
ವಿಷಯ ಗಂಭೀರವಾಗಿದೆ...."

ವಿಷಯ ನಿಜಕ್ಕೂ ಗಂಭೀರವಾಗಿದೆ. ನೇರವಾಗಿ ಏನನ್ನು ಹೇಳದೆ ದ್ವಂದ್ವಮಾಸ ಚಿಂತನೆಯ ಮೂಲವನ್ನೇ ಕವಿ ಮೀಟಿದ್ದಾರೆ. ಇದು ವ್ಯಕ್ತಿಯೊಬ್ಬನ ಮುಳುಗೇಳುವಿಕೆಯೂ ಆಗಬಹುದು; ಸಮಾಜವೊಂದರ ಏಳುಬೀಳುಗಳೂ ಆಗಬಹುದು- ಯಾವುದೂ ಸರಳವಾಗಿಲ್ಲ.

ಇದು ವೈಜ್ಞಾನಿಕ ಪ್ರಶ್ನೆಯೂ ಹೌದು. "ಸೂರ್ಯ ಮುಳುಗಿದ್ದು ಎಲ್ಲಿಗೆ? ಎದ್ದಿದ್ದು ಎಲ್ಲಿಗೆ?" ಪ್ರಶ್ನೆಯೊಳಗಿನ ಪ್ರಶ್ನೆಗಳು.

"ಮುಳುಗಿದಾಗ ನನಗೆ ಉಸಿರುಕಟ್ಟಿಲ್ಲ,
ಆದರೆ ಬಿಡುಗಡೆಯಾಗಿದೆ"

ಎನ್ನುವ ಸಾಲು ಮುಳುಗುವಿಕೆಯ ಪರಿಕಲ್ಪನೆಯನ್ನೇ ತಲೆಕೆಳಗು ಮಾಡಿದೆ. ಶೋಷಿತರು ಪ್ರತಿಭಟಿಸಿದಾಗ ಅವರು ಕಳೆದುಕೊಳ್ಳುವುದು ತಮ್ಮ ಬಂಧನದ ಸರಪಳಿಯನ್ನು ಮಾತ್ರ ಎನ್ನುವ ಕಾರ್ಲ್ ಮಾರ್ಕ್ಸ್‌ನ ಮಾತುಗಳನ್ನು ನೆನಪಿಸುತ್ತದೆ. ಅದೇ ರೀತಿ- ಊಳಿಗಮಾನ್ಯ ಮತ್ತು ಬಂಡವಾಳಶಾಹಿ ವ್ಯವಸ್ಥೆಯ 'ಬಂಧನ'ಗಳೇ- 'ಸಮ ಸಮಾಜ'ದ ಬಿಡುಗಡೆಯ ದಾರಿಗಳಾಗಿರಬಹುದಲ್ಲ? ಎಷ್ಟೊಂದು ಪ್ರಶ್ನೆಗಳನ್ನು ಈ ಸಾಲು ಓದುಗನಲ್ಲಿ ಎತ್ತುತ್ತವೆ.

"ಮುಳುಗುವುದು ಬದುಕುವುದಕ್ಕೆ
ಬಲಾತ್ಕಾರವಲ್ಲ- ಅನಿವಾರ್ಯವೆಂದು ಮಾತ್ರ ಅನ್ನಿಸುತ್ತಿದೆ!"

ಇಲ್ಲಿ "ಮುಳುಗುವಿಕೆ"ಗೆ ಜೀವನ ಪರವಾದ [...] ಸ್ಫುರಿಸುತ್ತಾರೆ. ಜೀವ ತೆಗೆಯುತ್ತದೆ ಎಂದು ಭೀತಿ ಹುಟ್ಟಿ[...] ಜೀವ ನೀಡುತ್ತದೆ ಎನ್ನುವ 'ಜೀವ ಸೆಲೆ'[...] ಮಾರ್ಪಟಾಗಿದೆ. ಎಂತಹಾ ಒಳನೋಟ!

ಈ ರೀತಿ 7 ಚರಣಗಳ ಪ್ರತಿ ಸಾಲುಗಳು [...] ವಿಶೇಷ ಭಾವಸ್ಪಂದನವನ್ನು ಉಂಟು ಮಾಡಿವೆ. ಇದರ[...] ಅನುರಣನ ಶಕ್ತಿಯಿಂದಾಗಿ- ಒಪ್ಪಿಕೊಂಡ ಮೌಲ್ಯಗ[...] ಮತ್ತೆ ಮರು ಪರೀಕ್ಷೆಗೆ ಒಳಪಡಿಸಿಕೊಳ್ಳಬೇಕು [...] ತುಡಿತ ಉಂಟಾಗುತ್ತಿದೆ.


ಮಲೆನಾಡಿನ ಪಶ್ಚಿಮಘಟ್ಟದ ಕವಿ ಬಿ.ಜಿ.ಕೆ. [...] ತಾತ್ವಿಕ ಚರ್ಚೆಗೆ ಒಳಪಡಬಹುದಾದ, ಆದರೆ [...] ಒಣ ಬೌದ್ಧಿಕ ಚರ್ಚೆಗೆ ಹೋಗದ, ಕವನವೊಂ[...] ನಮ್ಮಂತವರನ್ನು ಯೋಚನೆಗೆ ಹಚ್ಚಲೆಂದೇ ಬರೆದ ಹಾ[...]

ನಿಜಕ್ಕೂ ಈ 'ಕವನ'ದ ಬಗ್ಗೆ ಹೇಳಬೇಕೆನಿಸು[...]

"ಮುಳುಗಿದ ಬೀಜ ಎದ್ದಿದ್ದು ಹೇಗೆ?
ಮುಳುಗಿದ ಸೋಲು ಕಂಡಿದ್ದು ಹೇಗೆ?"

- ಹಯ[...]

ತೆರಿಗೆ ಕಳ್ಳರಿಗೆ ಕೈಕೊಟ್ಟ ದೇವರು



• ಗೌರಿ ಲಂಕೇಶ್
editorlankesh@gmail.com

ಹಿಂದೂ ಎಂಬುದು ಒಂದು ಧರ್ಮವೇ ಅಲ್ಲ, ಹಿಂದೂ ಎಂದು ನಂಬಿರುವ ಜನ ಕೂಡ ಒಂದು ...ಷ್ಟ ಧಾರ್ಮಿಕ ಸಮುದಾಯಕ್ಕೆ ಸೇರಿದವರೂ ಅಲ್ಲ. ...ಂದರೆ 'ಸಮುದಾಯ' ಎಂಬ ಪದದ ಅರ್ಥ ಒಂದು ...ವಾಸಿಸುವ, ಒಂದೇ ರೀತಿಯ ಕಾನೂನು ಮತ್ತು ...ಧನೆಗೆ ಒಳಪಡುವ, ಸಮಾನ ಹಕ್ಕು ಮತ್ತು ...ತ್ತುಗಳನ್ನು ಹೊಂದಿರುವವರು ಎಂಬುದಾಗಿದೆ. ಈ ...ಲ್ಲಿ ಕ್ರೈಸ್ತ ಮತ್ತು ಇಸ್ಲಾಮ್‌ಅನ್ನು ಧರ್ಮಗಳು ಎಂದು ...ವಿಸಬಹುದೇ ಹೊರತು ಹಿಂದೂ ಮತವನ್ನಲ್ಲ. ...ವಿಧ ದೇವರುಗಳನ್ನು ವಿವಿಧ ರೀತಿಗಳಲ್ಲಿ ಪೂಜಿಸುವ,



...ಸಂಸ್ಕಾರಗಳನ್ನು ಮತ್ತು ನೈತಿಕ ನಿಯಮಗಳನ್ನು ...ದಿರುವ ಹಲವಾರು ಸಮುದಾಯಗಳನ್ನು ಹಿಂದೂ ...ಮ ಕರೆಯಲಾಗುತ್ತಿದೆ. ಈ ಹಿಂದೂ ಮತದಲ್ಲಿ ... ಮಾಡುವುದೂ ಕಡ್ಡಾಯವಲ್ಲ, ಹಿಂದೂ ಮತದಲ್ಲಿ ...ನ್ನವಾದ ಅಭಿಪ್ರಾಯಗಳನ್ನು ಮತ್ತು ಸಂಪ್ರದಾಯಗಳನ್ನು ...ದಿರುವ ಜನರಿದ್ದಾರೆ. ಅವರೆಲ್ಲರ ನಡುವೆ ಹಿಂದೂ ...ರ ಮೂಲ ಸೂತ್ರದ ಬಗ್ಗೆ ಒಂದಿಷ್ಟು ಅಸ್ಪಷ್ಟ ನಂಬಿಕೆ ...ಮೇ ಹೊರತು ಅವರೆಲ್ಲರ ನಡುವೆ ಸರ್ವಸಮಾನ ...ದ್ದು ಇಲ್ಲವೇ ಇಲ್ಲ ಎನ್ನಬಹುದು. ಈ ಎಲ್ಲ ...ಗಳಿಗೆ ತಾಂತ್ರಿಕವಾಗಿ ಹಿಂದೂ ಎಂಬುದು ಒಂದು ...ವೂ ಅಲ್ಲ, ಒಂದು ಧಾರ್ಮಿಕ ಸಮುದಾಯವೂ ...ಎಂದೇ ಅರ್ಥೈಸಬೇಕಾಗುತ್ತದೆ...

... ಇತ್ತೀಚೆಗೆ ಇಂತಹ ಮಾತುಗಳನ್ನು ಆಡಿರುವುದು ...ದೂ ಧರ್ಮದ ಸ್ಥಾಪಕ ಯಾರು? ಇದರ ಅಪ್ಪ ... ಯಾರು? ಇದರ ಪವಿತ್ರ ಗ್ರಂಥ ಯಾವುದು?' ...ಲ್ಲ ಪ್ರಶ್ನಿಸಿದ 'ಹುಚ್ಚಿ'ಯೊಬ್ಬಳಲ್ಲ! ಬದಲಾಗಿ ಭಾರತ ...ರದ ಭಾಗವಾಗಿರುವ ಆದಾಯ ತೆರಿಗೆ ಇಲಾಖೆಯ ... ಮಂಡಳಿ!!

...ದು ಆದದ್ದು ಮಹಾರಾಷ್ಟ್ರದಲ್ಲಿ, ಅದೂ ಹಿಂದೂತ್ವ ... ರಾಜಕೀಯ ಅಸ್ತ್ರವನ್ನು ಬಳಸಿ ತಮ್ಮ ರಾಜಕೀಯ ...ಯನ್ನು ಬೇಯಿಸಿಕೊಳ್ಳುತ್ತಿರುವ ಚೆಡ್ಡಿಗಳ ಕರ್ಮ ...ಮಿಯೂ, ಕೇಂದ್ರ ಕಾರಸ್ಥಾನವೂ ಆದ ನಾಗಪುರ ನಗರದಲ್ಲಿ ಎಂಬುದೇ ಸೋಜಿಗದ ಸಂಗತಿ.

...ದು ನಡೆದದ್ದು ಹೀಗೆ:

...ಅದೇ ನಾಗಪುರದಲ್ಲಿ ಶಿವ ಮಂದಿರ ದೇವಸ್ಥಾನದ ... ಸಮಿತಿ ಸಂಸ್ಥಾನ ಎಂಬುದೊಂದು ಇದೆ. ಇದು ...ರಲ್ಲಿ ತನ್ನ ಆರ್ಥಿಕ ವಹಿವಾಟಿನ ಲೆಕ್ಕಗಳನ್ನು ಆ ...ದ ತೆರಿಗೆ ಇಲಾಖೆಗೆ ಸಲ್ಲಿಸಿತ್ತು. ಮಾತ್ರವಲ್ಲ ...ತೀತವಾಗಿ ತಾನು ಯೋಗ ಮತ್ತು ಹೋಲಿಗೆ ...ತಿಯನ್ನು ನೀಡುತ್ತಿರುವುದಾಗಿಯೂ, ಉಚಿತವಾಗಿ ...ಗಳನ್ನು ವಿತರಿಸಿರುವುದಾಗಿಯೂ, ಜೊತೆಗೆ ಕಟ್ಟಡದ ...ಿ, ಅದರಲ್ಲಿರುವ ವಿಗ್ರಹಗಳ ಪೂಜೆ ಇತ್ಯಾದಿಗಳಿಗೆ ...ವರ್ಷ ರೂಪಾಯಿ 82 ಸಾವಿರಕ್ಕಿಂತಲೂ ಹೆಚ್ಚು ...ವನ್ನು ವೆಚ್ಚ ಮಾಡಿರುವುದಾಗಿಯೂ, ಇವೆಲ್ಲ ಧಾರ್ಮಿಕ ...ವಟಿಕೆಗಳು ಆಗಿರದೆ ಸಮಾಜ ಸೇವಾ ಕಾರ್ಯಗಳಾಗಿರು



...ಂದ 1961ರ ತೆರಿಗೆ ಕಾನೂನಿನಡಿ ತನಗೆ ವಿನಾಯತಿ ...ಬೇಕೆಂದು ಸಂಸ್ಥಾನ ಕೋರಿತ್ತು.

...ಆದರೆ ಮಹಾರಾಷ್ಟ್ರದ ತೆರಿಗೆ ಇಲಾಖೆಯು ಇದನ್ನು ...ಕರಿಸಿತ್ತು, ನಿಯಮದ ಪ್ರಕಾರ ಒಂದು ವರ್ಷದ ...ಕ ವಹಿವಾಟಿನಲ್ಲಿ ಶೇಕಡ ಐದಕ್ಕಿಂತಲೂ ಹೆಚ್ಚು ...ವನ್ನು ಜಾತ್ಯತೀತವಾಗಿ ವೆಚ್ಚ ಮಾಡದೆ ಒಂದು ನಿರ್ದಿಷ್ಟ ಧರ್ಮದ ಚಟುವಟಿಕೆಗಳಿಗೆ ವ್ಯಯ ಮಾಡಿದ್ದರಿಂದ ತೆರಿಗೆ ವಿನಾಯತಿಯನ್ನು ಕೊಡಲಾಗುವುದಿಲ್ಲ ಎಂದು ಹೇಳಿತ್ತು.

ಇದನ್ನು ಪ್ರಶ್ನಿಸಿ ಆ ಸಂಸ್ಥಾನವು ಆದಾಯ ತೆರಿಗೆ ಇಲಾಖೆಯ ನ್ಯಾಯ ಮಂಡಲಿಯ ಮುಂದೆ ಅರ್ಜಿ ಸಲ್ಲಿಸಿತ್ತು. ಆ ಅರ್ಜಿಯಲ್ಲಿ ಸಮಿತಿಯು ತಮ್ಮ ದೇವಸ್ಥಾನ ಎಲ್ಲ ಜಾತಿ, ವರ್ಗ ಮತ್ತು ಧರ್ಮದ ಜನರಿಗೆ ತೆರೆದಿದೆ ಎಂದೂ; ವಿಗ್ರಹಗಳನ್ನು ಸ್ಥಾಪಿಸುವುದಾಗಲಿ, ಅವುಗಳನ್ನು ಪೂಜಿಸುವುದಾಗಲಿ ಧಾರ್ಮಿಕ ಚಟುವಟಿಕೆ ಆಗುವುದಿಲ್ಲವೆಂದೂ; ಶಿವ, ಹನುಮಂತ ಮತ್ತು ದುರ್ಗೆಯನ್ನು ಪೂಜಿಸುವುದನ್ನಾಗಲಿ, ದೇವಸ್ಥಾನದ ಜೀರ್ಣೋದ್ಧಾರದ ವೆಚ್ಚವನ್ನಾಗಲಿ ಧಾರ್ಮಿಕ ಚಟುವಟಿಕೆ ಎಂದು ಪರಿಗಣಿಸಬಾರದೆಂದೂ; ಉಚಿತ ಊಟ ಮತ್ತು ಹಬ್ಬಹರಿದಿನಗಳಲ್ಲಿ ವಿಶೇಷ ಪೂಜೆಗಳಿಗೆ ಮತ್ತು ದಿನನಿತ್ಯದ ಕಾರ್ಯಗಳಿಗೆ ವೆಚ್ಚವಾದ ಹಣವನ್ನು ಧಾರ್ಮಿಕ ಚಟುವಟಿಕೆ ಎಂದು ಪರಿಗಣಿಸಬಾರದೆಂದೂ ಕೋರಿತ್ತು! ಜೊತೆಗೆ ತನ್ನ ಎಲ್ಲ ಚಟುವಟಿಕೆಗಳು 'ಧಾರ್ಮಿಕ' ವಿಷಯಗಳಿಂದ ಹೊರತಾಗಿರುವುದರಿಂದ ತನಗೆ ತೆರಿಗೆ ವಿನಾಯತಿಯನ್ನು ಕೊಡಬೇಕೆಂಬ ಅಹವಾಲನ್ನು ಇಟ್ಟಿತ್ತು!!

ಈ ಅಹವಾಲನ್ನು ವಿಚಾರಣೆಗೆ ಒಳಪಡಿಸಿದ ನ್ಯಾಯ ಮಂಡಳಿಯ ಪಿ.ಕೆ. ಬನ್ಸಾಲ್ ಮತ್ತು ಡಿ.ಟಿ. ಗರಾಸಿಯಾ ಎಂಬುವವರು 'ಶಿವ, ಹನುಮಂತ ಮತ್ತು ದುರ್ಗೆಯನ್ನು ಪೂಜಿಸುವುದು ಬ್ರಹ್ಮಾಂಡದ ಸರ್ವಶಕ್ತಿಗಳಿಗೆ ಸಲ್ಲಿಸುವ ಪ್ರಾರ್ಥನೆ ಎಂದು ಪರಿಗಣಿಸಬಹುದೇ ಹೊರತು ಒಂದು ಧಾರ್ಮಿಕ ಚಟುವಟಿಕೆ ಎಂದು ಹೇಳಲಾಗುವುದಿಲ್ಲ, ಯಾಕೆಂದರೆ ಶಿವ, ಹನುಮಂತ ಮತ್ತು ದುರ್ಗೆ ಯಾವ ನಿರ್ದಿಷ್ಟ ಧರ್ಮಕ್ಕೂ ಸೇರುವುದಿಲ್ಲ, ಅದರಲ್ಲೂ ಆ ದೇವರುಗಳು ಅಸ್ತಿತ್ವದಲ್ಲೇ ಇರದ ಹಿಂದೂ ಧರ್ಮ ಅಥವಾ ಹಿಂದೂ ಸಮುದಾಯದ ಭಾಗ ಅಲ್ಲವೇ ಅಲ್ಲ' ಎಂಬ ತೀರ್ಪನ್ನು ನೀಡಿದ್ದಾರೆ!

ಅಷ್ಟೇ ಅಲ್ಲ, 'ಧರ್ಮ' ಪದದ ಅರ್ಥ ಒಂದು ನಿರ್ದಿಷ್ಟ ನಂಬಿಕೆ, ಪದ್ಧತಿ, ಆಚರಣೆಗಳನ್ನು ಅವಲಂಬಿಸಿರುವುದರಿಂದ, ಅಂತಹ ಯಾವ ನಿರ್ದಿಷ್ಟ ನಿಯಮಗಳೂ 'ಹಿಂದೂ' ಧರ್ಮಕ್ಕೆ ಅನ್ವಯಿಸುವುದಿಲ್ಲವಾದ್ದರಿಂದ 'ಹಿಂದೂ' ಎಂಬುದನ್ನು ಒಂದು ಧರ್ಮ ಎಂದು ಪರಿಗಣಿಸಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇಂತಹ ಒಂದು ಗಮನಾರ್ಹ ಮತ್ತು ಪ್ರಮುಖ ತೀರ್ಪಿಗೆ ಕಾರಣವಾದ ನಾಗಪುರದ ಶಿವ ಮಂದಿರ ದೇವಸ್ಥಾನದ ಪಂಚ ಸಮಿತಿ ಸಂಸ್ಥಾನದ ಅರ್ಜಿಯ ಉದ್ದೇಶ ತೆರಿಗೆ ಕಟ್ಟುವುದರಿಂದ ಪಾರಾಗುವುದು ಆಗಿತ್ತೆ ಹೊರತು ಇಂತಹ ಒಂದು ವ್ಯಾಖ್ಯಾನವನ್ನು ಪಡೆಯುವುದಾಗಿರಲಿಲ್ಲ ಎಂಬುದು ಸ್ಪಷ್ಟ. ಕಾರಣ ಏನೇ ಆಗಿರಲಿ, ಇಂತಹ ಒಂದು ವ್ಯಾಖ್ಯಾನಕ್ಕೆ ಕಾರಣವಾದ ಶಿವನ, ಹನುಮಂತನ ಮತ್ತು ದುರ್ಗೆಯ ಆ ಭಕ್ತರಿಗೆ ನಾವೆಲ್ಲ ಧನ್ಯವಾದಗಳನ್ನು ಹೇಳಬೇಕಿದೆ!!!

*****

ಇನ್ಫೋಸಿಸ್ ಎಂಬ ಆಧುನಿಕ ಹವಾನಿಯಂತ್ರಿತ ಅಗ್ರಹಾರವನ್ನು ಕೊಂಡಾಡುವವರಿಗೆ ನಮ್ಮ ದೇಶದಲ್ಲಿ ಬರವಿಲ್ಲ. ಎಷ್ಟರ ಮಟ್ಟಿಗೆ ಎಂದರೆ ಈ ಕಂಪನಿಯ ಸಂಸ್ಥಾಪಕರಲ್ಲಿ ಪ್ರಮುಖರಾದ ನಾರಾಯಣಮೂರ್ತಿ ತೇಗಿದರೂ, ನಂದನ್ ನಿಲೇಖಣಿ ಕೆಮ್ಮಿದರೂ, ಇನ್ಫೋಸಿಸ್ ಫೌಂಡೇಶನ್ನಿನ 'ಸಾಂಟಾ ಕ್ಲಾಸ್' ಸುಧಾ ಮೂರ್ತಿ ಬಿಕ್ಕಳಿಸಿದರೂ ನಮ್ಮ ಮಾಧ್ಯಮಗಳು ಅದನ್ನು ಮುಖಪುಟದ ಸುದ್ದಿ ಮಾಡುತ್ತವೆ.

ಆದರೆ ಇತ್ತೀಚೆಗೆ ಇದೇ ಇನ್ಫೋಸಿಸ್ ಎಂಬ ಮೇಲುಜಾತಿ ಮತ್ತು ಮೇಲು ವರ್ಗದ ಜನರ ಕಂಪನಿ ತಾನು ಮಾಡಿದ ಅನ್ಯಾಯವನ್ನು ಒಪ್ಪಿಕೊಂಡು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ತನ್ನ ಮಾಜಿ ಉದ್ಯೋಗಿ ಒಬ್ಬನಿಗೆ ಇಪ್ಪತ್ತು ಲಕ್ಷ ರೂಪಾಯಿಗಳನ್ನು ದಂಡವಾಗಿ ಕಟ್ಟಲು ನ್ಯಾಯಾಲಯದ ಮುಂದೆ ತಲೆದೂಗಿರುವುದನ್ನು ಹಲವೇ ಹಲವು ಪತ್ರಿಕೆಗಳು ವರದಿ ಮಾಡಿವೆ. ಅದನ್ನು ನಮ್ಮ ಓದುಗರ ಗಮನಕ್ಕೆ ತರುವುದು ನಮ್ಮ ಕರ್ತವ್ಯವಾಗಿರುವುದರಿಂದ ಈ ಟಿಪ್ಪಣಿ.


'ಭಾರತದ ಅತಿ ಶ್ರೇಷ್ಠ ಆಧುನಿಕ ತಂತ್ರಜ್ಞಾನದ ಕಂಪನಿ' ಎಂದೇ ಕರೆಯಲ್ಪಡುವ ಇನ್ಫೋಸಿಸ್ ಇವತ್ತು ಜಗತ್ತಿನಾದ್ಯಂತ ಕಚೇರಿಗಳನ್ನು ಹೊಂದಿದೆ. ಅಂತಹ ಕಚೇರಿಗಳಲ್ಲಿ ಸಾವಿರಾರು ಜನರಿಗೆ ಉದ್ಯೋಗವನ್ನೂ ನೀಡಿದೆ ನಿಜ. ಆದರೆ ಇವತ್ತಿನವರೆಗೂ 'ಭಾರತದ ಅತಿ ಬುದ್ಧಿವಂತರನ್ನು' ಉದ್ಯೋಗಿಗಳಾಗಿ ಹೊಂದಿರುವ ಈ ಕಂಪನಿ ಒಂದೇ ಒಂದು ಹೊಸ ಸಾಫ್ಟ್‌ವೇರ್ ಅನ್ನು ಸೃಷ್ಟಿಸಿಲ್ಲ, ಆಧುನಿಕ ತಂತ್ರಜ್ಞಾನದ ಬೆಳವಣಿಗೆಗೆ ಕಿಂಚಿತ್ತೂ ಕೊಡುಗೆಯನ್ನು ನೀಡಿಲ್ಲ. ಬದಲಾಗಿ ಅಧಿಕಾರಸ್ಥರ ಮರ್ಜಿ, ಸರ್ಕಾರಿ ಸವಲತ್ತು, ಕಡಿಮೆ ದರದಲ್ಲಿ ಭೂಮಿ, ತೆರಿಗೆ ವಿನಾಯತಿ, ಇತ್ಯಾದಿಗಳನ್ನು ಪಡೆಯುತ್ತ ತನ್ನ ಮತ್ತು ತನ್ನ ಷೇರುದಾರರ ಜೇಬನ್ನು ಬಲಗೊಳಿಸುತ್ತಿದೆಯೇ ವಿನಃ ಈ ಕಂಪನಿಯಿಂದ ಸಾಮಾನ್ಯ ಭಾರತೀಯನಿಗೆ ಆಗಿರುವ ಲಾಭ ಜೀರೋ!

ಅದೆಲ್ಲ ಜಾಣ ಜಾಣೆಯರಾದ ನಮ್ಮ ಓದುಗರಿಗೆ ಈಗಾಗಲೇ ಮನದಟ್ಟಾಗಿರುವ ಸಂಗತಿಗಳು. ಆದ್ದರಿಂದ ಈಗ ಪ್ರಸ್ತುತ ವಿಷಯಕ್ಕೆ ಬರುವುದು ಸೂಕ್ತ.

2008ರ ಮೇ 13ರಂದು ರಾಜಸ್ಥಾನದ ರಾಜಧಾನಿ ಜೈಪುರದಲ್ಲಿ ಭಯೋತ್ಪಾದಕರು ಇಟ್ಟಿದ್ದ ಬಾಂಬ್‌ಗಳು ಸ್ಫೋಟಗೊಂಡು 60 ಜನ ಸಾವನ್ನಪ್ಪಿದ್ದರು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಅನುಮಾನದ ಮೇರೆಗೆ ಜೈಪುರದ ಪೊಲೀಸರು ರಶೀದ್ ಹುಸೇನ್ ಎಂಬ ಇನ್ಫೋಸಿಸ್ ಟೆಕ್ಕಿಯನ್ನು ವಿಚಾರಣೆಗೆ ಕರೆದುಕೊಂಡು ಹೋಗಿದ್ದರು. ಇಲ್ಲಿನ ಮುಖ್ಯ ಅಂಶ ಯಾವುದೆಂದರೆ ಜೈಪುರದ ಪೊಲೀಸರು ಹುಸೇನನನ್ನು ಬಂಧಿಸುವುದಿರಲಿ ಆತನ ವಿರುದ್ಧ ಆರೋಪ ಪಟ್ಟಿಯನ್ನೂ ತಯಾರಿಸಿರಲಿಲ್ಲ.

ಆದರೆ ನಮ್ಮ ದೇಶದ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಬಗ್ಗೆ ಪೂರ್ವಾಗ್ರಹ ಪೀಡಿತವಾಗಿರುವ ಇನ್ಫೋಸಿಸ್‌ನ ಜನಿವಾರಿ ಬುದ್ಧಿವಂತರು ಹಿಂದೂ ಮುಂದೂ ಯೋಚಿಸದೆ, ಯಾವ ಕಾರಣವನ್ನಾಗಲಿ ಸಬೂಬನ್ನಾಗಲಿ ನೀಡದೆ ರಶೀದ್ ಹುಸೇನನ್ನು ತಮ್ಮ ಕಂಪನಿಯ ಕೆಲಸದಿಂದ ವಜಾಗೊಳಿಸಿದ್ದರು.

ಹತ್ತು ದಿನಗಳ ಕಾಲ ಪೊಲೀಸರ ವಶದಲ್ಲಿದ್ದ ಹುಸೇನನ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿದ್ದರಿಂದ ಆತನನ್ನು ಬಿಡುಗಡೆ ಮಾಡಲಾಗಿತ್ತು. ಹಾಗೆ ಬಿಡುಗಡೆಗೊಂಡ ಹುಸೇನನಿಗೆ ಇನ್ಫೋಸಿಸ್ ತನ್ನನ್ನು ಕೆಲಸದಿಂದ ವಜಾ ಮಾಡಿದ್ದು ಸಹಜವಾಗಿಯೇ ಅನ್ಯಾಯವೆನಿಸಿತ್ತು. ಆಗ ಆತ ಸ್ಥಳೀಯ ಕಾರ್ಮಿಕ ನ್ಯಾಯಾಲಯದಲ್ಲಿ ಇನ್ಫೋಸಿಸ್ ವಿರುದ್ಧ ದಾವೆಯನ್ನು ಹೂಡಿದ. ಮೂರು ವರ್ಷಗಳ ಕಾಲ ವಿಚಾರಣೆ ನಡೆಸಿದ ಕಾರ್ಮಿಕ ನ್ಯಾಯಾಲಯವು ಹುಸೇನನನ್ನು ಕೆಲಸದಿಂದ ವಜಾಮಾಡಿದ್ದರ ಹಿಂದೆ ದುರುದ್ದೇಶ ಇತ್ತೆಂದು ತೀರ್ಪು ನೀಡಿತ್ತು. ಆದರೆ ಈ ತೀರ್ಪನ್ನು ಸಹಿಸಲು ಇನ್ಫೋಸಿಸ್‌ನ ಮಾಲೀಕರಿಗೆ ಸಾಧ್ಯವಾಗಲಿಲ್ಲ. ಅವರು ಇದನ್ನು ಪ್ರಶ್ನಿಸಿ 2011ರಲ್ಲಿ ರಾಜಸ್ಥಾನದ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದರು. ಇದರ ವಿಚಾರಣೆ ನಡೆಯುತ್ತಿರುವಾಗಲೇ ಎಲ್ಲಿ ತನ್ನ ಜಾತಿವಾದಿ, ಕೋಮುವಾದಿ ಅಸಲಿಯತ್ತು ಬಹಿರಂಗಗೊಳ್ಳುತ್ತದೋ ಎಂದು ಹೆದರಿದ ಇನ್ಫೋಸಿಸ್ ಕಂಪನಿ ಇತ್ತೀಚೆಗೆ ಹುಸೇನನಿಗೆ ಬರೋಬ್ಬರಿ 20 ಲಕ್ಷ ರೂಪಾಯಿಗಳನ್ನು ಪರಿಹಾರ ಧನವಾಗಿ ನೀಡಲು ಒಪ್ಪಿಕೊಂಡಿದೆ.



ಸಿದ್ದಿಕಿ ಎಂಬ ವರದಿಗಾರನನ್ನು 'ಭಯೋತ್ಪಾದಕ ಕೃತ್ಯಗಳ ಮಾಸ್ಟರ್ ಮೈಂಡ್' ಎಂದು ಬಣ್ಣಿಸಿದ ನಮ್ಮ ಹಲವು ಮಾಧ್ಯಮಗಳಿಗೂ, ಹುಸೇನ್ ಎಂಬ ಟೆಕ್ಕಿಯನ್ನು ಆತನ ಧರ್ಮದ ಕಾರಣಕ್ಕೆ ವಜಾಗೊಳಿಸಿದ ಇನ್ಫೋಸಿಸ್ ಎಂಬ ಕಂಪನಿಗೂ ಅಷ್ಟೇನು ವ್ಯತ್ಯಾಸ ಇಲ್ಲ ಅಲ್ಲವೇ?

ಅಂದ ಹಾಗೆ ಇನ್ಫೋಸಿಸ್ ಎಂಬ RSS ಬುದ್ಧಿಯ ಈ ಕಂಪನಿಯ ಮುಸ್ಲಿಂ ವಿರೋಧಿ ಪೂರ್ವಾಗ್ರಹಗಳ ಬಗ್ಗೆ ಕನ್ನಡದ ಯಾವೊಂದು ಪತ್ರಿಕೆಯೂ ವರದಿ ಮಾಡಿಲ್ಲ ಗಮನಿಸಿದ್ದೀರಾ?

*****

ಗುಜರಾತಿನ ನರಹಂತಕ ಮುಖ್ಯಮಂತ್ರಿ ನರೇಂದ್ರ ಮೋದಿ ತಾನು ಅಭಿವೃದ್ಧಿಯ ಹರಿಕಾರನೆಂದೂ, ತನ್ನ ಆಡಳಿತ ಶೈಲಿಯು ಇಡೀ ದೇಶಕ್ಕೆ ಮಾದರಿ ಎಂದೂ, ಆ ಕಾರಣಕ್ಕೆ ತಾನು ಭಾರತದ ಮುಂದಿನ ಪ್ರಧಾನಿ ಆಗಲು ಅರ್ಹನೆಂದೂ ಪೋಸು ಕೊಡುತ್ತಿರುವ ವಿಚಾರ ಈಗ ಎಲ್ಲರಿಗೂ ಗೊತ್ತು. ಆದರೆ ಗುಜರಾತಿನ ಲೆಕ್ಕ ಪರಿಶೋಧಕರು ಮತ್ತು ನಿಯಂತ್ರಕ (ಸಿಎಜಿ) ಇಲಾಖೆಯ ವರದಿಯೊಂದು ಮೋದಿಯ ಅಧಕ್ಷತೆಯನ್ನು, ಭ್ರಷ್ಟಾಚಾರವನ್ನು, ದುಂದುವೆಚ್ಚವನ್ನು ಮತ್ತು ರಾಜ್ಯ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿಗಳ ನಷ್ಟ ಉಂಟುಮಾಡಿರುವುದನ್ನು ಬಯಲಿಗೆಳೆದು ಮೋದಿಯ ಮುಖಕ್ಕೆ ಸರಿಯಾಗಿಯೇ ಇಕ್ಕಿದ್ದ ವಿಚಾರ ಬಹಳ ಜನರಿಗೆ ಗೊತ್ತಿಲ್ಲ.


ಇದು ನಡೆದದ್ದು ಕಳೆದ ವರ್ಷವಾದರೂ ಇದು ಮುಖ್ಯವಾದ್ದರಿಂದ ಜನರಿಗೆ ನೆನಪಿಸುವ ಅಗತ್ಯ ಇದೆ. 2009-10 ಹಾಗೂ 2010-11 ಆರ್ಥಿಕ ವರ್ಷಗಳ ಲೆಕ್ಕಪತ್ರಗಳನ್ನು ಪರಿಶೀಲಿಸಿದ ಗುಜರಾತಿನ ಸಿಎಜಿ ವರದಿಯು ಮೋದಿ ಸರ್ಕಾರ ಆ ಎರಡು ವರ್ಷಗಳಲ್ಲಿ ರಾಜ್ಯದ ಖಜಾನೆಗೆ ಬರೋಬ್ಬರಿ 17,000 ಕೋಟಿ ರೂಪಾಯಿಗಳನ್ನು ನಷ್ಟ ಮಾಡಿದೆ ಎಂದು ಹೇಳಿತ್ತು. ಗುಜರಾತಿನ ವಿಧಾನ ಸಭೆಯಲ್ಲಿ ಮಂಡಿಸಲಾದ ಈ ವರದಿಯು ಮೋದಿಯನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿತಲ್ಲದೆ, ಆತನ ಅಧಕ್ಷತೆಯಿಂದಾಗಿ ರಾಜ್ಯ ಸರ್ಕಾರ ನಡೆಸುವ ಸಾರ್ವಜನಿಕ ಉದ್ದಿಮೆಗಳಲ್ಲಿ 12 ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಲುಕ್ಸಾನಾಗಿದೆ ಎಂದಿತ್ತು. ಅಷ್ಟೇ ಅಲ್ಲ, ಆರ್ಥಿಕ ವರ್ಷದ ಕೊನೆ ದಿನ ಸರ್ಕಾರಿ ಇಲಾಖೆಗಳು ಹೆಚ್ಚೆಚ್ಚು ಹಣವನ್ನು ಬಿಡುಗಡೆ ಮಾಡಿರುವುದರ ಹಿಂದೆ ಭ್ರಷ್ಟಾಚಾರ ಅಡಗಿದೆ ಎಂದೂ ಆರೋಪಿಸಿತ್ತು.


ಈಗ ಗೊತ್ತಾಯಿತಾ? ಯಾಕೆ ಮೋದಿ ತನ್ನ ರಾಜ್ಯದಲ್ಲಿ ಲೋಕಾಯುಕ್ತರನ್ನು ನೇಮಿಸದೆ ತಪ್ಪಿಸಿಕೊಳ್ಳುತ್ತಿದ್ದನೆಂದು. ಗುಜರಾತಿನಂಥ ರಾಜ್ಯಕ್ಕೇ ಈ ಮಟ್ಟದ ನಷ್ಟ ಉಂಟು ಮಾಡಿದ ಮೋದಿ ಈ ದೇಶದ ಪ್ರಧಾನಿ ಆದರೆ ಭಾರತದ ಆರ್ಥಿಕ ಸ್ಥಿತಿ 'ನಮೋ ನಮಃ' ಆಗದೆ ಇರುತ್ತದೆಯೇ?!


ಓದುಗರು ಹಾಗೂ ಏಜೆಂಟರಲ್ಲಿ ಮನವಿ...


ಈ ಬಾರಿಯ 'ಲಂಕೇಶ್' ಸಂಚಿಕೆ ಹದಿನಾರು ಪುಟ ಮಾತ್ರ ಇದೆ.
ನ್ಯೂಸ್ ಪ್ರಿಂಟ್ ಕೊರತೆಯಿಂದಾಗಿ ಈ ಪರಿಸ್ಥಿತಿ ಬಂದಿದೆ.
ನಮ್ಮ ಸಂಸ್ಥೆಗೆ ತಮಿಳುನಾಡಿನ ಪೇಪರ್ ಮಿಲ್‌ಗಳಿಂದ ನ್ಯೂಸ್ ಪ್ರಿಂಟ್ ಸರಬರಾಜಾಗುತ್ತಿದ್ದು ಅಲ್ಲಿ ತೀವ್ರ ವಿದ್ಯುತ್ ಅಭಾವ ಹಾಗೂ ಕೇಂದ್ರ ಬಜೆಟ್ ಮಂಡನೆ ಕಾರಣದಿಂದಾಗಿ ಕಳೆದ 15 ದಿನದಿಂದ ಮಿಲ್‌ಗಳಲ್ಲಿ ಕಾಗದ ಉತ್ಪಾದನೆ ನಿಂತಿತ್ತು, ಹಾಗಾಗಿ ಮಾರ್ಚ್ 15 ರ ವೇಳೆಗೆ ನಮಗೆ ತಲುಪಬೇಕಿದ್ದ ನ್ಯೂಸ್ ಪ್ರಿಂಟ್ ಸಕಾಲದಲ್ಲಿ ಬಾರದ ಕಾರಣ ನಮ್ಮಲ್ಲಿ ಸ್ಟಾಕ್ ಇದ್ದ ಕೊಂಚ ನ್ಯೂಸ್ ಪ್ರಿಂಟ್ ಬಳಸಿಯೇ ಈ ಸಲದ ಸಂಚಿಕೆ ಮುದ್ರಿಸಿದ್ದೇವೆ. ಹಾಗಾಗಿ ಈ ಸಂಚಿಕೆಯಲ್ಲಿ ಹದಿನಾರು ಪುಟ ಮಾತ್ರ ನೀಡಲು ಆಗುತ್ತಿದೆ.
ಮುಂದಿನ ಸಂಚಿಕೆಯಿಂದ ಎಂದಿನಂತೆ 20 ಪುಟಗಳು ಇರಲಿವೆ. ಪತ್ರಿಕೆಯ ಬೆಲೆಯಲ್ಲಿ ಯಾವುದೇ ಏರಿಕೆ ಇಲ್ಲ ಎಂಬುದನ್ನು ಗಮನಿಸಿ.
ದಯವಿಟ್ಟು ಇದೊಮ್ಮೆ ಸಹಕರಿಸಿ.

-ವ್ಯವಸ್ಥಾಪಕ


ಸದಾನಂದ ಗೌಡ


ರಘುಪತಿ ಭಟ್ಟ


ಪಾಲೇಮಾರ್



ಅಂಗಾರ


ಮಲ್ಲಿಕಾ ಪ್ರಸಾದ್

ಕರಾವಳಿ: ಕಂಗೆಟ್ಟ ಕಲ್ಲಡ್ಕನ ಸರ್ಜರಿ ಸೂತ್ರ

ಪೌರಾಡಳಿತ ಸಂಸ್ಥೆಗಳಿಗೆ ಜರುಗಿದ ಚುನಾವಣೆಯಲ್ಲಿ ಬಿಜೆಪಿಯ ಬೆನ್ನು ಮೂಳೆ ಮುರಿದದ್ದೇ ತಡ, ಅದರ ತೆರೆಮರೆಯ ಸೂತ್ರಧಾರರು ಬೆಚ್ಚಿಬಿದ್ದಿದ್ದಾರೆ. ತಮ್ಮ ಅಬೇಧ್ಯ ಕೋಟೆ ಎಂದು ಭಾವಿಸಿದ್ದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆರಡರಲ್ಲೂ ಬಿಜೆಪಿ ಹೀನಾಯವಾಗಿ ಸೋತಿರುವುದು ಸಂಘ ಪರಿವಾರದ ಸರದಾರರನ್ನು ದೊಡ್ಡ ಚಿಂತೆಗೆ ನೂಕಿದೆ! ಶರವೇಗದಿಂದ ಧಾವಿಸುತ್ತಿರುವ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಈ ಸೋಲಿನ ವಕ್ರೀಭವನವಾದರೆ ಗತಿಯೇನೆಂಬ ಆತಂಕ ಚೆಡ್ಡಿ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟನ ನಿದ್ದೆಗೆಡಿಸುತ್ತಿದೆ. ಬಿಜೆಪಿಯಲ್ಲಿ ಭರ್ಜರಿ ಸರ್ಜರಿ ನಡೆಸಿದರೆ ಮುಖಭಂಗದಿಂದ ತಪ್ಪಿಸಿಕೊಳ್ಳಬಹುದೇನೋ ಎಂಬ ಲೆಕ್ಕಾಚಾರಕ್ಕೆ ಆತ ಬಿದ್ದಿದ್ದಾನೆ.

ಜನರ ತಾತ್ಸಾರ-ತಿರಸ್ಕಾರಕ್ಕೆ ತುತ್ತಾಗಿರುವ ಹಲವು ಹಾಲಿ ಶಾಸಕರಿಗೆ ಟಿಕೆಟ್ ಕೊಡದೆ ಹಿಂದೂತ್ವದ ಛಾರ್ಮ್ ಇರುವ ಹೊಸಬರನ್ನು ಎಲೆಕ್ಷನ್ ಯಾಗದ ಕುದುರೆಗಳಾಗಿಸುವ ಸ್ಕೆಚ್ ಕಲ್ಲಡ್ಕ ಭಟ್ ಹೆಣೆಯುತ್ತಿದ್ದಾನೆ. ಚುನಾವಣೆ ಯಾವುದೇ ಇರಲಿ, ಬಿಜೆಪಿಯ ಟಿಕೆಟ್ ಹಂಚಿಕೆ ಪ್ರಕ್ರಿಯೆಯಲ್ಲಿ ಕಲ್ಲಡ್ಕನದೇ ಅಂತಿಮ ವಾಣಿ! ಅಡಗುದಾಣದಲ್ಲಿ ಬಚ್ಚಿಟ್ಟುಕೊಂಡು ಧರ್ಮಕಾರಣದ ಕ್ರೌರ್ಯ ನಡೆಸುತ್ತ ಕರಾವಳಿಯಲ್ಲಿ ಬಿಜೆಪಿಯನ್ನು ಭೀಭತ್ಸವಾಗಿ ಕಟ್ಟಿ ಬೆಳೆಸಿದ ಕಲ್ಲಡ್ಕನ ಲಿಸ್ಟ್‌ಗೆ ಕಣ್ಣು ಮುಚ್ಚಿ ಆರೆಸ್ಸೆಸ್-ಬಿಜೆಪಿ ಮುದ್ರೆ ಒತ್ತುವುದು ಸಂಪ್ರದಾಯ. ಟಿಕೆಟ್ ಹಂಚಿಕೆಯಲ್ಲಿನ ಈ ಏಕಸಾಮ್ಯದ ಅಧಿಕಾರವೇ ಇವತ್ತು ಕಲ್ಲಡ್ಕನನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ತಾನು ನಿಲ್ಲಿಸಿದ ಹುರಿಯಾಳುಗಳು ಪಲ್ಟಿ ಹೊಡೆದರೆ ಬಿಜೆಪಿಯಲ್ಲಿರುವ ಎದುರಾಳಿಗಳ ಮೂದಲಿಕೆಗೆ ಈಡಾಗಬೇಕಾಗುತ್ತದೆಂಬ 'ಧರ್ಮ ಸಂಕಟ' ಕಲ್ಲಡ್ಕನನ್ನು ಕಾಡುತ್ತಿದೆ ಪಾಪ!


ಕಲ್ಲಡ್ಕ

...ಯೋಚನೆಯಲ್ಲಿದ್ದಾರೆ. ಅತ್ತ ಕಲ್ಲಡ್ಕ ಜಿ.ಪಂ. ಸದಸ್ಯ ಬಾಬು ಹೆಗ್ಡೆ ಬ್ಲಾಕ್ ಬಿಜೆಪಿ ಅಧ್ಯಕ್ಷ ಪ್ರಣಯ್‌ಕುಮಾರ್‌ಗೆಲ್ಲ ಯಾಮಾರಿಸಿ ಹಣವಂತನಾದ ಉದ್ಯಮಿ ಸುಕುಮಾರ ಶೆಟ್ಟಿ ಎಂಬ ಕಾಂಗ್ರೆಸ್‌ನಿಂದ ಆಮದಾದವನನ್ನು ಯುದ್ಧ ಯೋಧನಾಗಿಸುವ ಇರಾದೆಯಲ್ಲಿದ್ದಾರೆ.

ಉಡುಪಿ ಶಾಸಕ ರಘುಪತಿ ಭಟ್ಟ ಚೆಡ್ಡಿ ಗ್ಯಾಂಗಿನ ಸಕಲ ಪಾತಕ- ಪರಾಕ್ರಮ ಮೈಗೂಡಿಸಿಕೊಂಡಿರುವ ಬಾಸ್ ಕಲ್ಲಡ್ಕ ಭಟ್ಟರ ನಿಷ್ಠಾವಂತ ವಟುವೂ ಹೌದು. ಆದರೇನು ಮಾಡೋದು ಪಕ್ಕಾ ಕಚ್ಚೆ ಹರುಕ; ಹೆಂಡತಿ ಹಂತಕ; ರೇವ್ ಪಾರ್ಟಿ ಆಯೋಜಕ; ಇಡೀ ಉಡುಪಿಯನ್ನು ಲಂಚ, ಅವ್ಯವಹಾರದ ಅಡ್ಡೆ ಮಾಡಿ ಮೆಂದಿರುವ ಭಂಡ. ಇಂಥವನಿಗೆ ಟಿಕೆಟ್ ಕೊಟ್ಟರೆ ಉಡುಪಿಯಲ್ಲಿ

ಕುಲಕಂಠೀವರನೂ- ತನ್ನ ಗುಲಾಮನೂ ಆಗಿರುವ ಮಂತ್ರಿ ಕೋಟ ಶ್ರೀನಿವಾಸ್ ಪೂಜಾರಿಯನ್ನು ಕಣಕ್ಕಿಳಿಸಿ, ಪಕ್ಕದ ಉಡುಪಿಯಲ್ಲಿ ರಘುಪತಿ ಭಟ್ಟನ ಬದಲಿಗೆ ಬಂಟರ ಭೂಪ ಉದಯಕುಮಾರ್ ಶೆಟ್ಟಿಯನ್ನು ನಿಲ್ಲಿಸುವುದು.

ಅತ್ತ ದಕ್ಷಿಣ ಕನ್ನಡದ ಮಂಗಳೂರು ಉತ್ತರ ಕ್ಷೇತ್ರದ 'ನೀಲಿ ಪೋರ' ಪಾಲೆಮಾರ್, ಮಂಗಳೂರು ದಕ್ಷಿಣದ ಹೇತ್ಲಾಂಡಿ ಯೋಗೀಶ್ ಭಟ್, ಪುತ್ತೂರಿನ ಪೆದ್ದಿ ಮಲ್ಲಿಕಾ ಭಂಡಾರಿ ಮತ್ತು ಸುಳ್ಯದ ಸೋಗಲಾಡಿ ಎಸ್. ಅಂಗಾರನಿಗೆ ಕಡ್ಡಾಯ ನಿವೃತ್ತಿ ಕೊಡುವ ಹಠಕ್ಕೆ ಕಲ್ಲಡ್ಕ ಬಿದ್ದಿರುವುದು ಬಿಜೆಪಿಯಲ್ಲಿ ಅಲ್ಲೋಲಕಲ್ಲೋಲವನ್ನೇ ಮಾಡಿಬಿಟ್ಟಿದೆ. ಅಂದಿನ ಸುರತ್ಕಲ್- ಇಂದಿನ ಮಂಗಳೂರು ಉತ್ತರ ಮತದಾರ ಕ್ಷೇತ್ರದಲ್ಲಿ ಬಿಜೆಪಿಗೆ ಮೊದಲಿನ ಮದವಿಲ್ಲ! ಹಿಂದೂತ್ವದ ಹೆಸರಲ್ಲಿ ಅಪಾಪೋಲಿಗಳು, ವಿಕೃತ ಕಾಮುಕರು, ಕಡು ಕಳ್ಳರು ಕೇಸರಿ ಶಾಲು ಹೆಗಲಿಗೇರಿಸಿ-ಹಣೆಗೆ ಭೂತಾಕಾರದ ಕುಂಕುಮದ ನಾಮ ಹಾಕಿಕೊಂಡು ಅನಾಚಾರ-ಅತ್ಯಾಚಾರ-ಅವ್ಯವಹಾರ ಮಾಡೋದು ಕಣ್ಣಾರೆ ಕಂಡ ಜನ ಕಲ್ಲಡ್ಕನಿಗೆ ಶಾಪ ಹಾಕುತ್ತಿದ್ದಾರೆ. ಪಾಪಿಗಳ ದಂಡಿನ ನಾಯಕ ಕೃಷ್ಣ ಪಾಲೆಮಾರನೇ ಬ್ಲೂ ಫಿಲ್ಮ್ ಅಸೆಂಬ್ಲಿಯಲ್ಲೇ ನೋಡಿ ಸಿಕ್ಕಿಬಿದ್ದ ಮೇಲಂತೂ ಬಿಜೆಪಿ ಮಾನ ಹರಾಜಾಗಿ ಹೋಗಿದೆ. ಪಾಲೆಮಾರ್ ಸ್ಪರ್ಧಿಸಿದರೆ ಗೆಲ್ಲೋದಿಲ್ಲ ಎಂಬುದು ಎಲ್ಲರಿಗೂ ಗೊತ್ತಾಗಿದೆ.


ಪಾಲೆಮಾರ್‌ಗೂ ಆರೆಸ್ಸೆಸ್‌ನ ಧನಾಧಾರಿತ ರಾಜಕಾರಣ ಸಾಕಾಗಿದೆ. ಆತ ಒಂದು ಹಂತದಲ್ಲಿ ಮತ್ತೆ ಎಲೆಕ್ಷನ್ ಫೈಟಿಂಗ್ ಬೇಡವೆಂದೇ ಹಿಮ್ಮೆಟ್ಟಿದ್ದರು. ಆದರೆ ಕಲ್ಲಡ್ಕ ಧೈರ್ಯ ತುಂಬಿದ್ದ. ಅದೇ ಕಲ್ಲಡ್ಕನಿಗೆ ಈಗ ಪಾಲೆಮಾರ್‌ಗೆ ಟಿಕೆಟ್ ಕೊಡುವ ಮನಸ್ಸಿಲ್ಲ. ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಚೆಡ್ಡಿ ಧ್ವಜ ಹಾರಿಸಿದ ಭಂಡ ಭಜರಂಗಿ ಸತ್ಯಜಿತ್


ನಡೆಯುವ ಪರಮ ಮತಾಂಧನೂ- ನಿ... ಲೇವಾದೇವಿದಾರನೂ- ಅನೈತಿಕ ಪೋ... ಪರಾ'ಕ್ರಿಮಿ'ಯೂ ಆದ ಶ್ರೀಕರ ಪ್ರಭುನನ್ನು ಮಂಗ... ದಕ್ಷಿಣದಲ್ಲಿ ಬಿಜೆಪಿ ಹುರಿಯಾಳಾಗಿಸಲು ಪ್ರ... ನಡೆಸಿದ್ದಾನೆ.


ಧರ್ಮಕಾರಣ ಶುರು ಹಚ್ಚಿಕೊಂಡ ನಂತರ ... ಭಟ್ಟ ಇಂಥ ದೈನೇಸಿ ಸ್ಥಿತಿಗೆ ಬಹುಶಃ ಹಿಂದೆ... ತಲುಪಿದ್ದೇ ಇಲ್ಲ. ಬಿಜೆಪಿ ಕರಾವಳಿಯಲ್ಲಿ ಭಸ್ಮವಾಗ... ವುದು ಕಲ್ಲಡ್ಕ ಭಟ್ಟನ ಪಾಪದ ಕೊಡ ತುಂಬಿರು... ಸಂಕೇತ. ಜಿಲ್ಲೆಯ ಗಡಿಯಲ್ಲಿರುವ ಸುಳ್ಯ ಮತ್ತು ಪುತ್ತೂ... ಸಂಘ ಪರಿವಾರದ ಮತಾಂಧ ಕೋಟೆ ಪತನವಾಗ... ಈ ಎರಡು ಕ್ಷೇತ್ರಗಳಲ್ಲಿ ಸರಿ ಸುಮಾರು ಎರಡು ದಶ... ಬಿಜೆಪಿಯೇ ಗೆಲ್ಲುತ್ತ ಬಂದಿದೆ. ಆದರೆ ಕಲ್ಲಡ್ಕ ... ಪಡೆಗೆ ಈಗ ಮೊದಲಿನ ಸೈತಾನ ಶಕ್ತಿ ಇಲ್ಲ. ... ಮತ್ತು ಪುತ್ತೂರಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಬದಲ... ಯೋಚಿಸುತ್ತಿರುವ ಕಲ್ಲಡ್ಕನಿಗೆ ಎರಡೂ ಕಡೆ ನಿಷ್ಠಾ... ಹಿಂದೂ ಹರಾಮಿಗಳೇ ಸಿಗುತ್ತಿಲ್ಲ.


ಸುಳ್ಯದ ಬಿಜೆಪಿ ಶಾಸಕ ಅಂಗಾರನಿಗೆ ಕಲ್ಲಡ್ಕ ... ತನಗೆ ಟಿಕೆಟ್ ತಪ್ಪಿಸುವ ವಾಸನೆ ಬಡಿದಿದೆ. ಹಾ... ಆತ ಜೆಡಿಎಸ್‌ನಿಂದ ಸ್ಪರ್ಧಿಸುವ ಪ್ಲಾನ್ ಹಾಕಿ ಕುಂತಿ... ಆದರೆ ವಿಪರೀತ ಧನದಾಹ- ಹಿಂದೂತ್ವದ ಕಾಟ... ಜನರ ತಿರಸ್ಕಾರಕ್ಕೆ ತುತ್ತಾಗಿರುವ ಅಂಗಾರ ಯಾವ ಪಕ್ಷ... ನಿಂತರೂ ಗೆಲ್ಲುವುದು ಸಾಧ್ಯವೇ ಇಲ್ಲವೆಂದು ಹ... ಸಮೀಕ್ಷೆಗಳು ಹೇಳಿವೆ. ಪುತ್ತೂರಿನಲ್ಲಿ ಮತ್ತೆ ಮ... ಪ್ರಸಾದ್ ಎಂಬ ತನ್ನ ಶಿಷ್ಯನ ಹೆಂಡತಿಯನ್ನು ನಿಲ್ಲಿ... ಸೋಲು ಖಾತ್ರಿಯೆಂಬುದು ಕಲ್ಲಡ್ಕನಿಗೆ ಗೊತ್ತಾ... ಅಮಾಯಕ ಜನರ ಪ್ರಯೋಜನಕ್ಕೆ ಬಾರದ ಮಲ್...



ಶ್ರೀಕರ


ಲಕ್ಷ್ಮಿ ನಾರಾಯಣ


ಸತ್ಯಜಿತ್


ಯೋಗೀಶ್ ಭಟ್


ಸುಕುಮಾರ್ ಶೆಟ್ಟಿ


ಉದಯಕುಮಾರ್ ಶೆಟ್ಟಿ

ದಕ್ಷಿಣ ಕನ್ನಡದ ಅಷ್ಟೂ ನಾಲ್ಕು ಬಿಜೆಪಿ ಶಾಸಕರನ್ನು ಮತ್ತು ಉಡುಪಿ ಜಿಲ್ಲೆಯ ಕನಿಷ್ಠ ಇಬ್ಬರನ್ನಾದರೂ ಬದಲಿಸಬೇಕೆಂಬ ನಿರ್ಧಾರಕ್ಕೆ ಕಲ್ಲಡ್ಕ ಭಟ್ಟ ಬಂದಿದ್ದಾನೆ. ಬೈಂದೂರಿನ 'ಸಿಡಿಮಿಡಿ ಮುದುಕ' ಕುಖ್ಯಾತಿಯ ಚೆಡ್ಡಿ ಎಮ್ಮೆಲ್ಲೆ ಲಕ್ಷ್ಮೀನಾರಾಯಣ ಶೇರುಗಾರ ಹಿಂದೆ ಯಡ್ಡಿ ಬಣದಲ್ಲಿದ್ದಾತ. ಜತೆಗೆ ಕ್ಷೇತ್ರದಲ್ಲಿ ಜನರಿಂದ "ಛೀ... ಥೂ..." ಅನ್ನಿಸಿಕೊಳ್ಳುತ್ತಿರುವಾತ. ಸಹಾಯ ಕೇಳಿ ಬರುತ್ತಿದ್ದ ಮತದಾರರಿಗೆ 'ಮಂತ್ರಾಕ್ಷತೆ' ಹಾಕಿ ಕಳಿಸುತ್ತಿದ್ದ ಈ ಲಕ್ಷ್ಮೀನಾರಾಯಣನೆಂಬ ಬಿಲ್ಡರ್ ಭೂತಕ್ಕೆ ಪಾರ್ಟಿ ಕಾರ್ಯಕರ್ತರೆಂದರೂ ಅಲರ್ಜಿ. ಹೀಗಾಗಿ ಆತನಿಗೆ ಟಿಕೆಟ್ ಕೊಡಬಾರದೆಂಬ ದೃಢ ನಿರ್ಧಾರಕ್ಕೆ ಕಲ್ಲಡ್ಕ ತುಂಬ ಹಿಂದೆಯೇ ಬಂದಿದ್ದರು.

ಕೆಜೆಪಿಯಲ್ಲಿ ಪ್ರಾಣ-ಬಿಜೆಪಿಯಲ್ಲಿ ದೇಹ ಇಟ್ಟಿರುವ ಲಕ್ಷ್ಮೀನಾರಾಯಣನಿಗೆ ಬೈಂದೂರಲ್ಲಿ ಕೆಜೆಪಿಯಿಂದ ನಿಂತರೆ ಗೆಲ್ಲುವುದು ಅಸಾಧ್ಯವೆಂಬುದು ಖಾತ್ರಿಯಾಗಿದೆ. ಹಾಗಾಗಿ ಆತ ಬಿಜೆಪಿಯಲ್ಲಿದ್ದರೂ ಸಂಘ ಪರಿವಾರ ಆತನನ್ನು ಹತ್ತಿರ ಸೇರಿಸಿಕೊಳ್ಳುತ್ತಿಲ್ಲ. ಇಷ್ಟಾದರೂ ಲಕ್ಷ್ಮೀನಾರಾಯಣ ಭರವಸೆ ಕಳೆದುಕೊಂಡಿಲ್ಲ. ಟಿಕೆಟ್ ಹಂಚಿಕೆದಾರ ಕಲ್ಲಡ್ಕನ ವೀಕ್‌ನೆಸ್ ಗೊತ್ತು ಮಾಡಿಕೊಂಡಿರುವ ಈ ಲಕ್ಷ್ಮೀಪುತ್ರ ಆತನಿಗೆ ಹಣ ಕೊಟ್ಟು ಬಿಜೆಪಿ ಟಿಕೆಟ್ ಕೊಂಡುಕೊಳ್ಳುವ

ಉಳಿಗಾಲವಿಲ್ಲ ಎಂಬುದು ಕಲ್ಲಡ್ಕನಿಗೆ ಪಕ್ಕಾ ಆಗಿದೆ. ಈ ಧೂರ್ತ ಭಟ್ಟನ ದೆಸೆಯಿಂದಲೇ ನಾಲ್ಕು ಮುಕ್ಕಾಲು ದಶಕದಿಂದ ಚೆಡ್ಡಿಗಳ ಕೈಯಲ್ಲಿದ್ದ ನಗರಸಭೆ ಈ ಬಾರಿ ಕೈಜಾರಿದೆ; ಉಡುಪಿ-ಚಿಕ್ಕಮಗಳೂರು ಬೈ ಎಲೆಕ್ಷನ್, ಜಿ.ಪಂ. ಎಲೆಕ್ಷನ್‌ನಲ್ಲಿ ಬಿಜೆಪಿಗೆ ಬರೆ ಬಿದ್ದಿದೆ. ಆ ಮಟ್ಟಕ್ಕೆ ರಘುಪತಿ ಭಟ್ಟನ ಹೆಸರು ಕೆಟ್ಟಿದೆ.

ಹಾಗಾಗಿ ಉಡುಪಿಯ ಹೊಸ ಡಾರ್ಕ್ ಹಾರ್ಸ್‌ಗಾಗಿ ಕಲ್ಲಡ್ಕ ತಲಾಶ್ ಮಾಡುತ್ತಿದ್ದಾನೆ. ಜಿಲ್ಲಾ ಬಿಜೆಪಿ ಅಧ್ಯಕ್ಷ ಉದಯ್‌ಕುಮಾರ್ ಶೆಟ್ಟಿಗೆ ಟಿಕೆಟ್ ಕೊಟ್ಟರೆ ಕುಂದಾಪುರದಲ್ಲಾದ ಬಂಟ ಫ್ಯಾಕ್ಟರ್ ಲಾಸ್ ಸರಿದೂಗಿಸಬಹುದೆಂಬುದು ಕಲ್ಲಡ್ಕನ ಕರಾಮತ್ತು. ಬಿಜೆಪಿಯ ಯಾವ 'ಸದ್ಗುಣ'ಗಳನ್ನೂ ಅಂಟಿಸಿಕೊಳ್ಳದೆ 'ಜನಪ್ರಿಯ' ಶಾಸಕ ಎನಿಸಿಕೊಂಡಿದ್ದ ಹಾಲಾಡಿ ಶ್ರೀನಿವಾಸ್ ಶೆಟ್ಟಿಗೆ ಅನ್ಯಾಯ ಮಾಡಿದ ಕಲ್ಲಡ್ಕ ಅದಕ್ಕೆ ತಕ್ಕ ಬೆಲೆ ಈಗ ಕುಂದಾಪುರದಲ್ಲಿ ತೆರಬೇಕಾಗಿದೆ. ಜಿಲ್ಲೆಯ ಬಂಟ ಸಮುದಾಯದವರು ಕಲ್ಲಡ್ಕನ ಯಜಮಾನಿಕೆಯ ಬಿಜೆಪಿ ಮೇಲೆ ಮುನಿದಿದ್ದಾರೆ. ಅಷ್ಟೇ ಅಲ್ಲ, ಕುಂದಾಪುರದಲ್ಲೇ ಒಬ್ಬ ಗಟ್ಟಿ ಹುರಿಯಾಳು ಸಿಗದಂಥ ಪರಿಸ್ಥಿತಿ ಬಿಜೆಪಿಗೆ ಬಂದಿದೆ. ಇದಕ್ಕೆಲ್ಲ ಕಲ್ಲಡ್ಕ ಕಂಡುಕೊಂಡಿರುವ ಪರಿಹಾರವೆಂದರೆ, ಕುಂದಾಪುರದಲ್ಲಿ ಬಿಲ್ಲವರ

ಸುರತ್ಕಲ್‌ನನ್ನು ಕ್ಯಾಂಡಿಡೇಟಾಗಿಸಿ ಕಮ್ಯೂನಲ್ ಹುಚ್ಚೆಬ್ಬಿಸಬಹುದೆಂಬ ದೂ(ದು)ರಾಲೋಚನೆ ಕಲ್ಲಡ್ಕನದು. ಈ ಸತ್ಯಜಿತ್ ಖತರ್‌ನಾಕ್ ಕಮ್ಯುನಲ್ ಕ್ರಿಮಿ. ಸತ್ಯಜಿತ್ ಬಿಜೆಪಿ ಕ್ಯಾಂಡಿಡೇಟಾದರೆ ಪಾಲೇಮಾರ್ ಕಂಪನಿಯೇ ಕಡ್ಡಿಯಾಡಿಸಿ ಸೋಲಿಸೋದು ಗ್ಯಾರಂಟಿ. ಕಾಂಗ್ರೆಸ್‌ನಿಂದ ಮಾಜಿ ಶಾಸಕ ಸರ್ವಧರ್ಮ ಪ್ರಿಯ ವಿಜಯಕುಮಾರ್ ಶೆಟ್ಟಿ ಸ್ಪರ್ಧಿಸಿದರಂತೂ ಬಿಜೆಪಿಗೆ ಸೋಲು ಕಟ್ಟಿಟ್ಟ ಬುತ್ತಿ.


ಪಕ್ಕದ ಮಂಗಳೂರು ದಕ್ಷಿಣದಲ್ಲಿ ಸತತ ಮೂರು ಬಾರಿ ಗೆದ್ದಿರುವ ವಿಧಾನಸಭೆಯ ಉಪ ಸ್ಪೀಕರ್ ಯೋಗೀಶ್ ಭಟ್ ಎಂಬ ಕೊಂಕಣಿ ಬ್ರಾಹ್ಮಣನನ್ನು ಕಂಡರೆ ಹೈಕಮಾಂಡ್ ಕಲ್ಲಡ್ಕನಿಗೆ ಅಷ್ಟಕ್ಕಷ್ಟೇ. ಈ ಭಟ್ಟನಿಂದ ಆರ್ಥಿಕವಾಗಿ ಅಥವಾ ಮತೀಯವಾಗಿ ತನಗೆ ಲಾಭವಿಲ್ಲವೆಂಬುದು ಕಲ್ಲಡ್ಕನ ಸಿಟ್ಟಿಗೆ ಕಾರಣ. ಈ ಶಾಸಕ ಭಟ್ಟನೂ ಅಷ್ಟೇ ನಾಲಾಯಕ್. ಈತ ಎಮ್ಮೆಲ್ಲೇ ಎಂಬುದೇ ಜನರಿಗೆ ಗೊತ್ತಿಲ್ಲ. ಯಾವ ಜನಪರ ಕೆಲಸ-ಕಾರ್ಯವೂ ಈತ ಈ ಹದಿನೈದು ವರ್ಷದಲ್ಲಿ ಮಾಡಿಲ್ಲ. ಹೀಗಾಗಿ ಜನರಿಗೆ ಈತನನ್ನು ಶಾಸಕ ಸ್ಥಾನದಲ್ಲಿ ನೋಡಿ ನೋಡಿ ಬೇಸರ ಬಂದಿದೆ. ಆತನಿಗೆ ನಿವೃತ್ತಿ ಕೊಡಲು ಒಂದು ಕಡೆ ಕಲ್ಲಡ್ಕ ಭಟ್ಟ, ಮತ್ತೊಂದು ಕಡೆ ಮತದಾರರು ಪ್ಲಾನ್ ಹಾಕಿದ್ದಾರೆ. ಕಲ್ಲಡ್ಕ ಭಟ್ಟ ತನ್ನ ಮನದಿಚ್ಛೆಯಂತೆ

ಶಾಸಕತ್ವ, ಆಕೆಯ ಗಂಡ ಪ್ರಸಾದ್ ಭಂಡಾರಿಯ ಮತಿ... ಭಂಡಾಟ, ಕಲ್ಲಡ್ಕ ಭಟ್ಟನ ಕರ್ಮಕಾಂಡದಿಂದ ಪುತ್ತೂ... ಬಿಜೆಪಿ ಕೆಸರಿನ ಪಾಲಾಗಿಬಿಟ್ಟಿದೆ. ಉಡುಪಿ-ಚಿಕ್ಕಮಗಳೂ... ಸಂಸದ-ಸಿಎಂ ಆದ ಬಳಿಕ ಸದಾನಂದಗೌಡರಿಗೆ ಸ... ಪುತ್ತೂರಲ್ಲಿ ನೆಲೆ-ಬೆಲೆಯೇ ಇಲ್ಲದಾಗಿದೆ. ಡೀವಿ ಫ್ಯಾ... ಬಿಜೆಪಿಗೆ ಇಲ್ಲಿ ಮೈನಸ್ ಆಗುವುದೇ ಹೆಚ್ಚು. ಡಿ... ಕಲ್ಲಡ್ಕರ ನಡುವಿನ ವೈಷಮ್ಯ ಬಿಜೆಪಿಯನ್ನು ಭೂ... ಮಾಡುತ್ತಿದೆ.

ಈ ಕಲ್ಲಡ್ಕ ಭಟ್ಟ ಬಿಜೆಪಿಯನ್ನು ಗೆಲ್ಲಿಸಲು, ಅಥ... ತನ್ನ ಮಾನ-ಮರ್ಯಾದೆ ಉಳಿಸಿಕೊಳ್ಳಲು ಅದೆಂಥ... ಸರ್ಕಸ್ ಮಾಡಲಿ; ಕ್ಯಾಂಡಿಡೇಟ್‌ಗಳನ್ನೇ ಬದಲಿಸಲಿ ಬಿ... ಮಾತ್ರ ಕರಾವಳಿಯಲ್ಲಿ ಬರ್ಕತ್ತಾಗುವುದು ಕಷ್ಟ. ಕರಾ... ಮತದಾರರು ಬಿಜೆಪಿ ಕ್ಯಾಂಡಿಡೇಟ್‌ಗಳ 'ನಕಲಿ' ಮು... ನೋಡಿ ಮತ ಹಾಕುವ ಕಾಲ ಇದಲ್ಲ. ಬ... ಹುರಿಯಾಳುಗಳ ಹಿಂದಿರುವ ಕಲ್ಲಡ್ಕನ ಪ್ರೇತಾ... ಮತದಾರರಿಗೆ ಈಗ ಕಾಣಿಸಲಾರಂಭಿಸಿದೆ. ಶಾಸಕರ... ಮುಂದಿಟ್ಟುಕೊಂಡು ಕರಾವಳಿಯ ನೆಮ್ಮದಿ ಕೆಡಿಸಿದ, ಲೂ... ಹೊಡೆದ 'ಅಸಲಿ ಪಾಪಿ'ಯ ಪರಿಚಯ ಜನರಿಗಾಗಿ... ಹಾಗಾಗಿ ಈ ಬಾರಿ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಲ್ಲ... ಕರಾಮತ್ತು ನಡೆಯುವುದು ಕಷ್ಟ!!

● ನಹು...

ಸಿಪ್ಪೆ ತಿಂದ ಅಯ್ಯಪ್ಪ ಜೈಲಿಗೆ ಹೋದ
ಹಣ್ಣು ತಿಂದ ವಿಶ್ವನಾಥ್ ಲೂಟಿ ಹೊಡೆದ



ಹಣ್ಣು ತಿಂದೋನು ನುಣುಚಿಕೊಂಡ, ಸಿಪ್ಪೆ ...ೋನು ಸಿಕ್ಕಿಬಿದ್ದ ಎಂಬ ನಾಣ್ನುಡಿ ಮಾದಪ್ಪನಹಳ್ಳಿಯ ...ಬಳಿಕೆ ಪ್ರಕರಣದಲ್ಲಿ ಭಾಗಶಃ ನಿಜವಾಗಿದೆ.

...ಕೆಂದರೆ ಪ್ರಕರಣದ ಮೊದಲ ಆರೋಪಿಯಾಗಿ ...ಮು ಬಂಧಿಸಲ್ಪಡಬೇಕಿದ್ದ ಯಲಹಂಕ ಬಿಜೆಪಿ ಶಾಸಕ ...ಥ್‌ನ ಹೆಸರು ಎಫ್‌ಐಆರ್‌ನಲ್ಲಿ ಹದಿನೈದನೇ ...ಪಿಯ ಸ್ಥಾನದಲ್ಲಿದೆಯೆಂದರೆ, ಎಮ್ಮೆಲ್ಲೇ ಧಮಕಿಗೆ ...ು ನಕಲಿ ದಾಖಲೆ ಸೃಷ್ಟಿಸಿಕೊಟ್ಟ ಗ್ರಾಮ ಲೆಕ್ಕಿಗ, ... ಇನ್ಸ್‌ಪೆಕ್ಟರ್, ತಹಶೀಲ್ದಾರ್‌ಗಳೆಲ್ಲ ಡಿಸಿ ಅಯ್ಯಪ್ಪನ ... ಆರೆಸ್ಟಾಗಿ ಲಾಕಪ್ಪಿಗೆ ಬೀಳುತ್ತಾರೆಂದರೆ ಸಿಪ್ಪೆ ...ೀರಷ್ಟೇ ಸಿಕ್ಕಿಬಿದ್ದ ಹಾಗಾಗಲಿಲ್ಲವೆ?

...ಾದಪ್ಪನಹಳ್ಳಿಯ ಸರ್ಕಾರಿ ಭೂಮಿಯ ಲೂಟಿಯನ್ನು ...ಭದ ಹಂತದಿಂದಲೂ ಪತ್ರಿಕೆ ಬಯಲಿಗೆಳೆಯುತ್ತಲೇ ...ಿ. ಈ ಹಿಂದೆ ನಗರ ಜಿಲ್ಲಾಧಿಕಾರಿಯಾಗಿದ್ದಾಗ ...ಪ್ಪ ಮಾಡಿದ ಸರ್ಕಾರಿ ಜಮೀನುಗಳ ...ಡೆಯ ಬಗ್ಗೆಯೂ ಪತ್ರಿಕೆ ಹತ್ತಾರು ಬಾರಿ ...ೆಗಳ ಸಮೇತ ವರದಿ ಮಾಡುತ್ತಲೇ ಬಂದಿದೆ. ...ಅಯ್ಯಪ್ಪ ಬಂಧನಕ್ಕೊಳಗಾಗಿರುವುದು ಅದರ ... ಪರಿಣಾಮ ಮಾತ್ರವೇ ಹೊರತು ಇಡೀ ...ಬಳಿಕೆಯ ಹಿಂದಿನ ಕಾಣದ ಕೈ ಅಂತಿದ್ದರೆ ...ಯಲಹಂಕ ಶಾಸಕ ವಿಶ್ವನಾಥ್.

...ಈ ಪ್ರಕರಣದಲ್ಲಿ ನನ್ನ ಎಳ್ಳಷ್ಟೂ ಪಾತ್ರವಿಲ್ಲ ...ಹಯ್ಯ ಎಂಬಾತ ಯಾರೋ ನನಗೆ ಗೊತ್ತೇ ...ಆತನ ಮುಖವನ್ನು ನಾನು ನೋಡೇ ಇಲ್ಲ' ... ಕಂಡಕಂಡ ಟಿವಿಗಳಿಗೆ ಹೇಳಿಕೆ ಕೊಡುತ್ತಿದ್ದಾರೆ ...ವಿಶ್ವನಾಥ್. ಅದು ನಿಜ ಕೂಡ. ಇಲ್ಲಿ 80ರ ...ಕ ನರಸಿಂಹಯ್ಯ ಶಾಸಕ ವಿಶ್ವನಾಥ್‌ಗೆ ಸಂಬಂಧಿಯಲ್ಲ ...ದು ಎಷ್ಟು ಸತ್ಯವೋ ಇದೇ ನರಸಿಂಹಯ್ಯನನ್ನು ...ಟ್ಟುಕೊಂಡು ಭೂಮಿ ದೋಚಿದವರೆಲ್ಲರೂ ...ಹಂಕ ಶಾಸಕರಿಗೆ ಒಂದೋ ನೆಂಟರು ಅಥವಾ ...ಗರೆಂಬುದು ಅಷ್ಟೇ ಸತ್ಯ!

ಮಾದಪ್ಪನಹಳ್ಳಿಯ ಸರ್ವೇ ನಂ.62 ರಲ್ಲಿದ್ದ 32.04 ಎಕರೆ ಭೂಮಿಗೆ ನಕಲಿ ದಾಖಲೆ ಸೃಷ್ಟಿಸುವಲ್ಲಿ ವಿಲೇಜ್ ಅಕೌಂಟೆಂಟ್ ವೆಂಕಟೇಶ್ವರಲು, ರೆವಿನ್ಯೂ ಇನ್ಸ್‌ಪೆಕ್ಟರ್ ಬಾಲಕೃಷ್ಣಮೂರ್ತಿ, ವಿಶೇಷ ತಹಶೀಲ್ದಾರ್ ಗೋಪಾಲಸ್ವಾಮಿ ಮತ್ತು ಹೆಸರಘಟ್ಟದ ಸಬ್ ರಿಜಿಸ್ಟ್ರಾರ್ ರವಿಕುಮಾರ್ ಪಾತ್ರವಿರುವುದು ದಾಖಲೆಗಳ ಸಮೇತ ಸಾಬೀತಾಗುತ್ತದೆ ನಿಜ. ಇಂಥ ದಾಖಲೆಗಳನ್ನಿಟ್ಟುಕೊಂಡೇ ಜಿಲ್ಲಾಧಿಕಾರಿ ಅಯ್ಯಪ್ಪ ಸರ್ಕಾರಿ ಭೂಮಿಯನ್ನು ನಕಲಿ ದಾಖಲೆಗೆ ಒಡ್ಡಿರಬಹುದು. ಆದರೆ ಇಡೀ 32 ಎಕರೆ ಸರ್ಕಾರಿ ಭೂಮಿ ಕೈ ಸೇರಿದ್ದು ಯಾರಿಗೆ? ಇಡೀ ಲೂಟಿಯ ಸೂತ್ರಧಾರರು ಯಾರು?

ಪ್ರಾರಂಭದಲ್ಲಿ ನರಸಿಂಹಯ್ಯ ಎಂಬ ದಿಕ್ಕಿಲ್ಲದ ಮುದುಕನ ಹೆಸರಿಗೆ ದಾಖಲೆ ಸೃಷ್ಟಿಯಾಗಿದ್ದು ನಿಜವಾದರೂ ಅದು ಆತನ ಕೈ ಸೇರುವ ಮೊದಲೇ ದೊಡ್ಡ ತುಮಕೂರಿನ ಅರವಿಂದ್, ಸಿಂಗನಾಯಕನಹಳ್ಳಿಯ ಶ್ರೀಚರಣ್ ಮತ್ತು ಮುನಿರೆಡ್ಡಿ, ಅದೇ ವಿಶ್ವನಾಥ್‌ಪುರದ ಮಂಜುನಾಥ್ ಮತ್ತು ಬಿಲ್ಡರ್ ಸೋಮಶೇಖರ ರೆಡ್ಡಿ ಎಂಬುವವರ ಹೆಸರಿಗೆ ಕ್ರಯಪತ್ರದ ಮೂಲಕ ನೋಂದಣಿಯಾಗಿತ್ತು. ಅದೂ ಏಳು ಕೋಟಿಗೆ!

ಹೆಸರಘಟ್ಟದ ಸಬ್ ರಿಜಿಸ್ಟ್ರಾರ್ ರವಿಕುಮಾರ್ ಮೂಲಕ ಏಳು ಕೋಟಿಗೆ ನಿರ್ಗತಿಕ ಮುದುಕ ನರಸಿಂಹಯ್ಯನಿಂದ 32 ಎಕರೆ ಖರೀದಿಸಿದರೆನ್ನಲಾದ ಈ ಐವರ ಪೈಕಿ ಮುನಿರೆಡ್ಡಿ ಶಾಸಕ ವಿಶ್ವನಾಥ್‌ರ ಖಾಸಾ ಅಕ್ಕನ ಮಗ.

ವಿಶ್ವನಾಥ್ ನೆರಳಲ್ಲೇ ಹೆಡೆಯೆತ್ತಿದ ಕುಖ್ಯಾತ ನೆಲಗಳ್ಳ ಮತ್ತು ವಿಶ್ವನಾಥ್‌ರ ಒಂದು ಭಾಗದ ರಿಯಲ್ ಎಸ್ಟೇಟ್ ದಂಧೆಗೆ ಬೇನಾಮೀ!

ಇಲ್ಲಿ ಗಮನಿಸಬೇಕಾದ ಅತೀ ಮುಖ್ಯ ಸಂಗತಿಯೆಂದರೆ, ಯಾವ 32 ಎಕರೆಗಳ ಸರ್ಕಾರಿ ಭೂಮಿಯನ್ನು ಈ ರೀತಿ ವಿಶ್ವನಾಥ್ ಸಂಬಂಧಿಗಳೆಲ್ಲ ಸೇರಿ ದೋಚಿದ್ದಾರೋ ಅದು ಶಾಸಕ ವಿಶ್ವನಾಥ್ ಪ್ರತಿನಿಧಿಸುವ ಯಲಹಂಕದ ವ್ಯಾಪ್ತಿಗೆ ಒಳಪಡುವ ಸೊತ್ತು ಮತ್ತು ಅದನ್ನು ಲಪಟಾಯಿಸಲು ನೆರವಾದ ಕಂದಾಯ ಇಲಾಖೆ ಸಿಬ್ಬಂದಿಗಳೆಲ್ಲರನ್ನೂ ಶಾಸಕ ವಿಶ್ವನಾಥ್ ಶಿಫಾರಸ್ಸಿನ ಮೇರೆಗೇ ನೇಮಿಸಲಾಗಿತ್ತು.

ತನ್ನದೇ ಬಿಜೆಪಿ ಸರ್ಕಾರವಿರುವಾಗ ತನ್ನದೇ ಕ್ಷೇತ್ರದ ಸರ್ಕಾರಿ ಭೂಮಿಯನ್ನು ತಾನೇ ಹಾಕಿಸಿಕೊಂಡ ಕಂದಾಯ ಅಧಿಕಾರಿಗಳ ಮೂಲಕ ತನ್ನದೇ ಸಂಬಂಧಿಕರು-ಬೆಂಬಲಿಗರನ್ನು ಮುಂದಿಟ್ಟುಕೊಂಡು ಕೊಳ್ಳೇ ಹೊಡೆದ ಶಾಸಕ ವಿಶ್ವನಾಥ್ ಈಗ 'ನನಗೂ ಈ ಹಗರಣಕ್ಕೂ ಸಂಬಂಧವೇ ಇಲ್ಲ, ನರಸಿಂಹಯ್ಯ ಎಂಬಾತನ ಮುಖವನ್ನೇ ನಾನು ನೋಡಿಲ್ಲವಾದ್ದರಿಂದ ಈ ಭೂ ದರೋಡೆಗೂ ನನಗೂ ಸಂಬಂಧವೇ ಇಲ್ಲ' ಎಂದು ವಾದಿಸುತ್ತಿರುವುದು ಎಷ್ಟು ಸರಿ?

ಮಾದಪ್ಪನಹಳ್ಳಿಯ ಸರ್ಕಾರಿ ಸೊತ್ತಿಗೆ ಶಾಸಕ ವಿಶ್ವನಾಥ್ ಕೈಹಾಕಿದ್ದರ ಬಗ್ಗೆ ಇಲ್ಲಿಗೆ ವರ್ಷದ ಹಿಂದಿನಿಂದಲೇ ಪತ್ರಿಕೆ ವರದಿ ಮಾಡುತ್ತಲೇ ಇತ್ತಾದರೂ ಡಿಸಿ ಅಯ್ಯಪ್ಪ ಆಗಲಿ,



ಅರವಿಂದ್ ಮಂಜುನಾಥ್ ರೆಡ್ಡಿ ಮುನಿರೆಡ್ಡಿ ಚರಣ್ ಸೋಮಶೇಖರ್ ರೆಡ್ಡಿ

ಬಿಲ್ಡರ್ ಸೋಮಶೇಖರ್ ರೆಡ್ಡಿ ಎಂಬಾತ ಎಮ್ಮೆಲ್ಲೇ ವಿಶ್ವನಾಥ್‌ರ ಸ್ವಂತ ಚಿಕ್ಕಮ್ಮನ ಮಗ. ಶ್ರೀಚರಣ್ ಕೂಡ ಶಾಸಕ ವಿಶ್ವನಾಥ್‌ರ ಹತ್ತಿರದ ಸಂಬಂಧಿ. ಮಿಕ್ಕಂಥೆ ಮಂಜುನಾಥ್ ಯಲಹಂಕದ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಮತ್ತು ವಿಶ್ವನಾಥ್‌ರ ನಂಬಿಕಸ್ತ ಬಂಟನಾದರೆ 5 ಎಕರೆ ಹೊಡೆದ ದೊಡ್ಡ ತುಮಕೂರಿನ ಅರವಿಂದ್ ಶಾಸಕ

ಕಂದಾಯ ಇಲಾಖೆಯ ಮಂದಿಯಾಗಲಿ ಈ ಬಗ್ಗೆ ಕಿಂಚಿತ್ತೂ ಸ್ಪಂದಿಸಲಿಲ್ಲ. ಸದ್ಯದ ಮಾರುಕಟ್ಟೆ ಮೌಲ್ಯದ ಪ್ರಕಾರವೇ ಮಾದಪ್ಪನಹಳ್ಳಿಯಲ್ಲಿ ಎಕರೆಗೆ ಮೂರರಿಂದ ಮೂರುವರೆ ಕೋಟಿಯ ಬೆಲೆಯಿದೆ. ಆ ಪ್ರಕಾರ ಇದು ಕಮ್ಮಿಯೆಂದರೆ ನೂರು ಕೋಟಿಯ ಸೊತ್ತಾಗುತ್ತದೆ. ಈ ಬಗ್ಗೆ ಪತ್ರಿಕೆಯ ವರದಿಯನ್ನು ಗಮನಿಸಿದ ಮಾದಪ್ಪನಹಳ್ಳಿಯ ಯುವಕ ರೈತರಾದ ಹರಿ ಮತ್ತು ದೇವರಾಜ್ ಆಲಿಯಾಸ್ ಅನಿಲ್‌ಕುಮಾರ್ ಅಹೋರಾತ್ರಿ ಹಗರಣದ ಬೆನ್ನಿಗೆ ಬಿದ್ದು ಲೋಕಾಯುಕ್ತರ ಮೊರೆ ಹೊಕ್ಕಿದ್ದಾರೆ.

ಆದರೆ ಶಾಸಕ ವಿಶ್ವನಾಥ್ ದಾರ್ಷ್ಯ ಹೇಗಿತ್ತೆಂದರೆ ತನ್ನ ಭೂಕಬಳಿಕೆಯ ವಿರುದ್ಧ ಕೋರ್ಟ್ ಮೆಟ್ಟಲೇರಿದರೆಂಬ ಒಂದೇ ಕಾರಣಕ್ಕೆ ಮಾದಪ್ಪನಹಳ್ಳಿಯ ದೇವರಾಜ್ ವಿರುದ್ಧ ರೌಡಿಗಳನ್ನು ಛೂಬಿಟ್ಟ. 2012ರ ಅಕ್ಟೋಬರ್‌ನಲ್ಲಿ ಸರಿ ಸುಮಾರು 50 ಮಂದಿಯಿದ್ದ ವಿಶ್ವನಾಥ್ ಬಂಟರು ಮಾದಪ್ಪನಹಳ್ಳಿಯ ದೇವರಾಜ್ ಮನೆಗೇ ನುಗ್ಗಿ ಹೊಡೆದಿದ್ದಾರೆ. ಈ ಬಗ್ಗೆ ದೇವರಾಜ್ ರಾಜಾನುಕುಂಟೆ ಪೊಲೀಸ್ ಠಾಣೆಗೆ ದೂರಿತ್ತರೆ ಆಗ ರಾಜಾನುಕುಂಟೆ ಠಾಣೆಯ ಎಸ್.ಐ. ಆಗಿದ್ದದ್ದು ವಿಶ್ವನಾಥ್‌ರ ನಂಬಿಕಸ್ತ ಬಂಟನಂತಿದ್ದ ನಾಗರಾಜ್!

ಆವತ್ತು ದೇವರಾಜ್ ಮನೆಗೆ ನುಗ್ಗಿ ಧಾಂದಲೆ ಮಾಡಿದ ವಿಶ್ವನಾಥ್‌ರ ಬಂಟರ ಪೈಕಿ ಪ್ರಮುಖರಾಗಿದ್ದದ್ದು, ವೃದ್ಧ ನರಸಿಂಹಯ್ಯನಿಂದ ಪುಡಿಗಾಸಿಗೆ ಭೂಮಿ ಲಪಟಾಯಿಸಿದ ಇದೇ ಮುನಿರೆಡ್ಡಿ, ಅರವಿಂದ್, ಶ್ರೀಚರಣ್, ಮಂಜುನಾಥ್, ಬಿಲ್ಡರ್ ಸೋಮಶೇಖರರೆಡ್ಡಿ ಮತ್ತು ವಿಶ್ವನಾಥ್‌ರ ಮತ್ತೊಬ್ಬ ಬಂಟ ದಿಬ್ಬೂರು ಜಯಣ್ಣ.

ಇವರ್ಯಾರನ್ನೂ ಪೊಲೀಸರು ಮುಟ್ಟದಂತೆ ಕಾಪಾಡಿದ್ದೇ ವಿಶ್ವನಾಥ್. ಸಬ್‌ಇನ್ಸ್‌ಪೆಕ್ಟರ್ ನಾಗರಾಜ್ ಬಡ್ತಿ ಪಡೆದು ಆ ಜಾಗಕ್ಕೆ ವಿಶ್ವನಾಥ್‌ಗೆ ಆತ್ಮೀಯರಾಗಿದ್ದ ವಿಜಯ್ ಕುಮಾರ್‌ರನ್ನು ತರಲಾಯಿತಾದರೂ ವಿಜಯ್‌ಕುಮಾರ್ ತನ್ನ ಸಹೋದ್ಯೋಗಿ ಪೇದೆಯಿಂದಲೇ ಗುಂಡಿಕ್ಕಿ ಬಲಿಯಾಗಬೇಕಾಯ್ತು.

ಇದೇ ಹೊತ್ತಿಗೆ ನಗರ ಡಿಸಿ ಆಯ್ಯಪ್ಪನ ಹೆಗಲ ಮೇಲೆ ವಿಶ್ವನಾಥ್ ಕೈ ಹಾಕಿದ್ದಾಗಿತ್ತು. ಒಂದು ಮೂಲದ ಪ್ರಕಾರ ಇದೊಂದೇ ಕೇಸಲ್ಲಿ ಡಿಸಿ ಅಯ್ಯಪ್ಪ ಹೊಡೆದದ್ದು ಬರೋಬ್ಬರಿ ಹತ್ತು ಕೋಟಿಯಷ್ಟು!



ತಹಶೀಲ್ದಾರ್ ಗೋಪಾಲಸ್ವಾಮಿ, ಆರ್.ಐ. ಬಾಲಕೃಷ್ಣಮೂರ್ತಿ ಮತ್ತು ಗ್ರಾಮ ಲೆಕ್ಕಿಗ ವೆಂಕಟೇಶ್ವರಲುಗೆ ಕೋಟಿ ಮೊತ್ತದಲ್ಲೇ ಲಂಚದ ಬಟವಾಡೆಯಾಗಿತ್ತೆಂಬುದು ಇಡೀ ಯಲಹಂಕದುದ್ದಕ್ಕೂ ಸುದ್ದಿಯಾಗಿತ್ತು. ಆದರೆ ಇಷ್ಟೆಲ್ಲ ದಬ್ಬಾಳಿಕೆ, ಒತ್ತಡ ಬಳಸಿಯೂ ಮಾದಪ್ಪನಹಳ್ಳಿಯ 32 ಎಕರೆ ದೋಚುವುದು ಸುಲಭವಾಗಿರಲಿಲ್ಲ. ಲೋಕಾಯುಕ್ತ ಕೋರ್ಟು ನೇರವಾಗೇ ತನಿಖೆಗೆ ಆದೇಶಿಸಿತ್ತು. ಲೋಕಾಯುಕ್ತ ಎಡಿಜಿಪಿ ಸತ್ಯನಾರಾಯಣರಾವ್ ಮತ್ತು ಡಿವೈಎಸ್‌ಪಿ ಪಾಲಾಕ್ಷಯ್ಯರೇ ಖುದ್ದಾಗಿ ತನಿಖೆಯ ಉಸ್ತುವಾರಿ ವಹಿಸಿದ್ದರು. 32 ಎಕರೆಯನ್ನು ಇಷ್ಟೆಲ್ಲ ಪ್ರಭಾವ ಬೀರಿ ತನ್ನ ಹೆಸರಿಗೆ ಮಾಡಿಸಿಕೊಂಡ ದೈತ್ಯನಾದರೂ ಯಾರೆಂದು ಕೆದಕ ಹೊರಟರೆ ಲೋಕಾ ಪೊಲೀಸರಿಗೆ ಅಚ್ಚರಿ ಕಾದಿತ್ತು.

ಹೆಸರಿಗಷ್ಟೇ ಸೊತ್ತು ಏಳು ಕೋಟಿಗೆ ಪರಬಾರೆಯಾಗಿತ್ತಾದರೂ ಅದನ್ನು ರಿಜಿಸ್ಟರ್ ಮಾಡಿಸಿಕೊಟ್ಟಿದ್ದ ನರಸಿಂಹಯ್ಯನಿಗೆ ಸಿಕ್ಕಿದ್ದು ಕೇವಲ ಒಂದು ಲಕ್ಷ ಮಾತ್ರ!

ಕೇವಲ ಒಂದು ಲಕ್ಷದ ಪುಡಿಗಾಸನ್ನು ಕೈಗಿತ್ತು ನರಸಿಂಹಯ್ಯನ ಹೆಸರಲ್ಲಿ ಇಡೀ ಗ್ಯಾಂಗ್ ನೂರು ಕೋಟಿಯ ಆಸ್ತಿ ಹೊಡೆದಿತ್ತು. ಆಗಲೇ ಇಡೀ ಪ್ರಕರಣದ ಗಂಭೀರತೆ ಲೋಕಾಯುಕ್ತ ಪೊಲೀಸರಿಗೆ ಅರ್ಥವಾಗಲಾರಂಭಿಸಿದ್ದು. ಇದೇ ಹೊತ್ತಿಗೆ ಮತ್ತೊಂದು ಅವಗಡ ಸಂಭವಿಸಿತು. ತನ್ನ ವಿರುದ್ಧ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದಾರೆಂದೂ, ಎಫ್‌ಐಆರ್‌ನಲ್ಲಿ ತನ್ನ ಹೆಸರೂ ಇದೆಯೆಂದೂ ಗೊತ್ತಾಗುತ್ತಿದ್ದಂತೆ ಡೆಪ್ಯೂಟಿ ತಹಶೀಲ್ದಾರ್ ನಾಗಯ್ಯ ಹೃದಯಾಘಾತಕ್ಕೊಳಗಾಗಿ ಸತ್ತು ಹೋದ!

ಮಿಕ್ಕಂಥೆ ವಿಲೇಜ್ ಅಕೌಂಟೆಂಟ್ ವೆಂಕಟೇಶ್ವರಲು ಕೆಲಸ ಬಿಟ್ಟು ನಾಪತ್ತೆಯಾಗಿದ್ದ. ಆರ್.ಐ. ಬಾಲಕೃಷ್ಣ ತಹಶೀಲ್ದಾರ್ ಗೋಪಾಲಸ್ವಾಮಿ, ಸಬ್‌ರಿಜಿಸ್ಟ್ರಾರ್ ರವಿಕುಮಾರ್ ಮುಂತಾದವರೆಲ್ಲ ಲೋಕಾಯುಕ್ತ ಪೊಲೀಸರೆದುರು ಹಾಜರಾಗಿ ವಿಚಾರಣೆ ಎದುರಿಸಿದರಾದರೂ ಡಿಸಿ ಅಯ್ಯಪ್ಪ ಮಾತ್ರ 'ನನಗೆ ಟೈಮೇ ಇಲ್ಲ, ಚುನಾವಣೆ ಬೇರೆ ಸಮೀಪಿಸುತ್ತಿದೆಯಾದ್ದರಿಂದ ಅದರ ತಯಾರಿಗೆ ನಾನು ಹಗಲಿರುಳೂ ದುಡಿಯಬೇಕಾದ್ದರಿಂದ ಈ ವರ್ಷದ ಡಿಸೆಂಬರ್ ತನಕ ನಾನು ವಿಚಾರಣೆಗೆ ಹಾಜರಾಗುವುದು ಸಾಧ್ಯವೇ ಇಲ್ಲ' ಎಂದು ಲೋಕಾಯುಕ್ತರಿಗೆ ಪತ್ರ ಬರೆದಿದ್ದ.

ಅಲ್ಲಿಗೆ ಡಿಸಿ ಅಯ್ಯಪ್ಪನ ಪಾಪದ ಕೊಡ ತುಂಬಿ ಬಂದಿತ್ತು. ನೂರು ಕೋಟಿ ರೂಪಾಯಿಗಳ ಬೆಲೆ ಬಾಳುವ ಸರ್ಕಾರಿ ಸೊತ್ತನ್ನು ಲಂಗು ಲಗಾಮಿಲ್ಲದೆ ದೋಚಿದ್ದು ಸ್ಪಷ್ಟವಾಗಿತ್ತು. ಮಾರ್ಚ್ 13ರ ಬುಧವಾರ ಬೆಳಗ್ಗೆಯೇ ಲೋಕಾಯುಕ್ತ ಇನ್ಸ್‌ಪೆಕ್ಟರ್‌ಗಳಾದ ಆಂಜನ್‌ಕುಮಾರ್ ಮತ್ತು ನಿರಂಜನ್ ತಂಡ ದೇವನಹಳ್ಳಿ ತಹಶೀಲ್ದಾರ್ ಕಚೇರಿ ಮೇಲೆ ದಾಳಿ ನಡೆಸಿ ಅಲ್ಲಿ ಪರಿಶೀಲನೆಯ ನೆಪದಲ್ಲಿ ತಲೆ ಮರೆಸಿಕೊಂಡಿದ್ದ ಡಿಸಿ ಅಯ್ಯಪ್ಪನನ್ನು ಬಂಧಿಸಿತು. ಸದ್ಯ ಅಯ್ಯಪ್ಪ ಬೈಲು ಪಡೆದು ಹೊರಗೆ ಬಂದಿದ್ದಾನೆ. ಆದರೆ ಈ ಎಲ್ಲಾ ಹಗಲು ದರೋಡೆಯ ಸೂತ್ರಧಾರನಾದ ಯಲಹಂಕ ಶಾಸಕ ವಿಶ್ವನಾಥ್ ಮಾತ್ರ ಜೈಲು ಪಾಲಾಗದೇ ಬಚಾವಾಗಿ ಬಿಟ್ಟ!

ಶಾಸಕ ವಿಶ್ವನಾಥ್ ಜೈಲು ಪಾಲಾಗದ ಹಾಗೆ ಬಚಾವು ಮಾಡಲೆಂದೇ ಡಿಸಿ ಅಯ್ಯಪ್ಪನನ್ನು ಹಣಿಯಲಾಯ್ತೆ? ಅಥವಾ ಇದು ವಿಶ್ವನಾಥ್‌ನ ಜೈಲು ಕಾಯಕಕ್ಕೆ ಮುನ್ಸೂಚನೆಯೆ?

● ರಾ. ಸೋಮನಾಥ್

...ಗರ ಡಿಸಿ ಗಾದಿಯೆಂಬ ಮುಳ್ಳಿನ ಕಿರೀಟ
...ತ್ತು ಸರ್ಕಾರಿ ಸೊತ್ತಿಗೆ ಕೈಯಿಟ್ಟವರ ಕಪಟ

...ಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯೆಂದರೆ ಅದು ಅಕ್ಷರಶಃ ಮುಳ್ಳಿನ ಕಿರೀಟವೆ. ಹಿಂದೆ ರಾಮಾಂಜಿನಪ್ಪ ... ಪಾಲಾಗಿದ್ದು ಗೊತ್ತಿದ್ದೂ ಅಯ್ಯಪ್ಪ ಪಾಠ ಕಲಿಯಲಿಲ್ಲ. ಈತ ಜೈಲಿಗೆ ಹೋಗಬೇಕಾದ ಸಂಕಷ್ಟ ಕಾಲದಲ್ಲಿ ...ನ್ನು ಮುಂದಿಟ್ಟುಕೊಂಡು ...ರು ಕೋಟಿಯ ಸರ್ಕಾರಿ ...ಮಿ ದೋಚಿದ್ದ ಬಿಜೆಪಿ ...ರದ ಮಂತ್ರಿ, ಶಾಸಕ, ...ಗಳ್ಯಾರೂ ಅಪ್ಪಿತಪ್ಪಿಯೂ ...ನತ್ತ ತಲೆ ಹಾಕಲಿಲ್ಲ.




ನಂದೀಶ್ ರೆಡ್ಡಿ ಕಟ್ಟಾ ನಾಯ್ಡು ಅರವಿಂದ ಲಿಂಬಾವಳಿ

... ರೀತಿ ಅಯ್ಯಪ್ಪನ ಮೂಲಕ ... ಭೂಮಿ ದೋಚಿದ ಬಿಜೆಪಿ ...ದ ಪ್ರಮುಖರ ಪೈಕಿ ಯಡ್ಡಿ ಮಗಳು ಉಮಾದೇವಿಯದ್ದು ದೊಡ್ಡ ಹೆಸರಾದರೆ ನಂತರದ್ದು ಶೋಭಾ ...ಜೆಯದ್ದು. ದೊಡ್ಡಗುಬ್ಬಿ ಕೆರೆಯ ಒಂದು ಭಾಗವನ್ನೇ ತನ್ನ ಬೇನಾಮೀ ಬಿಲ್ಡರ್ ಜೈಶಂಕರನ ಮೂಲಕ ...ದ ಕರಂದ್ಲಾಜೆ ಅದಕ್ಕೆ ಬಳಸಿಕೊಂಡಿದ್ದು ಡಿಸಿ ಅಯ್ಯಪ್ಪನನ್ನೇ. ಮಂತ್ರಿ ಲಿಂಬಾವಳಿಯೂ ಇದೇ ದೊಡ್ಡಗುಬ್ಬಿ ... ಜೊತೆ ಮಹದೇವಪುರದ ಸುತ್ತಮುತ್ತಲ 20 ಎಕರೆಗೂ ಅಧಿಕ ಸರ್ಕಾರಿ ಸೊತ್ತನ್ನು ಲಪಟಾಯಿಸಿದ್ದ. ...ಪುರಂ ಶಾಸಕ ನಂದೀಶ್ ರೆಡ್ಡಿ ಒಬ್ಬನೇ 50 ಎಕರೆಗೂ ಅಧಿಕ ಸರ್ಕಾರಿ ಭೂಮಿಗೆ ಅಯ್ಯಪ್ಪನ ಮೂಲಕವೇ ...ದಾಖಲೆ ಸೃಷ್ಟಿಸಿದ.

...ೊಮ್ಮನಹಳ್ಳಿಯ ನೆಲಗಳ್ಳ ಶಾಸಕ ಸತೀಶ್ ರೆಡ್ಡಿ, ಯಲಹಂಕ ಶಾಸಕ ವಿಶ್ವನಾಥ್, ಕಟ್ಟಾ ನಾಯ್ಡು, ಸಂಸದ ...ಗೌಡ, ಮತ್ತೊಬ್ಬ ಬಿಜೆಪಿ ನಾಯಕ ಪ್ರಸಾದ್ ರೆಡ್ಡಿ, ಹೀಗೆ ಡಿಸಿ ಅಯ್ಯಪ್ಪನಿಗೆ ಧಮಕಿ ಕೊಟ್ಟೋ ಲಂಚ ... ಬೆಂಗಳೂರು ಸುತ್ತಮುತ್ತಲ ನೂರಾರು ಕೋಟಿ ಮೌಲ್ಯದ ಸರ್ಕಾರಿ ಭೂಮಿಯನ್ನು ಕಬಳಿಸಿದ ಪ್ರಭಾವಿಗಳ ... ಇಷ್ಟಾದರೂ ಇವರ್ಯಾರು ತಮ್ಮ ಭೂ ಕೊಳ್ಳೆಗೆ ನೆರವಾದ ಅಯ್ಯಪ್ಪ ಜೈಲು ಪಾಲಾಗುತ್ತಿದ್ದರೆ ಕಾಟಾಚಾರಕ್ಕೂ ... ಹೇಳಲಿಲ್ಲ. ನಗುವಾಗ ಎಲ್ಲ ನೆಂಟರು ಅಳುವಾಗ ಯಾರೂ ಇಲ್ಲ ಎಂಬ ವಿಷಾದ ಗೀತೆಗೆ ಅಯ್ಯಪ್ಪ ...ನ ಪಾತ್ರಧಾರಿಯಷ್ಟೆ. ಇಷ್ಟಾದ ಮೇಲಾದರೂ ಅಧಿಕಾರಿಗಳು ಪಾಠ ಕಲಿಯುತ್ತಾರಾ?

...ೋಡಬೇಕು. ಬಳ್ಳಾರಿಯ ಗಣಿಗಳಿಗಿಂತಲೂ ಬಂಗಾರದ ಬೆಲೆಯುಳ್ಳ ಬೆಂಗಳೂರು ಸುತ್ತಮುತ್ತಲ ಸರ್ಕಾರಿ ..., ಕೆರೆ, ಗೋಮಾಳಗಳು ಇನ್ನು ಯಾರ್ಯಾರನ್ನು ಜೈಲು ಪಾಲು ಮಾಡುತ್ತೋ ಬಲ್ಲವರ್ಯಾರು?

JDS ಎಲೆಕ್ಷನ್ ಖರ್ಚಿಗೆ IAS ವೀರಭದ್ರಯ್ಯನ ಕಳ್ಳ ದುಡ್ಡು!



ಎಂ.ವಿ. ವೀರಭದ್ರಯ್ಯ ಒಬ್ಬ ಐಎಎಸ್ ಅಧಿಕಾರಿ.

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಮೂಲ ಸೌಕರ್ಯ ವಿಭಾಗದ ನಿರ್ದೇಶಕನಾಗಿರುವ ವೀರಭದ್ರಯ್ಯ ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಾರ್ಟಿಯ ಎಲೆಕ್ಷನ್ ಖರ್ಚಿಗೆಂದು ಕೋಟ್ಯಂತರ ರೂಪಾಯಿ ಹರಿಸಲು ತಯ್ಯಾರಾಗಿ ನಿಂತಿದ್ದಾನೆ! ವರ್ಷಕ್ಕೆ ಆರೆಂಟು ಲಕ್ಷ ರೂಪಾಯಿ ಮಾತ್ರ ಸಂಬಳ ಪಡೆಯಬಹುದಾದ ಒಬ್ಬ ಅಧಿಕಾರಿ ಒಂದು ರಾಜಕೀಯ ಪಕ್ಷಕ್ಕೇ ಕೋಟ್ಯಂತರ ರೂಪಾಯಿ ಫಂಡು ಕೊಡಲು ಹೊರಡುತ್ತಾನೆಂದರೆ....

ಅವನೆಂತಾ ಲಂಚಖೋರನಾಗಿರಬೇಕು?

ಆವನ ಸೇವಾ ಕೆರಿಯರ್ ಅದೆಂತ್ತಾದಿರಬಹುದು??

ಮಾತು ನಂಬಿ ಈ ವೀರಭದ್ರಯ್ಯನು ಸ್ವಯಂ ನಿವೃತ್ತಿ ತಗೊಳ್ಳಲು 2012ರ ಡಿಸೆಂಬರ್‌ನಲ್ಲೇ ಅರ್ಜಿ ಹಾಕಿದ್ದ.

ಆದರೆ ಸರ್ಕಾರ ಆ ಮನವಿಯನ್ನು ತಿರಸ್ಕರಿಸಿದೆ.

ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಮಧುಗಿರಿ ಕ್ಷೇತ್ರದಲ್ಲಿ ಪದೇಪದೇ ಕಾಣಿಸಿಕೊಳ್ಳುತ್ತಾ ಬಂದಿರುವ ವೀರಭದ್ರಯ್ಯ ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯತಿ, ತಾಲ್ಲೂಕು, ಜಿಲ್ಲಾ ಪಂಚಾಯತಿ ಎಲೆಕ್ಷನ್‌ನಲ್ಲಿ, ಟೌನ್ ಮುನಿಸಿಪಾಲಿಟಿ, ಪಿಎಲ್‌ಡಿ ಬ್ಯಾಂಕ್ ಎಲೆಕ್ಷನ್‌ಗಳಲ್ಲೂ ಜೆಡಿಎಸ್ ಪಾರ್ಟಿಯ ಅಭ್ಯರ್ಥಿಗಳಿಗೆ ಲಕ್ಷಲಕ್ಷ ದುಡ್ಡು ಕೊಟ್ಟು ರಾಜಕೀಯ ನಡೆಸಿದ್ದಾನೆ. ತುಮಕೂರಿನಲ್ಲಿ ಜೆಡಿಎಸ್‌ನವರು ನಡೆಸಿದ ರ್‍ಯಾಲಿಗೂ ಯಥೇಚ್ಛ ಹಣ ಖರ್ಚು ಮಾಡಿ ಮಧುಗಿರಿಯಿಂದ ನೂರು ಬಸ್‌ಗಳಲ್ಲಿ ಜನ ತುಂಬಿಸಿ ಕರೆತಂದಿದ್ದ.

ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮಧುಗಿರಿಯ ಜೆಡಿಎಸ್ ಕ್ಯಾಂಡಿಡೇಟುಗಳಿಗೆ ಬಿ ಫಾರಂ ಹಂಚಿದವನೂ ಇದೇ ಐಎಎಸ್ ಆಫೀಸರ್ ವೀರಭದ್ರಯ್ಯ!

ಆಶ್ಚರ್ಯ ಏನೆಂದರೆ ಓರ್ವ ಸರ್ಕಾರಿ ಹಿರಿಯ ಅಧಿಕಾರಿಯಾಗಿರುವ ವೀರಭದ್ರಯ್ಯ ಹೀಗೆ ನೇರವಾಗಿ ಜೆಡಿಎಸ್ ಪರವಾಗಿ ಓಡಾಡುತ್ತಿದ್ದಾಗಲೂ ಆ ಬಗ್ಗೆ ಅನೇಕ ಸಾಕ್ಷಿ ಪುರಾವೆಗಳಿದ್ದರೂ ಇಲಾಖಾ ಮಂತ್ರಿ ಈಶ್ವರಪ್ಪನಾಗಲಿ ಅಥವಾ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ರಾಗಲಿ ಯಾವ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿಲ್ಲ.

ಅಂದಹಾಗೆ ಐಎಎಸ್ ವೀರಭದ್ರಯ್ಯನ ವಿರುದ್ಧ 1999ರಲ್ಲಿ ಹಾಗೂ 2011ರಲ್ಲಿ ಹೀಗೆ ಎರಡು ಸಾರಿ ಲೋಕಾಯುಕ್ತ ರೇಡ್ ಆಗಿದೆ. ಈ ರೇಡ್ ನಡೆದಾಗ ವೀರಭದ್ರಯ್ಯನ ಮನೆಯಲ್ಲಿ, ನೆಂಟರ ಮನೆಗಳಲ್ಲಿ ಕೋಟ್ಯಂತರ ರೂಪಾಯಿಗಳ ಅಕ್ರಮ ಆಸ್ತಿಯೂ

ಖರ್ಚಿಗಾಗಿ ವೀರಭದ್ರಯ್ಯನ ತಿಜೋರಿಯತ್ತಲೂ ಒಂದು ಕಣ್ಣು ನೆಟ್ಟಿದ್ದಾರೆ. ಅಂದಹಾಗೆ 1986ರಲ್ಲಿ ಕೆಎಎಸ್ ಅಧಿಕಾರಿಯಾಗಿ ನಂತರ 2011ರಲ್ಲಿ ಐಎಎಸ್‌ಗೆ ಭಡ್ತಿ ಪಡೆದ ವೀರಭದ್ರಯ್ಯ ಈ 28 ವರ್ಷಗಳ ಸೇವಾವಧಿಯಲ್ಲಿ ಗಳಿಸಿರುವ ಅಕ್ರಮ ಆಸ್ತಿಯ ಮೊತ್ತ ಐನೂರು ಕೋಟಿ ರೂಪಾಯಿಗಿಂತಾ ಜಾಸ್ತಿ ಇದೆ ಎಂಬ ದೂರುಗಳು ಈಗ ಸರ್ಕಾರಕ್ಕೆ ಸಲ್ಲಿಕೆಯಾಗಿವೆ.

ಲೂಟಿಯ ವೃತ್ತಾಂತ

ನೆಲಮಂಗಲದ ಮಣ್ಣೆ ಗ್ರಾಮದವನಾದ ವೀರಭದ್ರಯ್ಯ ಕೆಎಎಸ್ ಆಗುವ ಮೊದಲು ಬೆಂಗಳೂರಿನಲ್ಲೇ ಕೆಲಕಾಲ ಲೆಕ್ಚರರ್ ಆಗಿದ್ದ. ಆ ನಂತರ 1986 ರಲ್ಲಿ ಕೆಎಎಸ್‌ಗೆ ತೂರಿಕೊಂಡ ದಿನದಿಂದಲೇ ಲಂಚಗೂಳಿತನ ಆರಂಭಿಸಿದ್ದ. ದೇವೇಗೌಡರ ಕೃಪೆಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಆಯಕಟ್ಟಿನ ಜಾಗ ಹಿಡಿದು ಕೂತವನು ಅಲ್ಲಿಂದ ಹೊರಡುವಷ್ಟರಲ್ಲಿ ಸಾಕಷ್ಟು ದುಡ್ಡು ಕದ್ದು ದುಂಡಗಾಗಿದ್ದ. 2005ರಲ್ಲಿ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಾಗ ಮುಖ್ಯಮಂತ್ರಿ ಧರಂಸಿಂಗ್ ದೇವೇಗೌಡರ ಕೈಗೊಂಬೆಯಂತಿದ್ದರಲ್ಲ, ಆಗ ಬಿಡಿಎಗೆ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ಕಾಲಿಟ್ಟ ವೀರಭದ್ರಯ್ಯ ಡಿನೋಟಿಫಿಕೇಷನ್ ಡೀಲ್‌ಗಳನ್ನು ಕುದುರಿಸುವ ಚಾಂಪಿಯನ್ ಆಗಿ ಹೋದ. ಗೌಡರ ಸುಪುತ್ರ ಬಾಲಕೃಷ್ಣೇಗೌಡ ಕೂಡಾ ಆಗ ಕೆಎಎಸ್ ಆಫೀಸರ್ ಆಗಿ ಬಿಡಿಎನಲ್ಲಿದ್ದರು. ಇವರಿಬ್ಬರ ಗೆಳೆತನ ಅಲ್ಲೇ ಬೆಳೆದು ಬಲಿತದಲ್ಲದೇ ಮುಂದೆ ಲ್ಯಾಂಡ್ ಡೀಲ್‌ಗಳಲ್ಲಿ ಪಾಲುದಾರಿಕೆ ವ್ಯವಹಾರವಾಗಿಯೂ ಮುಂದುವರೆಯಿತು. ಬಿಡಿಎ ವಿಶ್ವೇಶ್ವರಯ್ಯ ಲೇಔಟ್, ಬನಶಂಕರಿ 6 ನೇ ಹಂತ ಹಾಗೂ ಕೆಂಪೇಗೌಡ ಬಡಾವಣೆಗಳಿಗೆಂದು 4(1)



ಐಎಎಸ್ ವೀರಭದ್ರಯ್ಯ

ಚಾರ್ಜ್ ಶೀಟ್ ಹಾಕುವಾಗ ವೀರಭದ್ರಯ್ಯ ಅಲ್ಲೂ ಗೋಲ್‌ಮಾಲ್ ಮಾಡಿ ಬಿ ರಿಪೋರ್ಟ್ ಹಾಕಿಸಿಕೊಂಡು ಬಿಟ್ಟ. ಈ ಕೇಸಿನಲ್ಲಿ ವೀರಭದ್ರಯ್ಯನಿಗೆ ಶಿಕ್ಷೆಯಾಗಲೇ ಬೇಕಿತ್ತಾದರೂ ಲೋಕಾಯುಕ್ತ ಪೊಲೀಸರೇಕೆ ಬಿ ರಿಪೋರ್ಟ್ ಹಾಕಿದರೆಂದು ಹುಡುಕಲು ಹೊರಟರೆ ಡಿವೈಎಸ್‌ಪಿ ಜೋಯಪ್ಪನ ಕೈವಾಡ ಕಾಣಸಿಗುತ್ತದೆ.

ವಿಶ್ವೇಶ್ವರಯ್ಯ ಲೇಔಟ್‌ನ ಹಾರೋಹಳ್ಳಿ ಗ್ರಾಮದ ಸರ್ವೆ ನಂಬರ್ 168/2 ರಲ್ಲಿ ವೀರಭದ್ರಯ್ಯನಿಗೆ ಸೇರಿರುವ ಭೂಪರಿವರ್ತಿತ ಜಮೀನಿನಲ್ಲಿ 100x 90 ಅಡಿಗಳ ದೊಡ್ಡ ಸೈಟನ್ನೇ ಲೋಕಾಯುಕ್ತ ಡಿವೈಎಸ್‌ಪಿ ಜೋಯಪ್ಪ ಮತ್ತವನ ಹೆಂಡತಿ ಬೋಜಮ್ಮನ ಹೆಸರಿಗೆ ವೀರಭದ್ರಯ್ಯ ಬರೆದುಕೊಟ್ಟು ರಿಜಿಸ್ಟರ್ ಮಾಡಿಸಿಕೊಟ್ಟಿದ್ದಾನೆ.

ಈ ಆಸ್ತಿಯ ಮಾರ್ಕೆಟ್ ರೇಟ್ ಒಂದೂವರೆ ಕೋಟಿಯಷ್ಟಿದೆ. ಯಾವಾಗ ಜೋಯಪ್ಪ ಸೈಟು ತಿಂದನೋ ಕೇಸ್ ನಂ. 9/99 ಅನ್ನು ಮುಚ್ಚಿಹಾಕಿ ಬಿ ರಿಪೋರ್ಟ್ ಹಾಕಿಬಿಟ್ಟ.

ವೀರಭದ್ರಯ್ಯ ಬಿಡಿಎಯಲ್ಲಿದ್ದಾಗಲೇ ಜೆಪಿನಗರ 9ನೇ ಹಂತದ ಅರೆಕೆರೆ ಸರ್ವೆ ನಂ. 100, 101, 102,



ವಿಜಯನಗರದ ಬಂಗಲೆ



ಮಾಗಡಿ ರಸ್ತೆ ಟೋಲ್‌ಗೇಟ್ ಬಳಿ ಇರುವ ಕಾಂಪ್ಲೆಕ್ಸ್



ನಾಗರಬಾವಿಯಲ್ಲಿರುವ ಕಟ್ಟಡ

ಅವನಿಗೆ ಆದೆಂತಹ ರಾಜಕೀಯ ಲೆಕ್ಕಚಾರಗಳಿರಬಹುದು ಯೋಚಿಸಿ!

ಈಗ ಐವತ್ತೆಂಟು ವಯಸ್ಸಿನ ವೀರಭದ್ರಯ್ಯನಿಗೆ ನಿವೃತ್ತನಾಗಲು ಇನ್ನೆರಡು ವರ್ಷ ಬಾಕಿ ಉಳಿದಿದೆ. ಆದರೂ ಈ ಬಾರಿ ಮಧುಗಿರಿ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ನಿಲ್ಲಲು ರೆಡಿಯಾಗಿದ್ದಾನೆ. ದೇವೇಗೌಡರು 'ನಿನಗೇ ಟಿಕೆಟ್ ಗ್ಯಾರಂಟಿ' ಅಂತ ಭರವಸೆ ಕೊಟ್ಟೂ ಬಿಟ್ಟಿದ್ದಾರೆ. ಗೌಡರ

ಪತ್ತೆಯಾಗಿದೆ. ಆದರೂ ಲೋಕಾಯುಕ್ತ ಪೊಲೀಸರು 1999ರ ದಾಳಿಗೆ ಬಿ ರಿಪೋರ್ಟ್ ಹಾಕಿಬಿಟ್ಟಿದ್ದಾರೆ. 2011ರ ದಾಳಿಯ ತನಿಖೆಯನ್ನಂತೂ ಈಗಲೂ ಪೂರ್ತಿ ಮಾಡಿಲ್ಲ.

ಹೀಗೆ ಬಿಜೆಪಿ ಸರ್ಕಾರ ಹಾಗೂ ಲೋಕಾಯುಕ್ತರನ್ನೇ ವೀರಭದ್ರಯ್ಯ ಸುಮ್ಮನಾಗಿಸುತ್ತಾನೆಂದರೆ ಅವನ ದುಡ್ಡಿನ ಪವರ್ ಅದೆಷ್ಟಿರಬೇಡ.

ಜೆಡಿಎಸ್ ನಾಯಕರು ಈಗ ತಮ್ಮ ಎಲೆಕ್ಷನ್

ರಲ್ಲಿ ನೋಟಿಫೈ ಮಾಡಿದ ಜಮೀನುಗಳನ್ನು ವೀರಭದ್ರಯ್ಯ ಬೇನಾಮಿಯಾಗಿ ತಾನೇ ಖರೀದಿಸುತ್ತಿದ್ದ. 'ಸರ್ಕಾರ ನಿನಗೆ ಹೆಚ್ಚೆಂದರೆ ಎಕರೆಗೆ ಆರೆಂಟು ಲಕ್ಷ ಪರಿಹಾರ ಕೊಡುತ್ತೆ ಅಷ್ಟೇ. ಅದರ ಬದಲಾಗಿ ನೋಟಿಫೈ ಆಗಿರುವ ಭೂಮಿ ನನಗೆ ಕೊಡಿ. ಅಷ್ಟು ದುಡ್ಡು ಈಗಲೇ ಕೊಡುತ್ತೇನೆ' ಎಂದು ರೈತರಿಗೆ ದಿಗಿಲು ಹುಟ್ಟಿಸಿ ನೂರಾರು ಎಕರೆಗಳನ್ನು ಡೀಲ್ ಮಾಡಿಸಿಕೊಂಡಿದ್ದಾನೆ ವೀರಭದ್ರಯ್ಯ. ಹೀಗೆ ರೈತರಿಂದ ಭೂಮಿ ಖರೀದಿಸಿ ನಂತರ ಬಿಡಿಎ ಅಂತಿಮ ಅಧಿಸೂಚನೆ ಹೊರಡಿಸುವಾಗ ಇವರ ವಶದಲ್ಲಿರುವ ಜಮೀನುಗಳನ್ನು ಅಧಿಸೂಚನೆಯಿಂದ ಹೊರಗಿಡುವಂತೆ ನೋಡಿಕೊಂಡು ಈ ಅವ್ಯವಹಾರದಲ್ಲೇ ನೂರಾರು ಕೋಟಿ ರೂಪಾಯಿ ಲೂಟಿ ಹೊಡೆದಿದ್ದ ವೀರಭದ್ರಯ್ಯ. ಇವನ ಭ್ರಷ್ಟ ಚಟುವಟಿಕೆಗಳ ಖದರ್ ಅದೆಷ್ಟಿತ್ತೆಂದರೆ 1999ರಲ್ಲೇ ಇವನ ಮೇಲೆ ಲೋಕಾಯುಕ್ತ ರೇಡ್ ಆಯಿತು.


ಆಗ ಕೃಷ್ಣಾ ಮೇಲ್ದಂಡೆ ಯೋಜನೆಯ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಿದ್ದ ವೀರಭದ್ರಯ್ಯನ ಮನೆಯಲ್ಲಿ ಸಿಕ್ಕ ಕ್ಯಾಷ್, ಚಿನ್ನ-ಬೆಳ್ಳಿ ಹಾಗೂ ಆಸ್ತಿಗಳ ಒಟ್ಟು ಮೊತ್ತ 2.42 ಕೋಟಿ ರೂಪಾಯಿಗಳಷ್ಟಿತ್ತು. ಇದರ ಪೈಕಿ ಬಾಡಿಗೆ ಮತ್ತು ಕೃಷಿ ಆದಾಯದ ರೂಪದಲ್ಲಿ ಇವನು ದುಡಿದದ್ದು ಕೇವಲ ಎಪ್ಪತ್ತು ಪ್ಲಸ್ ಇಪ್ಪತ್ತೈದು ಅಂದರೆ ತೊಂಬತ್ತೈದು ಲಕ್ಷ ರೂಪಾಯಿ ಮಾತ್ರ. ಈ ಲೆಕ್ಕದಲ್ಲಿ ಅವತ್ತಿಗೇ ವೀರಭದ್ರಯ್ಯ ಒಂದೂವರೆ ಕೋಟಿ ರೂಪಾಯಿಗಳಷ್ಟು ಅಕ್ರಮ ಆಸ್ತಿ ಮಾಡಿಕೊಂಡಿದ್ದ. ಲೋಕಾಯುಕ್ತ ತನಿಖಾ ವರದಿಯಲ್ಲೇ ಇದನ್ನು ಸ್ಪಷ್ಟವಾಗಿ ಹೇಳಲಾಗಿತ್ತು. ಆದರೆ

103ರಲ್ಲಿ ಸುಮಾರು 7.13 ಎಕರೆ ನೋಟಿಫೈಡ್ ಜಮೀನನ್ನು ಅದೊಂದು ನರ್ಸರಿ ಎಂಬ ನೆಪ ತೋರಿಸಿ ಡಿನೋಟಿಫೈ ಮಾಡಿಸಿಬಿಟ್ಟರು. ಆದರೆ ಆನಂತರ ಜಮೀನಿನ ಮಾಲೀಕರಾಗಿದ್ದ ಎಸ್‌ಜೆಆರ್ ಎಂಟರ್‌ಪ್ರೈಸಸ್‌ನ ಭೂಮೇಶ್ ರೆಡ್ಡಿ, ವಿಜಯ್ ರೆಡ್ಡಿ ಮುಂತಾದವರಿಗೆ ಅಕ್ರಮವಾಗಿ ಅಪಾರ್ಟ್‌ಮೆಂಟ್ ಕಟ್ಟಲು ಅನುಮತಿ ಕೊಡಿಸಿ ಆರಾಮತ್ತು 50 ಕೋಟಿ ರೂಪಾಯಿ ಲಂಚ ಕಿತ್ತು ತಿಂದಿದ್ದಾರೆ.

ಈ ಹಗರಣದ ವಾಸನೆ ಹಿಡಿದ ಹುಳಿಮಾವಿನ ಮಾಜಿ ಕಾರ್ಪೊರೇಟರ್ ಲಕ್ಷ್ಮೀನಾರಾಯಣ ಎಂಬುವರು ಎಲ್ಲಾ ದಾಖಲೆಗಳನ್ನು ಪತ್ತೆಹಚ್ಚಿ ಲೋಕಾಯುಕ್ತರಿಗೆ ದೂರು ಸಲ್ಲಿಸಿದ ಪರಿಣಾಮ ಅದೂ ಒಂದು ಕೇಸ್ ವೀರಭದ್ರಯ್ಯನ ವಿರುದ್ಧ ದಾಖಲಾಗಿದೆ. ಇದೇ ಪ್ರಕರಣದಲ್ಲಿ ಬಿಡಿಎನ ಇತರ ಅಧಿಕಾರಿಗಳಾದ ಸಾದತ್ ಆಲಿ, ಸಂಬೀರ್ ಹರಿಸಿಂಗ್, ಭರತ್‌ಲಾಲ್ ಮೀನಾ, ತಿರುಕನಗೌಡ ಮುಂತಾದವರ ಮೇಲೂ ಕೇಸ್ ದಾಖಲಾಗಿದೆ.

ಹೀಗೆ ಜುಜುಬಿ ಕೆಎಎಸ್ ಆಫೀಸರ್ ಆಗಿದ್ದಾಗಲೇ ನೂರಾರು ಕೋಟಿ ರೂಪಾಯಿ ಲಂಚದ ಸಂಪತ್ತನ್ನು ಗುಡಿಸಿ ಗುಡ್ಡೆ ಹಾಕಿಕೊಂಡ ವೀರಭದ್ರಯ್ಯ ಎಲ್ಲರ ಕಣ್ಣಿಗೂ ಕಾಣುವಂತೆ ಬೆಂಗಳೂರಿನ ವಿಜಯನಗರದಲ್ಲೊಂದು ಭರ್ಜರಿ ಬಂಗಲೆ, ಸ್ವಂತ ಗ್ರಾಮ ಮಗ್ಗೆಯಲ್ಲಿ ತಂದೆ ವೀರಮಾರಯ್ಯನ ಹೆಸರಲ್ಲಿ ಎರಡು ಮನೆ, ಶ್ರೀನಿವಾಸಪುರ ಗ್ರಾಮದಲ್ಲಿ 13.12 ಎಕರೆ ಜಮೀನು, ಲಗ್ಗೆರೆಯಲ್ಲೊಂದು ಸೈಟು, ಎಚ್‌ಎಸ್‌ಆರ್ ಲೇಔಟ್‌ನಲ್ಲೊಂದು ಸೈಟು, ಬನಶಂಕರಿಯ ಶ್ರೀನಿವಾಸನಗರದಲ್ಲೊಂದು ಸೈಟು, ಮಗ

ಕುಮಾರಸ್ವಾಮಿಗೆ ವೀರಭದ್ರಯ್ಯನ ಭ್ರಷ್ಟಾಚಾರ ಕಾಣುತ್ತಿಲ್ಲವೆ?



ಬಿಜೆಪಿಗಳ ಭ್ರಷ್ಟಾಚಾರ, ಯಡ್ಡಿಯೂರಪ್ಪನ ಹಗರಣಗಳ ಬಗ್ಗೆ ಪದೇಪದೇ ಮಾತನಾಡುವ ಜೆಡಿಎಸ್ ಅಧ್ಯಕ್ಷ ಕುಮಾರಸ್ವಾಮಿಗೆ ಈ ವೀರಭದ್ರಯ್ಯನ ಹಗಲು ದರೋಡೆಗಳು, ಲೋಕಾಯುಕ್ತರ ದಾಳಿಗಳು, ಕೋರ್ಟ್ ಕೇಸ್‌ಗಳೇಕೆ ಕಾಣುತ್ತಿಲ್ಲ?

ಅಲ್ಲದೆ ವೀರಭದ್ರಯ್ಯ ಪೂರ್ಣಪ್ರಮಾಣದ ರಾಜಕಾರಣಿಯೂ ಅಲ್ಲ, ಆತ ಈಗಲೂ ಐಎಎಸ್ ಆಫೀಸರ್ ಆಗಿ ಸರ್ಕಾರಿ ಕೆಲಸದಲ್ಲಿದ್ದಾನೆ. ಹಾಗಿದ್ದಾಗಲೂ ತುಮಕೂರಿನ ಜೆಡಿಎಸ್ ಸಮಾವೇಶದಲ್ಲಿ ಇವನನ್ನು ಮೆರೆಸಲಾಗಿದೆ. ಮಧುಗಿರಿಯ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಜೆಡಿಎಸ್‌ನವರಿಗೆ ಬಿ ಫಾರಂ ಹಂಚುವ ಅಧಿಕಾರವನ್ನು ವೀರಭದ್ರಯ್ಯನಿಗೇ ವಹಿಸಲಾಗಿತ್ತು. ಕಳೆದ ಮೂರು ವರ್ಷದಿಂದಲೂ 'ಮಧುಗಿರಿಗೆ ಜೆಡಿಎಸ್ ಕ್ಯಾಂಡಿಡೇಟ್ ನಾನೇ' ಅಂತಲೂ ವೀರಭದ್ರಯ್ಯ ಹೇಳಿಕೊಂಡೇ ಬಂದಿದ್ದಾನೆ. ಪತ್ರಿಕೆಗಳಲ್ಲೂ ಇವನ ರಾಜಕೀಯ ಚಟುವಟಿಕೆಗಳ ಬಗ್ಗೆ ಫೋಟೋ ಸಹಿತ ವರದಿಗಳು ಪ್ರಕಟವಾಗಿವೆ.

ಜೆಡಿಎಸ್‌ನವರು ಒಂದೆಡೆ ಇರಲಿ, ಕಾಂಗ್ರೆ ಅಧ್ಯಕ್ಷ ಜಿ. ಪರಮೇಶ್ವರ್ ತುಮಕೂರಿನವರೆ ತಾನೆ?

ಅವರೆಂದಾದರೂ ಐಎಎಸ್ ಅಧಿಕಾರಿ ವೀರಭದ್ರಯ್ಯನ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ದನಿ ಎತ್ತಿದ್ದಾರಾ?


ನ ಹೆಸರಿನಲ್ಲಿ ಯಶವಂತಪುರ ಹೋಬಳಿ ೀಹಳ್ಳಿ ಸರ್ವೆ ನಂ. 168/2 ರಲ್ಲಿ ಒಂದೂ ಎಕರೆ ಜಮೀನು, ಮಲ್ಲಾಹಳ್ಳಿಯಲ್ಲಿ ಭೂಮಿ, ಅತ್ತೆ ನ ಹೆಸರಿನಲ್ಲಿ ಗುಡಿಮಾವುನಲ್ಲಿ ಏಳೆಕೆರೆ ಭೂಮಿ, ಳು, ಚಿನ್ನ-ಬೆಳ್ಳಿ ಮಾಡಿಕೊಂಡಿದ್ದ. ಇಷ್ಟು ಬಂತೆ ಮಗ ಕಾರ್ತಿಕನಿಗೆ ವಿಧಾನಸೌಧದ ಎದುರಿನ ಆಫೀಸ್ ಹಿಂಭಾಗದ ರಿಲೆಯಬಲ್ ಫೋನಿಕ್ಸ್ ನಲ್ಲಿ ಒಂದು ದೊಡ್ಡ ಐಟಿ ಕಂಪನಿ ಸ್ಥಾಪಿಸಲು ತರ ರೂಪಾಯಿ ಬಂಡವಾಳ ಹಾಕಿಕೊಟ್ಟಿದ್ದಾನೆ.

ರೀತಿಯ ಸಾರ್ಥಕ ಸರ್ಕಾರಿ ಸೇವೆ ಮಾಡಿದ ವೀರಭದ್ರಯ್ಯನಿಗೆ ಸರ್ಕಾರಿ ಕೆಲಸದ ಬಗ್ಗೆ ವೈರಾಗ್ಯ ರಾಜಕೀಯಕ್ಕಿಳಿದು ಶಾಸಕನಾಗಿ ಛಾನ್ಸ್ ಸಿಕ್ಕರೆ ರ್ ಆಗಬಾರದೇಕೆಂಬ ಯೋಚನೆಯೂ ಬಂತು. ವಕ್ಕಿದ್ದ ಕಾರಣವೇನೆಂದರೆ ಕದ್ದು ಮಾಡಿರುವ ಮು ಕೋಟಿ ರೂಪಾಯಿಗಳ ಆಸ್ತಿಯ ರಕ್ಷಣೆ. ಅದು ಯ ಅಧಿಕಾರವಿದ್ದರೆ ಮಾತ್ರ ಸಾಧ್ಯ ಎಂದು ಇವನಿಗೆ ಮಾಗಿತ್ತು.

ಗ ವೀರಭದ್ರಯ್ಯ ಸಾಹೇಬರ ಗಮನ ಮಧುಗಿರಿಯತ್ತ ತು.

ಟೆಂಗಲು ಚೆನ್ನಿಗಪ್ಪನ ಪಕ್ಷಾಂತರ

ಾೀ-ಜಾ ಸರ್ಕಾರವಿದ್ದಾಗ ಅರಣ್ಯ ಸಚಿವನಾಗಿ ಾರದ್ದನ್ನೆಲ್ಲಾ ಮಾಡಿದ ಚೆನ್ನಿಗಪ್ಪ ಮತ್ತವನ ಮಗ ಕರ ಬಿಜೆಪಿಗೆ ಪಕ್ಷಾಂತರ ಮಾಡಿದಾಗ ಮಧುಗಿರಿ ುನಾವಣೆ ನಡೆಯಿತು. ಆಗಲೇ ಅಲ್ಲಿಂದ ಜೆಡಿಎಸ್ ಡೇ ಟಾಗಲು ವೀರಭದ್ರಯ್ಯ ಪ್ಲಾನ್ ದ್ದನಾದರೂ ಅನಿತಾ ರಸ್ವಾಮಿ ಸ್ವತಃ ಅಖಾಡಕ್ಕಿಳಿ ುಮ್ಮನಾದ. ಆದರೆ ಜೆಡಿಎಸ್ ಗಿ ಒಳಗಿಂದೊಳಗೇ ಬೇಕಾ ್ಲ ಮಾಡಿಕೊಟ್ಟ. ನಂತರ ಮಧುಗಿರಿ ಬಿಟ್ಟು



ಚೆನ್ನಿಗಪ್ಪ


ಟ್ಟಣದಲ್ಲಿ ಸ್ಪರ್ಧಿಸುವುದು ಟಿಯಾಗುತ್ತಿದ್ದಂತೆ ಚುರುಕಾದ. ವಾರಕ್ಕೆರಡು ಬಾರಿ ಗಿರಿಗೆ ಹೋಗಿ ಬಂದು ಮಾಡತೊಡಗಿದ. ಸ್ಥಳೀಯರ ವೆ, ತಿಥಿ, ಯುವಕ ಸಂಘಗಳು, ದೇವಸ್ಥಾನಕ್ಕೆಲ್ಲಾ ್ನು ಕರೆದು ಕರೆದೂ ಹಣ ಹಂಚಿದ್ದಾನೆ. ಇವನು ಗಿರಿಯಲ್ಲಿ ಈಗಾಗಲೇ ಹಂಚಿರುವ ಹಣ ಹತ್ತು ರೂಪಾಯಿ ಮೀರುತ್ತಿದೆ. ಇನ್ನೇನು ವಿಧಾನಸಭೆ ಣೆಗಳು ಹತ್ತಿರ ಬರುತ್ತಿದೆ ಎನಿಸಿದಾಗ ವೀರಭದ್ರಯ್ಯ 2012 ರಂದು ಸ್ವಯಂ ನಿವೃತ್ತಿಗೆ ಅರ್ಜಿ ಹಾಕಿದ. ಎಸ್ ಪಡೆಯಲು ಮೂರು ತಿಂಗಳ ಮುಂಚಿತ ಸ್ ನೀಡಬೇಕೆಂಬ ನಿಯಮವಿದ್ದರೂ ತನ್ನದು ಪ್ರಕರಣವೆಂದು ಪರಿಗಣಿಸಿ ಸ್ವಯಂ ನಿವೃತ್ತಿಗೆ ುತಿ ನೀಡುವಂತೆ ಕೇಳಿದ್ದ. ಆದರೆ ತನ್ನ ಅರ್ಜಿಯಲ್ಲಿ ್ಟಿಯೂ ತನ್ನ ವಿರುದ್ಧ ಲೋಕಾಯುಕ್ತ ಕೇಸ್ ಬಾಕಿ ಬಗ್ಗೆ ಮಾಹಿತಿ ನೀಡಿರಲಿಲ್ಲ. ಆದರೆ ಚಿಡ್ಡಿ ಸರ್ಕಾರಕ್ಕೆ ದ್ರಯ್ಯನ ಕಳ್ಳಾಟಗಳು ಹಾಗೂ ಜೆಡಿಎಸ್ ಜೊತೆಗಿನ ಯ ನೆಂಟಸ್ತಿಕೆ ಬಗ್ಗೆ ಗೊತ್ತಿತ್ತು. ಜೊತೆಗೆ ಚೆನ್ನಿಗಪ್ಪನೂ ಅಡ್ಡ ನಿಂತ. ಏಕೆಂದರೆ ಒಂದು ವೇಳೆ ಅನಿತಾ ರಸ್ವಾಮಿ ಮಧುಗಿರಿ ಕ್ಷೇತ್ರ ತ್ಯಜಿಸಿದರೆ ಅಲ್ಲಿ ತಾನಾಗಲಿ ಮಗ ಗೌರಿ ಶಂಕರನಿಗಾಗಲಿ ಜೆಡಿಎಸ್ ಟಿಕೆಟ್ ಬೇಕೆಂಬ ಯೋಚನೆ ಚನ್ನಿಗಪ್ಪನಿಗಿತ್ತು. ಹಾಗಾಗಿ ದ್ರಯ್ಯನಿಗೆ ವಿಆರ್‌ಎಸ್ ಸಿಗದಂತೆ ಮಾಡಿಬಿಟ್ಟರೆ ಎಲೆಕ್ಷನ್‌ಗೆ ನಿಲ್ಲಲಾಗದಂತಾಗುತ್ತದೆ. ತನಗೇ ಲೈನ್ ್ ಎಂಬ ತರ್ಕ ಅದಾಗಿತ್ತು. ಆದರೇನೂ ದ್ರಯ್ಯ ಈಗ ಪುನಃ 2 ನೇ ಬಾರಿ ವಿಆರ್‌ಎಸ್ ನೀಡಿದ್ದಾನೆ. ಆದರೆ ಈಗಾಗಲೇ ಚುನಾವಣೆ ಷಣೆ ಆಗಿ ಹೋಗಿರುವ ಕಾರಣ ಅವನು ಕೆಲಸಕ್ಕೆ ನಾಮೆ ನೀಡಿಯೇ ಎಲೆಕ್ಷನ್‌ಗೆ ನಿಲ್ಲಬೇಕಾಗುತ್ತದೆ. ಈ ನಡುವೆ ಸಿನಿಮಾ ರಂಗದ ಸತ್ಯಪ್ರಕಾಶ್ ಹಾಗೂ ನಹಳ್ಳಿಯ ಬಿ.ಎಸ್. ಶಿವಣ್ಣನವರೂ ಮಧುಗಿರಿಯಿಂದ ಸ್ ಟಿಕೆಟ್‌ಗಾಗಿ ತೀವ್ರ ಪ್ರಯತ್ನ ನಡೆಸುತ್ತಿದ್ದಾರೆ. ಮವಾಗಿ ಇವರ‍್ಯಾರಿಗೂ ಅವಕಾಶ ಸಿಗದೆ ಚೆನ್ನಿಗಪ್ಪನೆ ಸ್ ಅಭ್ಯರ್ಥಿಯಾದರೂ ಆಶ್ಚರ್ಯವಿಲ್ಲ.

ಈ ನಡುವೆ ಈಗಾಗಲೇ ಮಧುಗಿರಿಯಲ್ಲಿ ಹತ್ತು ಟಿ ರೂಪಾಯಿ ಹಾಗೂ ಜೆಡಿಎಸ್‌ಗಾಗಿ ಬೇರೆಬೇರೆ ದಲ್ಲಿ 20 ಕೋಟಿ ರೂಪಾಯಿಗೂ ಹೆಚ್ಚು ಖರ್ಚು ರುವ ವೀರಭದ್ರಯ್ಯನ ಗತಿ ಏನಾಗುತ್ತದೋ ಗೊತ್ತಿಲ್ಲ. ಗೆ ಈಗ ಟಿಕೆಟ್ ಸಿಗದಿದ್ದರೂ ಕೈಲಿ ನೂರಾರು ಟಿ ರೂಪಾಯಿ ಇರುವುದರಿಂದ ಜೆಡಿಎಸ್ ಪಾಲಿಗೆ ನ್ ಖರ್ಚಿನ ಖಜಾನೆಯಂತೆ ಬಳಕೆಯಾಗಲಿದ್ದಾನೆ. ರ್ಕಾರ, ಚುನಾವಣಾ ಆಯೋಗದ ಕಣ್ಣಿಗೆ ಇವೆಲ್ಲಾ ುತ್ತಿಲ್ಲವೆ? ೀರಭದ್ರಯ್ಯನ ವಿರುದ್ಧ ಇವರೇಕೆ ಶಿಸ್ತು ಕ್ರಮ ಕೊಳ್ಳುತ್ತಿಲ್ಲ?

● ವರದಿಗಾರ

ರಾಮದಾಸನ 'ಬೀದಿ' ಕಸರತ್ತು

ಇದು ಎಲೆಕ್ಷನ್ ಸಹಕಾರ ಸಂಘ!



ಮೈಸೂರು ಮಂತ್ರಿ ರಾಮದಾಸು ಎಲೆಕ್ಷನ್ ಸನಿಹದಲ್ಲೆ ಮತ್ತೊಂದು ಬೋಗಸ್ ಅವತಾರವೆತ್ತಿದ್ದಾನೆ. ಕಳೆದ ಬಾರಿ 'ಸ್ವಂತ ಸೂರಿನ ಊರು ಮೈಸೂರು' ಅಂತ ಬಾಡಿಗೆ ಮನೆಯಲಿದ್ದವರನ್ನು ಬೀದಿಗೆ ಕರೆತಂದು ಲಾಠಿ ಚಾರ್ಜ್ ಮಾಡಿಸಿದ್ದ ರಾಮದಾಸು ಈ ಬಾರಿ ಬೀದಿ ವ್ಯಾಪಾರಿಗಳ ಮೂಗಿಗೆ ತುಪ್ಪ ಸವರಿ ವೋಟ್‌ಬ್ಯಾಂಕ್ ಖಾತ್ರಿ ಮಾಡಿಕೊಳ್ಳಲು ಸ್ಕೆಚ್ ಹಾಕಿದ್ದಾನೆ. ಅದಕ್ಕಾಗಿ ಆತ ಹುಟ್ಟು ಹಾಕಿರೋದು 'ಮೈಸೂರು ನಗರ ಬೀದಿ ಬದಿ ವ್ಯಾಪಾರಿಗಳ ವಿವಿದೋದ್ದೇಶ ಸಹಕಾರ ಸಂಘ' ಎನ್ನುವ ವ್ಯವಸ್ಥಿತ ಯೋಜನೆಯನ್ನು. ರಾಮದಾಸನ ಈ ಹರಿಕಥೆಯಲ್ಲಿ ಮೈಕ್ರೋ ಫೈನಾನ್ಸ್ ಎನ್ನುವ ಉಪಕಥೆಗೆ ಅಧಿಕೃತ ಚಾಲನೆ ನೀಡಿದ್ದು ಸಚಿವ ಸುರೇಶ್ ಕುಮಾರ್. ಅಸಲಿಗೆ ಬಾಂಗ್ಲಾದೇಶದ ಅರ್ಥಶಾಸ್ತ್ರಜ್ಞ ಮೊಹಮದ್ ಯೂನಿಸ್‌ರ ಮೈಕ್ರೋ ಕ್ರೆಡಿಟ್ ಯೋಜನೆಯನ್ನು ಇಲ್ಲಿ ಯಥಾವತ್ತಾಗಿ ಭಟ್ಟಿ ಇಳಿಸಲಾಗಿದೆ.

ಮೊಹಮದ್‌ರ ಮೂಲ ಯೋಜನೆ ಆರ್ಥಿಕ ಸಮಾನತೆಯಂತಹ ಸದುದ್ದೇಶಕ್ಕಾಗಿ ರೂಪಿತವಾದದ್ದು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲೂ ಅರ್ಹತೆ ಇಲ್ಲದ ಕೆಳಮಟ್ಟದ ವ್ಯಾಪಾರಿಗಳಿಗೆ ಸಾಲ ನೀಡುವುದೇ ಈ ಸಹಕಾರಿ ಬ್ಯಾಂಕ್‌ನ ಮುಖ್ಯ ಉದ್ದೇಶ. ಅಡಮಾನ ಇಡಲು ಯಾವ ಆಸ್ತಿಯೂ ಇಲ್ಲದಂತಹ ಆರ್ಥಿಕ ಹಿಂದುಳಿದವರ ಅಭಿವೃದ್ಧಿಗೆ ಇದು ಸಾಕಷ್ಟು ಸಹಕಾರಿಯಾಗಿತ್ತು. ಅದಕ್ಕೆಂದೇ ಮೊಹಮದ್ ಯೂಸಫ್‌ರಿಗೆ ನೊಬೆಲ್ ಪ್ರಶಸ್ತಿಯೂ ಲಭಿಸಿದೆ. ಇಂತಹ ಜನೋಪಯೋಗಿ ಯೋಜನೆಯನ್ನು ರಾಮದಾಸು ಎಲೆಕ್ಷನ್ ಎನ್‌ಕ್ಯಾಶ್‌ಗೆ ಬಳಸಿಕೊಳ್ಳುತ್ತಿರೋದೆ ದುರಾದೃಷ್ಟ.

ಈ ಬೀದಿವ್ಯಾಪಾರಿಗಳ ಬದುಕಿಗೆ ಕಾಣದ ಮತ್ತೊಂದು ಮಗ್ಗುಲಿದೆ. ಅಲ್ಲಿ ಅವರು ನಿತ್ಯವೂ ಮೀಟರ್ ಬಡ್ಡಿ ಕ್ರಿಮಿಗಳಿಂದ, ಪೊಲೀಸರಿಂದ ಶೋಷಣೆಗೆ ಒಳಗಾಗುತ್ತಲೇ ಇರಬೇಕು. ಬೆಳಗ್ಗೆ ಬಡ್ಡಿವಾಲಾಗಳಿಂದ ವ್ಯಾಪಾರಕ್ಕಾಗಿ ಸಾಲ ಪಡೆಯುವ ಇವರು ಸಂಜೆಯವರೆಗೆ ಬಿಸಿಲಿನಲ್ಲಿ ಬಸವಳಿದು ವ್ಯಾಪಾರ ಮಾಡಿದರೂ ಪೊಲೀಸರಿಗೆ ಇಂತಿಷ್ಟು ಮಾಮೂಲಿ, ಸಾಲಕೊಟ್ಟವರಿಗೆ ಮೀಟರ್ ಬಡ್ಡಿಲೆಕ್ಕದಲ್ಲಿ ದುಡಿಮೆಯನ್ನು ಹಂಚಿ ನೂರೋ,ಇನ್ನೂರೋ ಕೈಲಿ ಹಿಡಿದು ಮನೆ ಸೇರಬೇಕಾಗುತ್ತೆ. ಇದು ನಿತ್ಯದ ಗೋಳು!

ಆ ಗೋಳೇ ರಾಮದಾಸನ ಯೋಜನೆ ಹಿಂದಿರುವ ಬಂಡವಾಳ. ಅವರಿಗೆ ಸುಲಭವಾಗಿ ಸಾಲ ಸಿಗುವ ಆಮಿಷ ಒಡ್ಡುವ ಇಂತಹದ್ದೊಂದು ಸಂಘ ಕಟ್ಟಿ ಅವರ ವಿಶ್ವಾಸ ಗಿಟ್ಟಿಸಿಕೊಳ್ಳುವುದೇ ಅಸಲಿ ಮಸಲತ್ತು. ಒಂದು ಅಂದಾಜಿನ ಪ್ರಕಾರ ಮೈಸೂರಿನಲ್ಲಿ ಒಟ್ಟು 6500 ಬೀದಿ ವ್ಯಾಪಾರಿಗಳಿದ್ದಾರೆ. ಅವರ ಅವಲಂಬಿತರ ಸಂಖ್ಯೆಯನ್ನೂ ಕೌಂಟ್ ಮಾಡಿದಾಗ ಬೃಹತ್ ಓಟುಗಳ ಸಂಖ್ಯೆಯೇ ರಾಮದಾಸುವಿಗೆ ಕಾಣಿಸಿದೆ. ಹಾಗಾಗಿಯೇ ಈ ಯೋಜನೆ ಜನ್ಮ ತಳೆದಿದೆ. ಒಟ್ಟು ಐದು ಕೋಟಿ ಮೂಲ ಬಂಡವಾಳದ ಈ ಸಹಕಾರಿ ಸಂಘಕ್ಕಾಗಿ ರಾಜ್ಯ ಸರ್ಕಾರ 2 ಕೋಟಿಯನ್ನು ಬಜೆಟ್‌ನಲ್ಲಿ ಮೀಸಲಿಟ್ಟಿದ್ದು ಕೇಂದ್ರ ಸರ್ಕಾರ ಮೂರು ಕೋಟಿ ನೀಡಲಿದೆ ಎನ್ನುವ 'ಪ್ರಜಾಸತ್ತಾತ್ಮಕ' ಸುಳ್ಳನ್ನು ಉದುರಿಸುತ್ತಿದ್ದಾನೆ. ಕಳೆದ ಐದು ವರ್ಷಗಳಿಂದ ರಾಮದಾಸನಲ್ಲಿ ಇಲ್ಲದ ಕಾಳಜಿ ದಿಢೀರನೆ ಜಾಗೃತವಾಗಿರೋದಕ್ಕೆ ಸದ್ಯದರಲ್ಲೇ ಇರುವ ಎಲೆಕ್ಷನ್ ಅಲ್ಲದೆ ಮತ್ತಾವ ಘನ ಉದ್ದೇಶವೂ ಇಲ್ಲ. ಇದು ಮತದಾರರ ಮೂಗಿಗೆ ತುಪ್ಪ ಸವರಿ ವಂಚಿಸುವ ರಾಮದಾಸನ ರೆಗ್ಯುಲರ್ ಖಯಾಲಿಯ ಮತ್ತೊಂದು ಸ್ಯಾಂಪಲ್ ಎನ್ನುವುದಕ್ಕೆ ಸಾಕಷ್ಟು ಕುರುಹುಗಳಿವೆ.

ಅಷ್ಟಕ್ಕೂ ಇಂತಹ ಯಾವ ಪ್ರಸ್ತಾವನೆಗೂ ಸರ್ಕಾರ ಅಧಿಕೃತ ಮುದ್ರೆಯನ್ನೊತ್ತಿಲ್ಲ. ಅದರಲ್ಲೂ ಕೇಂದ್ರ ಸರ್ಕಾರದ ಪಾಲು ಇದೆ ಎನ್ನುತ್ತಿರುವುದಂತು ಹಸೀ ಸುಳ್ಳು. ಯಾವ ಮುನ್ಸೂಚನೆಯೂ ಇಲ್ಲದೆ ಕೇವಲ ಮೈಸೂರಿನಲ್ಲಿ ಮಾತ್ರವೇ ಇಂತಹ ಯೋಜನೆಯನ್ನು ಕೇಂದ್ರ ಜಾರಿಗೊಳಿಸುವ ಸಾಧ್ಯತೆಯಂತೂ ತೀರಾ ಕಡಿಮೆ. ಅಂದಹಾಗೆ 'ಸೂರು-ಮೈಸೂರಿ'ನ ಸ್ಕೀಮಿನಲ್ಲೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲಿದೆಯೆಂದು ರಾಮದಾಸು ಸುಳ್ಳು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು.

ಇನ್ನು ಇದು ಪಕ್ಕಾ ಸಹಕಾರಿ ಸಂಘ. ಅಂದರೆ, ಅಧ್ಯಕ್ಷ- ಉಪಾಧ್ಯಕ್ಷ, ಕಾರ್ಯದರ್ಶಿ ಹೀಗೆ ಒಂದು ಕಂಪ್ಲೀಟ್ ಬಾಡಿ ಆರ್ಗನೈಸ್ ಆಗಬೇಕೆಂದರೆ ಸದಸ್ಯರ ಮೂಲಕ ಚುನಾವಣೆ ನಡೆಸಬೇಕು. ಆದರೆ ರಾಮದಾಸನ ಬೀದಿ ವ್ಯಾಪಾರಿಗಳ ವಿವಿದೋದ್ದೇಶ ಸಂಘದಲ್ಲಿ ಆತನ ಚೇಲಾಗಳೆ ಅಧಿಕಾರದ ಚುಕ್ಕಾಣಿ ಹಿಡಿದು ಕೂತಿದ್ದಾರೆ. ಭಾಸ್ಕರ್ ಶ್ರೀನಿವಾಸಾಚಾರ್ಯ ಎಂಬಾತ ಅಧ್ಯಕ್ಷನಾದರೆ ಚಂದ್ರಶೇಖರ್ ಎನ್ನುವ ಮತ್ತೊಬ್ಬ ಚೇಲಾ ಉಪಾಧ್ಯಕ್ಷ. ಹೇಮಾವತಿ, ಗುರುಸ್ವಾಮಿ, ಲೀಲಾವತಿ, ರಫೀಕ್ ಪಾಷಾ, ಸೋಮಶೇಖರ್ ಹೀಗೆ ತನಗೆ ಬೇಕಾದವರನ್ನೆ ಬೇಕಾಬಿಟ್ಟಿಯಾಗಿ ತಂದು ಕೂರಿಸಿದ್ದಾನೆ. ಅಲ್ಲಿಗೆ ಅದೊಂದು ಸಾಂವಿಧಾನಿಕ ಸಂಘ ಅಲ್ಲವೆನ್ನುವುದು ಸಾಬೀತಾಗುತ್ತದೆ. ಅಂದ ಹಾಗೆ ಸಂಘದ ಈ ಪದಾಧಿಕಾರಿಗಳ್ಯಾರೂ ಬೀದಿ ವ್ಯಾಪಾರಿಗಳಲ್ಲ!

ಯೋಜನೆ ಇಡಿಯಾಗಿ ಮೈಸೂರು ಜಿಲ್ಲೆಗೆ ಅನ್ವಯಿಸುತ್ತದಾದರು ಇದರ ಸಾಧಕ ಬಾದಕಗಳನ್ನು ತಿಳಿದುಕೊಳ್ಳುವ ಸಲುವಾಗಿ ಪೈಲಟ್ ನಿಯಮದನ್ವಯ ಆರಂಭದಲ್ಲಿ ತಾನು ಪ್ರತಿನಿಧಿಸುವ ಚಾಮರಾಜ ಕ್ಷೇತ್ರದಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಹೇಳುತ್ತಿದ್ದಾನೆ. ಅದಕ್ಕೆ ತಕ್ಕಂತೆ ಆ ಕ್ಷೇತ್ರದ ವ್ಯಾಪ್ತಿಗೆ ಬರುವ 101 ಗಣಪತಿ ದೇವಸ್ಥಾನದ ಬಳಿ ತಾತ್ಕಾಲಿಕ ಕಚೇರಿಯನ್ನೂ ತೆರೆಸಿದ್ದಾನೆ. ಒಟ್ಟಾರೆ ಸ್ವಕ್ಷೇತ್ರದಲ್ಲಿ ತನ್ನ ಗೆಲುವನ್ನು ಗಟ್ಟಿ ಮಾಡಿಕೊಳ್ಳಲು ಈ ಸ್ಕೀಮನ್ನು ಚಾಲ್ತಿಗೆ ತಂದಿದ್ದಾನೆ. ಆದರೆ ಜನರಲ್ಲಿ ನಂಬಿಕೆ ಹುಟ್ಟಿಸುವ ಸಲುವಾಗಿ ಇಡೀ ಮೈಸೂರಿನ ಲೇಬಲ್ ಅಂಟಿಸಿದ್ದಾನಷ್ಟೆ.

ಅವನ ಮಾತನ್ನು ನಂಬಿದ ಮುಗ್ಧ ಜನ 'ಮಿನಿಸ್ಟ್ರು ರಾಮದಾಸು ಸಾಲ ಕೊಡಿಸ್ತಾರಂತೆ' ಅಂತ ಬ್ಯಾಕ್‌ನಲ್ಲಿ ಬಿಕರಿಯಾಗುತ್ತಿರುವ ಅರ್ಜಿ ನಮೂನೆಗಾಗಿ ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ರಾಮದಾಸನಿಗೆ ಬೇಕಾದದ್ದೂ ಇಷ್ಟೆ. ಹೇಗೂ ಚುನಾವಣೆ ಘೋಷಣೆಯಾಗಿರೋದರಿಂದ ನೀತಿ ಸಂಹಿತೆಯ ನೆಪ ಹೇಳಿ ಸ್ಕೀಮನ್ನು ಮೂಲೆಗುಂಪು ಮಾಡುತ್ತಾನೆ. ತನ್ನ ಹೆಸರಂತೂ ಚಲಾವಣೆಗೆ ಬಂದಿರುತ್ತೆ. ಅಲ್ಲದೆ ಚುನಾವಣೆ ಪ್ರಚಾರದಲ್ಲಿ ಇದನ್ನೂ ತನ್ನ ಸಾಧನೆಯನ್ನಾಗಿ ಬಿಂಬಿಸಿಕೊಂಡು ಮುಂದೆ ಗೆದ್ದು ಬಂದರೆ ಖಂಡಿತ ಜಾರಿಗೆ ತರುತ್ತೇನೆನ್ನುವ ಆಸೆ ಹುಟ್ಟಿಸಲು ಮತ್ತೊಂದು ಅಸ್ತ್ರ ಸಿಕ್ಕಂತಾಗುತ್ತದೆ. ಇದು ರಾಮದಾಸನ ಲೆಕ್ಕಾಚಾರ!



ಬೀದಿ ಬದಿ ವ್ಯಾಪಾರಿಗಳ ಬವಣೆಗಳು ಸಾಕಷ್ಟಿವೆ. ಅವರ ಆರ್ಥಿಕ ಸ್ಥಿತಿ ಸುಧಾರಿಸಲು ಮೈಕ್ರೋ ಫೈನಾನ್ಸ್‌ನಂತಹ ಯೋಜನೆಗಳು ನಿಜಕ್ಕೂ ಸಹಕಾರಿ. ಆದರೆ ಚುನಾವಣೆಯ ಆಸುಪಾಸಿನಲ್ಲಿ ಜನರ ಮುಗ್ಧತೆಯನ್ನು ಮತವಾಗಿಸಿಕೊಳ್ಳಲು ಮಾತ್ರವೇ ಇಂತಹ ಯೋಜನೆಗಳು ಬಲಿಯಾಗುತ್ತಿರುವುದು ವಿಪರ್ಯಾಸವೇ ಸರಿ. ರಾಜಕೀಯ ವಲಯದಲ್ಲಿ ಸಾಕಷ್ಟು ಅಪಸ್ವರ ಕೇಳಿ ಬಂದಿದ್ದರೂ ರಾಮದಾಸನ ಸೂರು-ಮೈಸೂರು ಯೋಜನೆಗೆ ಮಧ್ಯಮ ವರ್ಗದ ಜನರಿಂದ ಭಾರೀ ಪ್ರತಿಕ್ರಿಯೆಯೇ ಲಭಿಸಿತ್ತು. ಮೊನ್ನೆ ಅಕ್ಕನ ಬಳಗದ ರಸ್ತೆಯಲ್ಲಿರುವ ಮೈಸೂರು ಕಾರ್ಪೋರೇಷನ್‌ನಲ್ಲಿ ಸೂರಿನ ಯೋಜನೆಗೆ ಅರ್ಜಿ ವಿತರಿಸುತ್ತಾರೆ ಎನ್ನುವ ಸುದ್ದಿ ಕೇಳಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಜಮಾಯಿಸಿದ್ದರು. ನೂಕು ನುಗ್ಗುಲು ನಿಯಂತ್ರಿಸಲಾಗದೆ ಪೊಲೀಸರು ಲಾಠಿ ಚಾರ್ಜು ಮಾಡಿದ್ದರು. ಇದೆಲ್ಲದರಿಂದ ಪ್ರೇರಿತನಾಗಿ ಬೀದಿ ವ್ಯಾಪಾರಿಗಳಿಗೂ ಇಂತಹ ಸ್ಕೀಮು ಘೋಷಿಸಿದ್ದಾನೆ. ಒಟ್ಟಿನಲ್ಲಿ ಜನರ ಮುಗ್ಧತೆ ಮತ್ತು ಅಸಹಾಯಕತೆಗಳೊಟ್ಟಿಗೆ ಚೆಲ್ಲಾಟವಾಡುವ ರಾಮದಾಸನಂತಹ ರಾಜಕಾರಣಿಗಳಿಗೆ ಜನ ಪಾಠ ಕಲಿಸಬೇಕಾದ ಜರೂರತ್ತಿದೆ.

● ವರದಿಗಾರ

ಪೊಲೀಸ್ ಮಾಮೂಲಿಯಲ್ಲಿ 'ರಾಮ'ನ ಲೆಕ್ಕವೆಷ್ಟು?

ಮೈಕ್ರೋ ಫೈನಾನ್ಸ್ ಸಹಕಾರಿ ಬ್ಯಾಂಕ್ ಉದ್ಘಾಟನೆಯ ದಿನ ರಾಮದಾಸು ಅಳುವುದೊಂದನ್ನು ಬಿಟ್ಟು ಬೇರೆಲ್ಲ ರೀತಿಯಲ್ಲು ಬೀದಿ ವ್ಯಾಪಾರಿಗಳ ಕುರಿತು ವಿಪರೀತ ಕಾಳಜಿ ಪ್ರದರ್ಶಿಸಿದ. ಅದೆಲ್ಲದರಲ್ಲೂ ಕೃತಕತೆ ಎದ್ದು ಕಾಣುತ್ತಿತ್ತು. ಅಷ್ಟೇ ಸಲೀಸಾಗಿ ಅವನ ಪೆದ್ದು ತನವೂ ಅನಾವರಣವಾಗುತ್ತಿತ್ತು. ಬೀದಿ ವ್ಯಾಪಾರಿಗಳ ಬವಣೆ ಬಣ್ಣಿಸುತ್ತಾ 'ಸಣ್ಣ ಪುಟ್ಟ ವ್ಯಾಪಾರಿಗಳು ತೊಂದರೆ ಅನುಭವಿಸುತ್ತಾರೆ. ಕಷ್ಟಪಟ್ಟು ದುಡಿದರೂ ಪೊಲೀಸರಿಗೆ ಪ್ರತಿನಿತ್ಯ 5 ರಿಂದ 50 ರೂಪಾಯಿ ಮಾಮೂಲಿ ನೀಡಬೇಕಾಗುತ್ತೆ. ನನಗೆ ತಿಳಿದ ಮಟ್ಟಿಗೆ ತಿಂಗಳಿಗೆ ಬೀದಿ ವ್ಯಾಪಾರಿಗಳು 1 ಕೋಟಿ ರೂಪಾಯಿಯನ್ನು ಪೊಲೀಸರಿಗೆ ಮಾಮೂಲಿ ನೀಡುತ್ತಾರೆ' ಎಂದಿದ್ದ.

ಒಬ್ಬ ಶಾಸಕನಾಗಿ, ಸರ್ಕಾರದ ಸಚಿವನಾಗಿ, ಆ ಜಿಲ್ಲೆಯ ಉಸ್ತುವಾರಿ ಮಂತ್ರಿಯೂ ಆಗಿರುವ ರಾಮದಾಸನಿಗೆ ಪೊಲೀಸರು ಇಷ್ಟೆಲ್ಲಾ ಮಾಮೂಲಿ ವಸೂಲಿ ಮಾಡುತ್ತಾರೆ ಎಂದು ತಿಳಿದಿದ್ದರೂ ಇಷ್ಟು ದಿನ ಸುಮ್ಮನಿದ್ದದ್ದೇಕೆ? ಅಧಿಕಾರವಿರುವ ಆತ ಮನಸ್ಸು ಮಾಡಿದ್ದರೆ ಕಮೀಷನರ್‌ಗೆ ತಾಕೀತು ಮಾಡಿ ಪೊಲೀಸ್ ಮಾಮೂಲಿಯನ್ನು ಯಾವಾಗಲೊ ತಪ್ಪಿಸಬಹುದಿತ್ತು. ಗೊತ್ತಿದ್ದೂ ಸುಮ್ಮನಿದ್ದನೆಂದರೆ ಅದರಲ್ಲಿ ಆತನಿಗೂ ಪಾಲು ಸಂದಾಯವಾಗುತ್ತಿತ್ತು ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಇದೊಂದು ನಿದರ್ಶನ ಸಾಕಲ್ಲವೆ ಆತ ಬೀದಿ ವ್ಯಾಪಾರಿಗಳನ್ನು ಹೇಗೆಲ್ಲ ಬಳಸಿಕೊಳ್ಳುತ್ತಿದ್ದಾನೆ ಎಂಬುದನ್ನು ಸಾಬೀತು ಮಾಡಲು.



ಶಿವಮೊಗ್ಗದಿಂದ ಶುರುವಾಗಿ ರಾಜಧಾನಿ ಬೆಂಗಳೂರಿನ ತನಕ ಇಡೀ ಕರ್ನಾಟಕದ ಮೂಲೆ ಮೂಲೆಯ ನ್ಯಾಯಬೆಲೆ ಅಂಗಡಿಗಳನ್ನೆಲ್ಲ ಆಕ್ರಮಿಸಿದ ಪಡಿತರ ಖದೀಮರ ಜಾಲಕ್ಕೆ ಸುರಕ್ಷಾ ನಾಗರಾಜ್ ಎಂಬಾತನೇ ಅನಭಿಷಕ್ತ ದೊರೆಯಾದರೆ, ಉಪ ಮುಖ್ಯಮಂತ್ರಿ ಈಶ್ವರಪ್ಪ ಈ ಜಾಲದ ಗಾಡ್‌ಫಾದರ್ ಮತ್ತು ಪಿತಾಮಹ! ಪಡಿತರ ವಿತರಣೆಗೆಂದು ಆಹಾರ ನಿಗಮದ ಅಧಿಕಾರಿಗಳು ಖರೀದಿಸಿ ಶಿವಮೊಗ್ಗದ ಸುರಕ್ಷಾ ಗೋಡೌನಿನಲ್ಲಿ ಸಂಗ್ರಹಿಸಿಟ್ಟಿದ್ದ ಲಕ್ಷಗಟ್ಟಲೆ ಮೂಟೆಗಳಷ್ಟು ಅಕ್ಕಿ ಮತ್ತು ಭತ್ತದ ಪೈಕಿ ಸರಿಸುಮಾರು 60 ಸಾವಿರ ಕ್ವಿಂಟಾಲುಗಳಷ್ಟು ಭತ್ತ ಮತ್ತು 50 ಸಾವಿರ ಕ್ವಿಂಟಾಲುಗಳಷ್ಟು ಅಕ್ಕಿ ಏಕಾಏಕಿ ಗೋದಾಮಿನಿಂದ ನಾಪತ್ತೆಯಾಗಿತ್ತು. ಕಮ್ಮಿಯೆಂದರೂ ಇದು 12 ಕೋಟಿ ರೂ.ಗಳಷ್ಟು ಮೊತ್ತದ ಪಡಿತರ ಆಹಾರ ಧಾನ್ಯ!

ಸುರಕ್ಷಾ ನಾಗರಾಜನ ಕೈಚಲಕ

ಅಕ್ಕಿ ಮಾಫಿಯಾ ಪಿತಾಮಹ

ಸದ್ದಿಲ್ಲದೆ ನಡೆದು ಹೋದ ಇಬ್ಬರು ನಿಷ್ಠಾವಂತ ಅಧಿಕಾರಿಗಳ ಎತ್ತಂಗಡಿಗೂ ಕರ್ನಾಟಕದ ಕೋಟ್ಯಂತರ ಬಡಬಗ್ಗರು ತಿನ್ನುವ ಮುಗ್ಗಲು ಅಕ್ಕಿಗೂ ಮತ್ತು ಸುರಕ್ಷಾ ನಾಗರಾಜನೆಂಬ ಪಡಿತರ ದೈತ್ಯನಿಗೂ ಇರುವ ಸಂಬಂಧದ ಆಳ-ವಿಸ್ತಾರಗಳೆಲ್ಲ ಬಗೆದಷ್ಟೂ ಭಯಾನಕ!

ವರ್ಷವೊಂದಕ್ಕೆ ಸಾವಿರ ಕೋಟಿಗೂ ಅಧಿಕ ಮೊತ್ತದ ಸಾರ್ವಜನಿಕ ನಿಧಿಯೆಂಬುದು ಹೇಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ಅಕ್ಕಿ, ಗೋಧಿ, ಸಕ್ಕರೆಯಾಗಿ ಬಡಬಗ್ಗರು, ರೈತಾಪಿಗಳ ಹೊಟ್ಟೆ ಹಸಿವಿಗೆ ಮೂಲವಾಗುತ್ತೋ ಅದೇ ರೀತಿ ಪಡಿತರ ಮಾಫಿಯಾ ದೊರೆಯೊಬ್ಬನ ಕಪಿಮುಷ್ಟಿಗೆ ಇಡೀ ಪಡಿತರ ವ್ಯವಸ್ಥೆಯೇ ಸಿಲುಕುವುದಕ್ಕೂ ಕಾರಣವಾಗುತ್ತದೆ.

ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿ ಜೀವರಾಜ್ ಪದೇ ಪದೇ ಪತ್ರಿಕಾಗೋಷ್ಠಿ ನಡೆಸಿ ನ್ಯಾಯಬೆಲೆ ಅಂಗಡಿಗಳ ಸುಧಾರಣೆಯ ಡೈಲಾಗ್ ಹೊಡೆಯುತ್ತಾರೆ. ಮುಖ್ಯಮಂತ್ರಿ ಶೆಟ್ಟರ್ ಕರ್ನಾಟಕದ ಬಡವರಿಗೆಲ್ಲ 2 ರೂಪಾಯಿಗೆ ಕೆಜಿ ಅಕ್ಕಿ ಕೊಡುತ್ತೇನೆಂಬ 'ಕ್ರಾಂತಿ ಗೀತೆ'ಯನ್ನೇ ಚುನಾವಣಾ ಗಿಮಿಕ್ಕಾಗಿ ಘೋಷಿಸಿದ್ದೂ ಆಗಿದೆ. ಆದರೆ ಬಿಜೆಪಿ ಸರ್ಕಾರ ಕೊಡುವ ಅಕ್ಕಿಯಾದರೂ ಎಂಥಾದ್ದು? ಜನ ತಿನ್ನುವುದಿರಲಿ ಕನಿಷ್ಠ ನಾಯಿ ನರಿಗಳಾದರೂ ತಿನ್ನಲು ಯೋಗ್ಯವಾಗಿರಬೇಕಲ್ಲವೆ? ಜನ ಬೀದಿಗಿಳಿದು ಪ್ರತಿಭಟಿಸಿದ ಮೇಲೂ, ನ್ಯಾಯಬೆಲೆ ಅಂಗಡಿಗಳಿಗೆ ನುಗ್ಗಿ ಹುಳು ಹಿಡಿದ ಅಕ್ಕಿ ಮೂಟೆಗಳನ್ನೆಲ್ಲ ಬೀದಿಗೆ ತಂದು ಸುರಿದ ನಂತರವೂ, ಪತ್ರಿಕೆ ಈ ಬಗ್ಗೆ ಆಘಾತಕಾರಿ ಸತ್ಯವನ್ನ ತೆರೆದಿಟ್ಟ ನಂತರವೂ ಮಂತ್ರಿ ಜೀವರಾಜ್ ಆಗಲಿ, ಮುಖ್ಯಮಂತ್ರಿ ಶೆಟ್ಟರ್ ಆಗಲಿ ಪಡಿತರ ದುರವಸ್ಥೆಯತ್ತ ಏಕೆ ತಲೆ ಹಾಕುತ್ತಿಲ್ಲ ಗೊತ್ತೆ?

ಅದು ಪಡಿತರ ಮಾಫಿಯಾ!

ಶಿವಮೊಗ್ಗದಿಂದ ಶುರುವಾಗಿ ರಾಜಧಾನಿ ಬೆಂಗಳೂರಿನ ತನಕ ಇಡೀ ಕರ್ನಾಟಕದ ಮೂಲೆ ಮೂಲೆಯ ನ್ಯಾಯಬೆಲೆ ಅಂಗಡಿಗಳನ್ನೆಲ್ಲ ಆಕ್ರಮಿಸಿದ ಪಡಿತರ ಖದೀಮರ ಜಾಲಕ್ಕೆ ಸುರಕ್ಷಾ ನಾಗರಾಜ್ ಎಂಬಾತನೇ ಅನಭಿಷಕ್ತ ದೊರೆಯಾದರೆ, ಉಪ ಮುಖ್ಯಮಂತ್ರಿ ಈಶ್ವರಪ್ಪ ಈ ಜಾಲದ ಗಾಡ್‌ಫಾದರ್ ಮತ್ತು ಪಿತಾಮಹ!

ಮೊನ್ನೆ ಅಂದರೆ ಇದೇ ಮಾರ್ಚ್ 6 ರಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉನ್ನತ ಅಧಿಕಾರಿಗಳ ತಂಡವೊಂದು ಬೆಂಗಳೂರಿನಿಂದ ಒಂದಲ್ಲ ಎರಡು ಕಾರುಗಳಲ್ಲಿ ಶಿವಮೊಗ್ಗದ ಸವಲಂಗ ರಸ್ತೆಯ ಸುರಕ್ಷಾ ಗೋಡೌನಿನ ಮೇಲೆ ದಾಳಿಯಿಟ್ಟಿದೆ. ದಾಳಿ ನಡೆಸಿದ ಅಧಿಕಾರಿಗಳಾದರೂ ಎಂಥವರು? ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಜನರಲ್ ಮ್ಯಾನೇಜರ್ ಟಿ. ವೆಂಕಟೇಶ್, ಡೆಪ್ಯೂಟಿ ಜನರಲ್ ಮ್ಯಾನೇಜರ್ ನರಸಿಂಹಮೂರ್ತಿ, ಆಹಾರ ನಿಗಮದ ಶಿವಮೊಗ್ಗ ಜಿಲ್ಲಾ ವ್ಯವಸ್ಥಾಪಕ ಕೋದಂಡರಾಮ್ ಮುಂತಾದವರಿದ್ದ ತಂಡ ಇನ್ನೇನು ಶಿವಮೊಗ್ಗದ ಸುರಕ್ಷಾ ಗೋಡೌನಿಗೆ ನುಗ್ಗಿ ಕೋಟ್ಯಂತರ ರೂಪಾಯಿಗಳ ಅಕ್ರಮವನ್ನು ಪತ್ತೆ ಹಚ್ಚಬೇಕೆನ್ನುವಷ್ಟರಲ್ಲಿ ಇದ್ದಕ್ಕಿದ್ದಂತೆ ಯಾವುದೋ ಫೋನ್ ಕರೆಯೊಂದು ಬರುತ್ತದೆ. ಇದಾಗಿ ಮರುಕ್ಷಣವೇ ಇಡೀ ತಂಡ ವಾಪಸ್ಸಾಗುತ್ತದೆ.

ವಿಷಯವಿಷ್ಟೆ. ಪಡಿತರ ವಿತರಣೆಗೆಂದು ಆಹಾರ ನಿಗಮದ ಅಧಿಕಾರಿಗಳು ಖರೀದಿಸಿ ಶಿವಮೊಗ್ಗದ ಸುರಕ್ಷಾ ಗೋಡೌನಿನಲ್ಲಿ ಸಂಗ್ರಹಿಸಿಟ್ಟಿದ್ದ ಲಕ್ಷಗಟ್ಟಲೆ ಮೂಟೆಗಳಷ್ಟು ಅಕ್ಕಿ ಮತ್ತು ಭತ್ತದ ಪೈಕಿ ಸರಿಸುಮಾರು 60 ಸಾವಿರ ಕ್ವಿಂಟಾಲುಗಳಷ್ಟು ಭತ್ತ ಮತ್ತು 50 ಸಾವಿರ ಕ್ವಿಂಟಾಲುಗಳಷ್ಟು ಅಕ್ಕಿ ಏಕಾಏಕಿ ಗೋದಾಮಿನಿಂದ ನಾಪತ್ತೆಯಾಗಿತ್ತು. ಕಮ್ಮಿಯೆಂದರೂ ಇದು 12 ಕೋಟಿ ರೂಪಾಯಿಗಳಷ್ಟು ಮೊತ್ತದ ಪಡಿತರ ಆಹಾರ ಧಾನ್ಯ!

ಹೀಗೆ ಆಹಾರ ನಿಗಮದ ಅಧಿಕಾರಿಗಳು ರೈತರಿಂದ ಬೆಂಬಲ ಬೆಲೆಗೆ ಖರೀದಿಸಿ ಇಟ್ಟದ್ದ 60 ಸಾವಿರ ಕ್ವಿಂಟಾಲ್ ಭತ್ತ ಮತ್ತು 50 ಸಹಸ್ರ ಕ್ವಿಂಟಾಲ್ ಅಕ್ಕಿ ಇದ್ದಕ್ಕಿದ್ದಂತೆ ನಾಪತ್ತೆಯಾಗುತ್ತದೆಯೆಂದರೆ ಅದು ಸಣ್ಣ ಸಂಗತಿಯಲ್ಲ. ಇನ್ನೇನು ತಪಾಸಣಾ ತಂಡ ಹನಿಖೆಗಿಳಿಯಬೇಕೆನ್ನುವಷ್ಟರಲ್ಲಿ ಎಲ್ಲವನ್ನೂ ಕೈಬಿಟ್ಟು ವಾಪಸ್ಸಾಗುವಂತೆ ಅವರಿಗೆ ಮೇಲಧಿಕಾರಿಗಳಿಂದ ಫೋನ್ ಬರುತ್ತದೆ. ಆ ರೀತಿ ಬಂದ ಫೋನ್ ಕರೆ ಬೇರೆ ಯಾರದ್ದೂ ಅಲ್ಲದೆ ಆಹಾರ ನಿಗಮದ ಮ್ಯಾನೇಜಿಂಗ್ ಡೈರೆಕ್ಟರ್ ಸಿ.ಕೆ. ಶಿವಣ್ಣ ಎಂಬ ಐಎಎಸ್ ಅಧಿಕಾರಿಯದಾಗಿರುತ್ತದೆ.

ಸರಿಸುಮಾರು 1 ಲಕ್ಷ ಕ್ವಿಂಟಾಲುಗಳಷ್ಟು ಪಡಿತರ ಅಕ್ಕಿಯ ನಾಪತ್ತೆಯ ಬೆನ್ನು ಹತ್ತಿ ಶಿವಮೊಗ್ಗದ ಸುರಕ್ಷಾ ಗೋಡೌನಿನೆದುರು ಜಮಾಯಿಸಿದ್ದ ಪತ್ರಕರ್ತರು ಮತ್ತು ಟೀವಿಯವರಿಗಿದು ಮತ್ತಷ್ಟು ನಿಗೂಢವೆನಿಸಿ ಮೇಲಾಧಿಕಾರಿಗಳಿಗೆ ವಿಷಯ ಮುಟ್ಟಿದೆ. ಸದ್ಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಆಯುಕ್ತರಾಗಿರುವುದು ಕೆ.ಹೆಚ್. ಗೋವಿಂದರಾಜು ಎಂಬ ಹಿರಿಯ ಐಎಎಸ್ ಅಧಿಕಾರಿ. ಈ ಪಾಟಿ ಮೊತ್ತದ ಪಡಿತರ ನಾಪತ್ತೆ ಕುರಿತಂತೆ ಏನಾದರೂ ಕ್ರಮ ಜರುಗಿಸಲೇಬೇಕೆಂದು ಇದಾಗಿ ನಾಲ್ಕನೇ ದಿನಕ್ಕೆ ಎಂ.ಸಿ. ಗಂಗಾಧರ್ ಎಂಬ ನಿಷ್ಠಾವಂತ ಅಧಿಕಾರಿಯೊಬ್ಬರನ್ನು ಮತ್ತೆ ಶಿವಮೊಗ್ಗಕ್ಕೆ ಕಳಿಸಿ ಸುರಕ್ಷಾ ಗೋಡೌನಿನ ಅಕ್ರಮಗಳ ಕುರಿತು ವರದಿ ನೀಡುವಂತೆ ಆದೇಶಿಸುತ್ತಾರೆ. ಬಂದ ಗಂಗಾಧರ್ ಇನ್ನೇನು ತನಿಖೆ ನಡೆಸುವಷ್ಟರಲ್ಲಿ ಅವರಿಗೂ ಮತ್ತೆ

ಬಲಿಯಾದ ಇಬ್ಬರು ನಿಷ್ಠಾವಂತ ಅಧಿಕಾರಿಗಳು

2012ರ ಆಗಸ್ಟ್ ಹೊತ್ತಿಗೆ ಇದ್ದಕ್ಕಿದ್ದಂತೆ ಶಿವಮೊಗ್ಗದ ಜಿಲ್ಲಾಧಿಕಾರಿಯಾಗಿದ್ದ ಪೊನ್ನುರಾಜ್‌ರನ್ನು ಬಿಜೆಪಿ ಸರ್ಕಾರ ಎತ್ತಂಗಡಿ ಮಾಡಿದ ಎರಡೇ ತಿಂಗಳಿಗೆ ಆಹಾರ ನಿಗಮಕ್ಕೆ ಎಂ.ಡಿ.ಯಾಗಿದ್ದ ಜಗದೀಶ್‌ರನ್ನೂ ಅಷ್ಟೇ ನಿಗೂಢವಾಗಿ ಎತ್ತಂಗಡಿ ಮಾಡಲಾಗುತ್ತದೆ.

ಈ ಇಬ್ಬರೂ ಐಎಎಸ್ ಅಧಿಕಾರಿಗಳು ಮಾಡಿದ್ದು ಒಂದೇ ತಪ್ಪು, ಅದು ಸುರಕ್ಷಾ ನಾಗರಾಜನ ಬುಡಕ್ಕೆ ಕೈಹಾಕಿದ್ದು!

2011ರ ಅಕ್ಟೋಬರ್-ನವೆಂಬರ್ ಹೊತ್ತಿಗೆ ಶಿವಮೊಗ್ಗ ಜಿಲ್ಲೆಯೊಂದರಲ್ಲೇ 10 ಲಕ್ಷ ಕ್ವಿಂಟಾಲುಗಳಷ್ಟು ಭತ್ತ ಖರೀದಿಯಾದ ಪವಾಡವನ್ನು ಕೇಳಿದ್ದೇ ಡಿಸಿ ಪೊನ್ನುರಾಜ್‌ಗೆ ಅನುಮಾನ ಬರುತ್ತದೆ. ಸುರಕ್ಷಾ ಗೋಡೌನಿನ ಮೇಲೆ ರಾತ್ರೋರಾತ್ರಿ ದಾಳಿ ನಡೆಸುತ್ತಾರೆ. ಅಲ್ಲಿ 10.5 ಲಕ್ಷ ಟನ್ ಭತ್ತವಿರಲಿ, ಲಕ್ಷ ಟನ್ ಕೂಡ ಇರಲಿಲ್ಲ. ಸಿಕ್ಕಿದ್ದು ಹುಳು ಹುಪ್ಪಟೆಗಳಿಂದಲೇ ಪುತುಗುಡುತ್ತಿದ್ದ ಕಳಪೆ ಅಕ್ಕಿ ಮಾತ್ರ. ಗೋಡೌನ್ ಒಂದಕ್ಕಿರಬೇಕಾದ ಯಾವುದೇ ಸೌಕರ್ಯವಿಲ್ಲದ ನೆಲ ಹಾಸು, ಔಷಧಿ ಸಿಂಪಡಣೆ, ವಾತಾಯನ ಏನೊಂದೂ ಇಲ್ಲದ ಸುರಕ್ಷಾ ಗೋಡೌನೇ ಆಹಾರ ಧಾನ್ಯಗಳ ಶೇಖರಣೆಗೆ ಅಪಾಯಕಾರಿಯಾಗಿತ್ತು.

ದಾಳಿಗೀಡಾದ ಅಕ್ಕಿ ಚೀಲಗಳ ಸ್ಯಾಂಪಲ್ಲುಗಳನ್ನು ತೆಗೆದು ಕೇಂದ್ರ ಸರ್ಕಾರದ ಪ್ರಯೋಗಾಲಯದ ಪರೀಕ್ಷೆಗೆ ಕಳಿಸಿದರೆ ಅದು ಮನುಷ್ಯ ಸೇವನೆಗೇ ಯೋಗ್ಯವಲ್ಲದ್ದೆಂದು ವರದಿ ಬಂದಿತ್ತು. ಆ ಕಾಲದಿಂದಲೂ FCIರ ಅಸಿಸ್ಟೆಂಟ್ ಮ್ಯಾನೇಜರ್ ಲೋಕೇಶನನ್ನು ಬುಟ್ಟಿಗೆ ಹಾಕಿಕೊಂಡು ಕಳಪೆ ಅಕ್ಕಿಗೆ ಆತ ಕೊಡುತ್ತಿದ್ದ ಬೋಗಸ್ ಸರ್ಟಿಫಿಕೇಟನ್ನೇ ಬಳಸಿ ನಾಗರಾಜ್ ಅಕ್ಕಿ ದಬಾಯಿಸುತ್ತಿದ್ದದ್ದು ಈ ಬಾರಿ ಬಯಲಾಗಿತ್ತು.



ಡಿಸಿ ಪೊನ್ನುರಾಜ್

ಇದೆಲ್ಲವನ್ನೂ ಸಾಕ್ಷಾಧಾರ ಸಮೇತವೇ ಬೆಂಗಳೂರಿನ ಆಹಾರ ಆಯುಕ್ತ ಗೋವಿಂದರಾಜ್‌ಗೆ ದೂರು ನೀಡಿದ ಡಿಸಿ ಪೊನ್ನುರಾಜ್ ಕಠಿಣ ಕ್ರಮ ಕ್ರಮಗೊಳ್ಳುವಂತೆ ಸೂಚಿಸುತ್ತಾರೆ. ಆದರೆ ಆಯುಕ್ತ ಗೋವಿಂದರಾಜುವನ್ನು ಆ ಹುದ್ದೆಗೆ ಹಾಕಿಸಿಕೊಂಡಿದ್ದೇ ಸುರಕ್ಷಾ ನಾಗರಾಜು!


ಇನ್ನು ನಾಗರಾಜುನ ಋಣ ಗೋವಿಂದರಾಜು ತೀರಿಸಬೇಕಲ್ಲವೆ? ಡಿಸಿ ಪೊನ್ನುರಾಜ್ ವರದಿಗೆ ವ್ಯತಿರಿಕ್ತವಾಗಿ **Food safety and standard Association of India (FSSAI)** ಎಂಬ ಭ್ರಷ್ಟ ಸಂಸ್ಥೆಯಿಂದ ಇನ್ನೊಂದು ಪರೀಕ್ಷೆ ಮಾಡಿಸಿ ಕಳಿಸಿದ ಸ್ಯಾಂಪಲ್ಲು ಉತ್ತಮ ಗುಣಮಟ್ಟದ್ದೆಂದು ಉಲ್ಟಾ ವರದಿ ಮಾಡಿಸಿದ್ದೇ ಡಿಸಿ ಪೊನ್ನುರಾಜ್‌ಗೆ ಬೆದರಿಸಿ ಪತ್ರ ಬರೆಯುತ್ತಾರೆ.

ತಾನು ಇಷ್ಟೆಲ್ಲಾ ಶ್ರಮ ವಹಿಸಿ ನಡೆಸಿದ ದಾಳಿ ಮತ್ತು ಕೈಗೊಂಡ ಕ್ರಮಕ್ಕೆ ಯಾವುದೇ ಬೆಲೆ ಸಿಗದೇ ಹೋಗಿದ್ದು ಡಿಸಿ ಪೊನ್ನುರಾಜಗೆ ಅವಮಾನವೇ ಸರಿ. ಇಷ್ಟಾಗ್ಯೂ ನಾಗರಾಜನ ತಾಕತ್ತು ಯಾವ ಮಟ್ಟಕ್ಕಿತ್ತೆಂದರೆ ಈಶ್ವರಪ್ಪನವರ ಮೂಲಕ ಒಂದೇ ತಿಂಗಳಲ್ಲಿ ಪೊನ್ನುರಾಜ್‌ರನ್ನೇ ಜಿಲ್ಲಾಧಿಕಾರಿ ಹುದ್ದೆಯಿಂದ ಎತ್ತಂಗಡಿ ಮಾಡಿಸಿಬಿಟ್ಟ.

ಇದೇ ಹೊತ್ತಿಗೆ ಆಹಾರ ನಿಗಮ ಅಂದರೆ ಕೆಎಫ್‌ಸಿಎಸ್‌ಸಿಗೆ ಎಂ.ಡಿ. ಯಾಗಿದ್ದು ಮತ್ತೊಬ್ಬ ನಿಷ್ಠಾವಂತ ಅಧಿಕಾರಿ ಜಗದೀಶ್. ಏಕಾಏಕಿ ಖರೀದಿಯಾದ 10.5 ಲಕ್ಷ ಕ್ವಿಂಟಾಲ್ ಭತ್ತದ ಮರ್ಮಕ್ಕೆ ಕೈಹಾಕಿದ್ದೇ ನಾಗರಾಜನ ಅಕ್ರಮಗಳ ವಿರುದ್ಧ ಎಲ್ಲಾ ಸಾಕ್ಷಾಧಾರಗಳನ್ನು ಕಲೆಹಾಕಿ ಆಹಾರ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಹರೀಶ್ ಗೌಡರಿಗೆ ದೂರು ಕೊಟ್ಟರು. ಆದರೆ ನಾಗರಾಜ್ ಎರಡೇ ತಿಂಗಳಲ್ಲಿ ಎಂ.ಡಿ. ಜಗದೀಶ್‌ರನ್ನೇ ಎತ್ತಂಗಡಿ ಮಾಡಿ ಆ ಜಾಗಕ್ಕೆ ತನ್ನ ದಂಧೆಯ ಸ್ಲೀಪಿಂಗ್ ಪಾರ್ಟ್‌ನರ್ ಸಿ.ಕೆ. ಶಿವಣ್ಣನನ್ನು ತಂದಿದ್ದ.

ಅಲ್ಲಿಗೆ ಸುರಕ್ಷಾ ಗೋಡೌನಿನ ಅಟ್ಟಹಾಸದ ವಿರುದ್ಧ ಧನಿಯೆತ್ತಿದ್ದ ಶಿವಮೊಗ್ಗ ಜಿಲ್ಲಾಧಿಕಾರಿ ಪೊನ್ನುರಾಜ್ ಮತ್ತು ಕೆಎಫ್‌ಸಿಎಸ್‌ಸಿಯ ಎಂ.ಡಿ. ಜಗದೀಶ್ ಇಬ್ಬರನ್ನೂ ಎರಡೇ ತಿಂಗಳಲ್ಲಿ ನಾಗರಾಜ ಎತ್ತಂಗಡಿ ಮಾಡಿಸಿದ್ದ. ಪೇರೋಲ್‌ನಲ್ಲಿದ್ದ ಖದೀಮ ಐಎಎಸ್ ಗೋವಿಂದ ರಾಜುವನ್ನು ಆಹಾರ ಆಯುಕ್ತನನ್ನಾಗಿಸಿ, ತನ್ನ ದಂಧೆಯ ಪಾಲುದಾರ ಶಿವಣ್ಣನನ್ನು ಕೆಎಫ್‌ಸಿಎಸ್‌ಸಿಯ ಎಂ.ಡಿ. ಹುದ್ದೆಗೆ ತಂದು, ತನ್ನ ಸಾಕು ನಾಯಂತಿದ್ದ ವಿ.ವಿ. ನರಸಿಂಹಮೂರ್ತಿ ಎಂಬ ತಿಂಡಿಪೋತನನ್ನು ಕೆಎಫ್‌ಸಿಎಸ್‌ಸಿಯ ಡಿಜಿಎಂ ಗಾದಿಯಲ್ಲಿ ಪ್ರತಿಷ್ಠಾಪಿಸಿ ಟಿ. ವೆಂಕಟೇಶ್ ಎಂಬ ಮತ್ತೊಬ್ಬನನ್ನು ಆಹಾರ ನಿಗಮದ ಜನರಲ್ ಮ್ಯಾನೇಜರ್ ಆಗಿಸಿಬಿಟ್ಟಿದ್ದ.

ಕೆಎಫ್‌ಸಿಎಸ್‌ಸಿಯ ಎಂ.ಡಿ. ಸಿ.ಕೆ. ಶಿವಣ್ಣ ಮತ್ತು ಸುರಕ್ಷಾ ನಾಗರಾಜ್ ಸೇರಿಕೊಂಡು ಮಿನರಲ್ ವಾಟರ್ ಘಟಕವೊಂದನ್ನು ಪಾಲುದಾರಿಕೆ ಆಧಾರದಲ್ಲಿ ನಡೆಸುತ್ತಿರುವಾಗ ಕಳಪೆ ಅಕ್ಕಿಯ ವಿರುದ್ಧ ಕ್ರಮ ವಹಿಸುವವರಾದರೂ ಯಾರು? ಆಹಾರ ಇಲಾಖೆಗೆ ಸದ್ಯ ಪ್ರಧಾನ ಕಾರ್ಯದರ್ಶಿಯಾಗಿರುವ ಅಶ್ವತ್ಥನಾರಾಯಣರದ್ದೂ ನರದೌರ್ಬಲ್ಯವೆ. ಚುನಾವಣೆಗಿನ್ನು ದಿನ ಎಣಿಸುತ್ತಿರುವ ಮಂತ್ರಿ ಜೀವರಾಜ್‌ಗೆ ಬಂದಷ್ಟು ಗುಂಜಿಕೊಂಡರೆ ಅದೇ ಎಲೆಕ್ಷನ್ ಖರ್ಚಿಗಾಗುತ್ತದೆ. ಇನ್ನು ಸುರಕ್ಷಾ ನಾಗರಾಜನ ಅಟ್ಟಹಾಸದ ವಿರುದ್ಧ ಏನಾದರೂ ಆಗಬೇಕೆಂದರೆ ಒಂದೋ ಲೋಕಾಯುಕ್ತ ಧೈರ್ಯ ಮಾಡಬೇಕು ಅಥವಾ ಜನರೇ ದಂಗೆ ಏಳಬೇಕು.


ರಾಜ್

ಕರೆ ಬರುತ್ತದೆ.

ಂದ ದಾರಿಗೆ ಸುಂಕವಿಲ್ಲ ಎಂಬಂತೆ ಗಂಗಾಧರ್ ಬರಿಗೈಯಲ್ಲಿ ಬೆಂಗಳೂರಿಗೆ ವಾಪಸ್ಸಾಗುತ್ತಾರೆ. ಲಕ್ಷ ಕ್ವಿಂಟಾಲ್ ಪಡಿತರ ಅಕ್ಕಿಯ ನಾಪತ್ತೆ ವೇ ಸದ್ದಿಲ್ಲದೆ ಮುಚ್ಚಲ್ಪಡುತ್ತದೆ!

ಹಾರ ಇಲಾಖೆಯ ಮೂಲಗಳೇ ಹೇಳುವಂತೆ ಂದು ಬಂದಿದ್ದ ಗಂಗಾಧರ್‌ಗೆ ಇದ್ದಕ್ಕಿದ್ದಂತೆ ಪ್ಪಗುವಂತೆ ಫೋನ್ ಮೂಲಕ ಆದೇಶಿಸಿದ್ದು ಆಹಾರ ಕಮೀಷನರ್ ಗೋವಿಂದರಾಜು. ನೀಡಿದ್ದ ಆದೇಶಕ್ಕೆ ವ್ಯತಿರಿಕ್ತವಾಗಿ ಪ್ಪಗುವಂತೆ ಕಮೀಷನರ್ ಗೋವಿಂದರಾಜು ಸಿದ್ದಕ್ಕೆ ಕಾರಣವಾಗಿದ್ದು ಉಪಮುಖ್ಯಮಂತ್ರಿ ಪ್ಪನವರು ಐಎಎಸ್ ಗೋವಿಂದರಾಜುವಿಗೆ ದ ಮೊಬೈಲ್ ಆದೇಶ!

ಜ್ಯದ ಅತೀ ದೊಡ್ಡ ಪಡಿತರ ವೊಂದನ್ನು ಮುಚ್ಚಿಹಾಕುವಲ್ಲಿ ಡಿಸಿಎಂ ಪ್ಪ ಈ ಮಟ್ಟಕ್ಕಿಳಿದು ಐಎಎಸ್ ರಿಯೊಬ್ಬರಿಗೆ ಧಮಕಿ ಹಾಕುತ್ತಾರೆಂದರೆ ರುವ ಕಾರಣವಾದರೂ ಏನು?

ದು ಶಿವಮೊಗ್ಗದ ಸವಲಂಗ ರಸ್ತೆಯ ಸುರಕ್ಷಾ ಾನಿನ ಮರ್ಮ ಮತ್ತು ಅದರ ಧಣಿ ಜೆ.ಎಸ್. ಜ್ ಎಂಬ ನಿಗೂಢ ಆಸಾಮಿಯ ಾಜಾಲ!

ದ್ಯ ಇಡೀ ಆಹಾರ ಮತ್ತು ಕ ಸರಬರಾಜು ಇಲಾಖೆಗೆ ಜೀವರಾಜ್ ಸ್ಥರಿರಬಹುದು. ಕೆ.ಹೆಚ್. ಂದರಾಜು ಎಂಬ ಸ್ ಆಯುಕ್ತರಾಗಿಯೂ ನಾರಾಯಣಗೌಡ ಎಂಬ ಬ್ಬ ಐಎಎಸ್ ಇಲಾಖೆಗೆ ದರ್ಶಿಯಾಗಿಯೂ ಹುದು. KFCS ಆಹಾರ ನಿಗಮಕ್ಕೆ ಶಿವಣ್ಣ ಎಂಬ ಪುಟ್ಟಾ ೂಬ್ಬ ಎಂ.ಡಿ.ಯಾಗಿದ್ದು ವೆಂಕಟೇಶ್ ಎಂಬಾತ ್ ಮ್ಯಾನೇಜರ್ ಇಡೀ ಇಲಾಖೆಯ ೇವಾಧಿಪತಿ ಎಂದರೆ ಸುರಕ್ಷಾ ನಾಗರಾಜ್!

ರ್ಧ ಡಜನ್ ರೈಸ್ ಮಿಲ್ಲುಗಳನ್ನೂ ಅಷ್ಟೇ ಯು ಗೋಡೌನುಗಳನ್ನು ಹೊಂದಿದ ಯೊಬ್ಬ ಇಡೀ ಆಹಾರ ಮತ್ತು ನಾಗರಿಕ ರಾಜು ಇಲಾಖೆಯನ್ನೇ ನಿಯಂತ್ರಿಸುತ್ತಿರುವುದರ ಮಾತ್ರ ನಿಜಕ್ಕೂ ಭಯಾನಕ.

ಾಜ್ಯದ ಸಹಸ್ರಾರು ನ್ಯಾಯಬೆಲೆ ಅಂಗಡಿಗಳ ಲಕ ಕೋಟ್ಯಂತರ ರೈತಾಪಿ ಬಡಬಗ್ಗರಿಗೆ ಕಡಿಮೆ ಅಕ್ಕಿ ವಿತರಿಸುವ ಪಡಿತರ ವ್ಯವಸ್ಥೆಯ ಬಿಯುವುದು ಆಹಾರ ಇಲಾಖೆ ರೈತರಿಂದ ಲ ಬೆಲೆಗೆ ಖರೀದಿಸುವ ಭತ್ತದಲ್ಲಿ, ಕರ್ನಾಟಕದ ಬೆಳೆಯುವ ಪ್ರದೇಶಗಳ ರೈತರಿಂದ ಕ್ವಿಂಟಾಲಿಗೆ ರೂಪಾಯಿ ಬೆಂಬಲ ಬೆಲೆ ತೆತ್ತು ಸರ್ಕಾರ ಅಕ್ಕಿ ಖರೀದಿಸುತ್ತದೆ. ಕೇಂದ್ರದ ಸಬ್ಸಿಡಿ ಮತ್ತು ರಾಜ್ಯದ ಬೆಂಬಲ ಬೆಲೆ ಸೇರಿದರೆ ಕ್ವಿಂಟಾಲಿಗೆ 1500 ರೂಪಾಯಿಯಂತೆ ಸರ್ಕಾರ ಪಡಿತರ ಅಕ್ಕಿ ಖರೀದಿಸುತ್ತದೆ.

ಹೀಗೆ ರೈತರಿಂದ ಖರೀದಿಸಲ್ಪಟ್ಟ ಅಕ್ಕಿಯನ್ನು ಸರ್ಕಾರ ತನ್ನದೇ ಗೋಡೌನಗಳಲ್ಲಿಡಬೇಕು. ಕೇಂದ್ರದ FCI ಅಂದರೆ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಎಂಬ ಗೋದಾಮುಗಳಲ್ಲೋ ಅಥವಾ ರಾಜ್ಯ ಉಗ್ರಾಣ ನಿಗಮದ ಗೋದಾಮುಗಳಲ್ಲೋ ಇಂಥ ಅಕ್ಕಿಯನ್ನು ಸಂಗ್ರಹಿಸಿಡಬೇಕು. ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಉಗ್ರಾಣ ನಿಗಮದ ಗೋದಾಮುಗಳಿವೆಯಾದರೂ ಇಲ್ಲಿ ಶಿವಮೊಗ್ಗದ ಸುರಕ್ಷಾ ನಾಗರಾಜ್‌ನಿಗಾಗಿಯೇ ವಿಚಿತ್ರ ಕಾರಸ್ಥಾನವೊಂದು ನಡೆಯುತ್ತದೆ. ಶಿವಮೊಗ್ಗ ಸುತ್ತಮುತ್ತಲ ಬಹುತೇಕ ತಾಲ್ಲೂಕುಗಳ ಸರ್ಕಾರಿ ಗೋಡೌನುಗಳ ವ್ಯವಸ್ಥಾಪಕರೇ ತಮ್ಮಲ್ಲಿ ಪಡಿತರ ಅಕ್ಕಿ ಸಂಗ್ರಹಿಸಿಡಲು ಜಾಗವೇ ಇಲ್ಲ ಎಂದು ಆಹಾರ ನಿಗಮದ ವ್ಯವಸ್ಥಾಪಕರಿಗೆ ಪತ್ರ ಬರೆಯುತ್ತಾರೆ. ಈ ಗೋಡೌನ್ ಖಾಲಿ ಹೊಡೆಯುತ್ತಿದ್ದರೂ ತಮ್ಮಲ್ಲಿ ಜಾಗವಿಲ್ಲ ಎಂದು ಉಗ್ರಾಣ ನಿಗಮದ ಅಧಿಕಾರಿಗಳೇ ಪತ್ರ ಬರೆಯುವುದರ ಉದ್ದೇಶ ಶಿವಮೊಗ್ಗದ ಸುರಕ್ಷಾ ನಾಗರಾಜ್‌ನಿಗೆ ಅನುಕೂಲ ಕಲ್ಪಿಸುವುದು.

ಶಿವಮೊಗ್ಗದ ಸವಲಂಗ ರಸ್ತೆಯ ಜೆಪಿಎಸ್ ಇಂಜಿನಿಯರಿಂಗ್ ಕಾಲೇಜಿನ ಎದುರು ಪಾಳು ಬಿದ್ದಿದ್ದ ಹಂಚಿನ ಫ್ಯಾಕ್ಟರಿಯೊಂದನ್ನೇ ಗೋದಾಮಾಗಿ ಪರಿವರ್ತಿಸಿ ಅದಕ್ಕೆ ಸುರಕ್ಷಾ ವೇರ್ ಹೌಸ್ ಕಾರ್ಪೊರೇಷನ್ ಎಂಬ ಬೋರ್ಡ್ ತಗುಲಿ ಹಾಕಿದ್ದಾನೆ ನಾಗರಾಜ. ಮೂಲತಃ ವಂಚಕನಾಗೇ ಚಾಲ್ತಿಗೆ ಬಂದ ಈತ ಬಂಗಾರಪ್ಪನ ಕಾಲದಲ್ಲಿ ಆಶ್ರಯ ಹಗರಣದಲ್ಲಿ ಕೋಟಿಗಟ್ಟಲೇ ವಂಚಿಸಿ ಜೈಲು ಪಾಲಾಗಿದ್ದ. ಕ್ರಮೇಣ ಲಾರಿಯೊಂದನ್ನು ಇಟ್ಟುಕೊಂಡು ನ್ಯಾಯಬೆಲೆ ಅಂಗಡಿಗಳಿಗೆ ಅಕ್ಕಿ ಮೂಟೆಗಳನ್ನು ಸಾಗಿಸಲಾರಂಭಿಸಿದ. ಅದೇ ಹೊತ್ತಿಗೆ ಮಲ್ನಾಡ್ ಟೈಲ್ಸ್ ಫ್ಯಾಕ್ಟರಿಗೆ ಮ್ಯಾನೇಜರ್ ಆಗಿ ಸೇರ್ಪಡೆಯಾದವನು ಅದರ ಮಾಲಿಕ ವಿದೇಶಕ್ಕೆ ಹೋಗಿದ್ದನ್ನೇ ಬಳಸಿಕೊಂಡು ಆತ ಖಾಲಿ ಕಾಗದ ಪತ್ರಗಳಿಗೆ ಸಹಿ ಮಾಡಿಕೊಟ್ಟಿದ್ದನ್ನೇ ಉಪಯೋಗಿಸಿ ಇಡೀ ಹಂಚಿನ ಕಾರ್ಖಾನೆಯನ್ನೇ ಲಪಟಾಯಿಸಿಬಿಟ್ಟ.

ಹಾಗೆ ನೋಡಿದರೆ ಸುರಕ್ಷಾ ಗೋಡೌನಿಗೆ ವೈಜ್ಞಾನಿಕವಾಗಿ ಗೋದಾಮವೊಂದಕ್ಕೆ ಇರಬೇಕಾದ ಯಾವುದೇ ಅರ್ಹತೆಗಳಿಲ್ಲ. ಯಾವುದೇ ಆಹಾರ ಧಾನ್ಯ ಚೀಲಗಳಿಟ್ಟರೂ ಅದು ಸುರಕ್ಷಿತವಾಗಿ ಉಳಿಯಲು ಬೇಕಾದ ಯಾವ ಸೌಲಭ್ಯಗಳೂ ಅಲ್ಲಿಲ್ಲ. ಈಗ ಆಹಾರ ನಿಗಮಕ್ಕೆ ಎಂ.ಡಿ.ಯಾಗಿರುವ ಸಿ.ಕೆ. ಶಿವಣ್ಣ ಎಂಬ ಖದೀಮ 2008-09ರ ಹೊತ್ತಿಗೆ ರಾಜ್ಯ ಉಗ್ರಾಣ ನಿಗಮಕ್ಕೆ ಅಧ್ಯಕ್ಷನಾಗಿದ್ದಾಗ ಅದೇನು ಡೀಲು ಕುದುರಿತ್ತೋ ರೈತರಿಂದ ಖರೀದಿಸಿದ್ದ ಮೆಕ್ಕೆ ಜೋಳವನ್ನೆಲ್ಲ ಈತನ ಕಳಪೆ ಗೋಡೌನಿನಲ್ಲಿ ಇಡುವಂತೆ ಶಿವಣ್ಣ ನೋಡಿಕೊಂಡ.


ಡಿಜಿಎಂ ನರಸಿಂಹಮೂರ್ತಿ

ತೀರ ಅಗ್ಗದ ದರಕ್ಕೆ ಖರೀದಿಸಿದ ಮೆಕ್ಕೆಜೋಳಕ್ಕೆ ಏಕಾಏಕಿ ದುಬಾರಿ ರೇಟು ಬಂದಿದ್ದೇ ನಾಗರಾಜ ಅದನ್ನೆಲ್ಲ ಲಾಭಕ್ಕೆ ಮಾರಿ ಹಾಕಿ ಆ ಜಾಗದಲ್ಲಿ ಅರ್ಧಕ್ಕೂ ಕಮ್ಮಿ ರೇಟಿನ ಮುಗ್ಗಲು ಜೋಳವನ್ನು ತಂದಿಟ್ಟ. ಅದೆಷ್ಟು ಮನೆಗಳು ಬೀದಿಗೆ ಬಿದ್ದವೋ ನಾಗರಾಜು ಮಾತ್ರ ಉದ್ಧಾರವಾಗಿ ಹೋದ!

ಇದಾದ ಮೇಲೆ 2009-10ರ ಸಾಲಿನ ಬೆಂಬಲ ಬೆಲೆ ಭತ್ತ ಖರೀದಿ ಶುರುವಾಯಿತು. ಪ್ರಾರಂಭದಲ್ಲಿ ರೈತರಿಂದ ಖರೀದಿಸಿದ್ದ ಒಳ್ಳೇ ಭತ್ತವೇ ಇತ್ತಾದರೂ ಅದನ್ನೆಲ್ಲ ಸದ್ದಿಲ್ಲದೇ ಮಾರಿ ಹಾಕಿ ಆ ಜಾಗದಲ್ಲಿ ಕಳಪೆ ಭತ್ತ ಇಟ್ಟಿದ್ದ. ಅಲ್ಲಿನ ಕಳಪೆ ಅಕ್ಕಿ, ಭತ್ತಗಳನ್ನು ಯಾವ ರೀತಿ ಉಪಯೋಗಿಸಿ ಹೇಗೆ ಲಾಭ ಮಾಡಿಕೊಳ್ಳಬೇಕೆಂಬುದು ನಾಗರಾಜ್‌ಗೆ ಕರಗತವಾಗಿತ್ತು. ರೈತರಿಂದ ಖರೀದಿಸಿದ ಭತ್ತವನ್ನು ಅಕ್ಕಿಯಾಗಿ ಪರಿವರ್ತಿಸಲು ಹಲ್ಲಿಂಗ್‌ಗೆ ಅಂದರೆ ರೈಸ್ ಮಿಲ್ಲುಗಳಿಗೆ ಕೊಡಲೇಬೇಕು. ಅದರ ಬದಲಿಗೆ ತಾನೇ ರೈಸ್ ಮಿಲ್ಲುಗಳನ್ನಿಟ್ಟರೆ?

ಒಂದೇ ವರ್ಷಕ್ಕೆ ನಾಗರಾಜ್ ತನ್ನ ಸುರಕ್ಷಾ ಗೋದಾಮಿನ ಆವರಣದೊಳಗೇ ಒಂದಲ್ಲ ಆರು ರೈಸ್ ಮಿಲ್ಲುಗಳನ್ನು ಆರಂಭಿಸಿದ್ದ. ತನ್ನದೇ ಗೋದಾಮಿನಲ್ಲಿ ಸಂಗ್ರಹಿಸಿಟ್ಟಿದ್ದ ಭತ್ತವನ್ನು ತನ್ನದೇ ರೈಸ್ ಮಿಲ್ಲುಗಳಲ್ಲಿ ಹಲ್ಲಿಂಗ್ ಮಾಡುವುದರ ಉದ್ದೇಶವೇ ಬೇರೆಯಿತ್ತು.

ಅದು ತಮಿಳುನಾಡಿನಿಂದ ಮುಗ್ಗಲು ಭತ್ತವನ್ನು ಕಳ್ಳ ಸಾಗಾಣಿಕೆಯಲ್ಲಿ ತರಿಸಿ ಅದನ್ನೇ ಶಿಕಾರಿಪುರ, ಶಿರಾಳಕೊಪ್ಪ, ಆನವಟ್ಟಿಯ ರೈತರಿಂದ ಖರೀದಿಸಿದಂತೆ ದಾಖಲೆ ಸೃಷ್ಟಿಸಿ ಕೋಟಿಗಟ್ಟಲೇ ದೋಚುವುದು. ಶುರುವಿನಲ್ಲಿ ತಮಿಳುನಾಡಿನಲ್ಲಿ ಕಳವು ಭತ್ತ ಸ್ಮಗಲ್ ಮಾಡಿಸುತ್ತಿದ್ದ ನಾಗರಾಜ್ ಕಾಲಕ್ರಮೇಣ ತಮಿಳುನಾಡು ಸರ್ಕಾರ ಅಲ್ಲಿನ ಬಡವರಿಗೆ ಕೊಡುತ್ತಿದ್ದ 2 ರೂ.ಗೆ ಕೆ.ಜಿ ಅಕ್ಕಿಯನ್ನೇ ಲಾರಿ ಲೋಡುಗಳಲ್ಲಿ ಕಳ್ಳಸಾಗಾಣಿಕೆಗಿಳಿದ. ತಮಿಳುನಾಡಿನಲ್ಲಿ ಕ್ವಿಂಟಾಲಿಗೆ ನಾನೂರೋ ಐನೂರೋ ಕೊಟ್ಟು ಶಿವಮೊಗ್ಗದ ತನ್ನ ಗೋಡೌನಿಗೆ ಸಾಗಿಸಿದನೆಂದರೆ ಇಲ್ಲಿ ಅದರ ಬೆಲೆ 1500 ರೂಪಾಯಿಯಾಗುತ್ತದೆ.

ಶಿರಾಳಕೊಪ್ಪ, ಆನವಟ್ಟಿ, ಶಿಕಾರಿಪುರ, ಹೊನ್ನಾಳಿ ಇತ್ಯಾದಿ ಊರುಗಳ ರೈತರಿಂದ ಬೆಂಬಲ ಬೆಲೆಗೆ ಭತ್ತ ಖರೀದಿಸಿದಂತೆ, ತದನಂತರ ಅದನ್ನು ತನ್ನದೇ ರೈಸ್‌ಮಿಲ್ಲುಗಳಲ್ಲಿ ಹಲ್ಲಿಂಗ್ ಮಾಡಿದಂತೆ ದಾಖಲೆ ಸೃಷ್ಟಿಸಿ ಅದನ್ನು ಸಾರಾಸಗಟಾಗಿ ಆಹಾರ ನಿಗಮಕ್ಕೆ ಮಾರುವುದೇ ನಾಗರಾಜನ ಅಸಲೀ ಧಂದೆ. ಇಲ್ಲಿ ರೈತರಿಂದ ಭತ್ತವೇ ಬಂದಿರುವುದಿಲ್ಲ, ಆದರೆ ದಾಖಲೆಗಳಲ್ಲಿ ರೈತನ ಹೆಸರು, ಆತನ ಜಮೀನಿನ ಪಹಣಿಗಳನ್ನು ಲಗತ್ತಿಸಲಾಗುತ್ತಿದೆ. ಅದೇ ಹೆಸರಿಗೆ ಚೆಕ್ಕುಗಳನ್ನು ವಿತರಿಸಲಾಗುತ್ತದೆ. ಆಹಾರ ನಿಗಮದ ಕೆಲ ಭ್ರಷ್ಟ ಅಧಿಕಾರಿಗಳಿಗೆ ಲಂಚಕೊಟ್ಟು ಅವರ ಸಹಿ ಪಡೆದು ಭತ್ತ ಖರೀದಿಸಿದಂತೆ ಮಾಡುವ ಧಂದೆಯಿಂದ ನಾಗರಾಜನಿಗೆ ಪ್ರತಿ ವರ್ಷಕ್ಕೆ ಆಗುವ ಲಾಭ ಕಮ್ಮಿಯೆಂದರೂ 50 ಕೋಟಿ!

ಇಲ್ಲಿ ದಾಖಲೆಗಳಲ್ಲಷ್ಟೇ ಲಕ್ಷಾಂತರ ಕ್ವಿಂಟಾಲುಗಳಷ್ಟು ಭತ್ತ ಮತ್ತು ಅಕ್ಕಿ ಇರುತ್ತದೆಯೇ ಹೊರತು ವಾಸ್ತವವಾಗಿ ಭತ್ತವಾಗಲಿ, ಅಕ್ಕಿಯಾಗಲಿ ಇರುವುದೇ ಇಲ್ಲ. ರೈತನಿಗೆ ಲೆಕ್ಕದ ಪ್ರಕಾರ 1500 ರೂ. ಕ್ವಿಂಟಾಲಿಗೆ ಕೊಡಬೇಕಲ್ಲವೆ? ಜೊತೆ incidental charge ಅಂದರೆ ರೈತ ತಂದ ಭತ್ತವನ್ನು ಪರೀಕ್ಷೆ ಮಾಡಿ ಮತ್ತೆ ಚೀಲಕ್ಕೆ ತುಂಬಲೆಂದು ಕ್ವಿಂಟಾಲಿಗೆ 12 ರೂ. ನಿಗಮ ಕೊಡುತ್ತದೆ. ಲಕ್ಷ ಕ್ವಿಂಟಾಲಿಗೆ ಇದೇ 12 ಲಕ್ಷವಾಗುತ್ತದೆ. ಇದಲ್ಲದೆ ಸಾಗಾಣಿಕೆ ವೆಚ್ಚವೆಂದು ಚೀಲಕ್ಕೆ 60 ರೂ.ಗಳನ್ನು ನಿಗಮ ಕೊಡುತ್ತದೆ. ಅಲ್ಲಿಗೆ ಲಕ್ಷ ಕ್ವಿಂಟಾಲಿಗೆ ಖರೀದಿ ಕೇಂದ್ರದಿಂದ ಗೋಡೌನಿಗೆ ಸಾಗಿಸಲೆಂದು ತಗಲುವ ವೆಚ್ಚವೇ 50 ಲಕ್ಷ ರೂ.ಗಳಾಯಿತು. ಇದಲ್ಲದೇ ಗೋದಾಮಿನಲ್ಲಿ ಅದನ್ನು ಸಂರಕ್ಷಿಸಲೇ ತಲಾ ಚೀಲಕ್ಕೆ ತಿಂಗಳಿಗೆ 10 ರೂ. ಅನ್ನೂ ನಿಗಮ ಪಾವತಿಸುತ್ತದೆ.


ಆಹಾರ ಆಯುಕ್ತ ಗೋವಿಂದರಾಜು

ಅಲ್ಲಿಗೆ ತಮಿಳುನಾಡಿನಿಂದ ನಾಗರಾಜ್ 1 ಲಕ್ಷ ಕ್ವಿಂಟಾಲ್ ಅಕ್ಕಿ ತರಿಸಿದರೆ ಅದರ ಸಾಗಾಣಿಕೆ ವೆಚ್ಚ ಕಳೆದರೂ ಕ್ವಿಂಟಾಲಿಗೆ ಬರೋಬ್ಬರಿ ಸಾವಿರ ರೂಪಾಯಿ ಮಿಕ್ಕುತ್ತದೆ. ಇದೊಂದೇ ಬಾಬತ್ತಿನಿಂದ ನಾಗರಾಜ್ 10 ಕೋಟಿ ದೋಚಿದ. ಇನ್ನು incidental charge ಎಂದು 12 ಲಕ್ಷ ಮತ್ತು ಸಾಗಾಣಿಕೆ ಶುಲ್ಕವೇ 50 ಲಕ್ಷ, ಜೊತೆಗೆ ಭತ್ತವನ್ನು ಹಲ್ಲಿಂಗ್ ಮಾಡಿದ ಲೆಕ್ಕಕ್ಕೆ ಮತ್ತೆ 10 ಲಕ್ಷ ಅಲ್ಲಿಗೆ ಕೇವಲ 1 ಲಕ್ಷ ಕ್ವಿಂಟಾಲ್‌ನಿಂದ ನಾಗರಾಜ್ ಹೊಡೆಯುವ ಲಾಭ ಸರಿಸುಮಾರು 13 ಕೋಟಿ!

ಯಾರಿಗುಂಟು ಯಾರಿಗಿಲ್ಲ, ಇಷ್ಟಲ್ಲದೆ ಗೋಡೌನಿನಲ್ಲಿ ಒಂದು ಚೀಲದ ಬಾಡಿಗೆಯೆಂದು ತಿಂಗಳಿಗೆ 10 ರೂ.ನಂತೆ ಆರು ತಿಂಗಳಿಟ್ಟರೂ ಲಕ್ಷ ಕ್ವಿಂಟಾಲಿಗೆ ಅದೇ 60 ಲಕ್ಷ!

ರೈತರಿಂದ ಭತ್ತವನ್ನೇ ಖರೀದಿಸದೆ, ಕೇವಲ ರೈತರ ಪಹಣಿಗಳನ್ನೇ ಬಳಸಿ ಸೇವಾ ವೆಚ್ಚ, ಸಾಗಾಣಿಕೆ ಶುಲ್ಕ, ಹಲ್ಲಿಂಗ್ ವೆಚ್ಚ ಮತ್ತು ಗೋಡೌನಿನ ಬಾಡಿಗೆಯನ್ನು ದೋಚುವುದು ಸುರಕ್ಷಾ ನಾಗರಾಜನ ಕರಾಳ ಧಂದೆ. ಕೇವಲ ಲಕ್ಷ ಕ್ವಿಂಟಾಲ್ ಅಕ್ಕಿಯ ಲೆಕ್ಕದಲ್ಲಿ 13 ಕೋಟಿಯಷ್ಟು ಲಾಭ ಹುಟ್ಟುತ್ತದೆಯೆಂದರೆ ಆತನ ವಾರ್ಷಿಕ ವಹಿವಾಟು, ಇಲಾಖೆಯ ಮೇಲಿನ ಹಿಡಿತ, ಮಂತ್ರಿ-ರಾಜಕಾರಣಿಳಿಗೆ ಆತ ಮಾಡುವ ಸಹಾಯ ಮತ್ತು ರೌಡಿಗಳು-ಪೊಲೀಸರು, ಅಧಿಕಾರಿಗಳ ಮೇಲೆ ಆತ ಸುರಿಯುವ ದುಡ್ಡಿನ ಪ್ರಮಾಣ ಸುಲಭದ ಅಂದಾಜಿಗೆ ನಿಲುಕುವಂಥದ್ದಲ್ಲ.

ಹಾಗೆ ನೋಡಿದರೆ ಶಿವಮೊಗ್ಗ ಜಿಲ್ಲೆ ರಾಜ್ಯದ ಭತ್ತದ ಕಣಜವಂತೂ ಅಲ್ಲವೇ ಅಲ್ಲ. ರಾಯಚೂರು, ಗಂಗಾವತಿ, ಬಳ್ಳಾರಿ, ಮಂಡ್ಯ, ಮೈಸೂರು ಮತ್ತು ದಾವಣಗೆರೆಗೆ ಹೋಲಿಸಿದರೆ ಶಿವಮೊಗ್ಗ ಜಿಲ್ಲೆಯ ರೈತರು ಅಪಾಟ ಭತ್ತ ಬೆಳೆಯುವುದಂತೂ ಸಾಧ್ಯವೇ ಇಲ್ಲ. 2009-10ನೇ ಸಾಲಿನಲ್ಲಿ ಇಡೀ ಶಿವಮೊಗ್ಗ ಜಿಲ್ಲೆಯಿಂದ ಆಹಾರ ನಿಗಮ ಖರೀದಿಸಿದ ಭತ್ತದ ಪ್ರಮಾಣವೇ 35 ಸಾವಿರ ಕ್ವಿಂಟಾಲುಗಳಷ್ಟು. ಆದರೆ ಸುರಕ್ಷಾ ನಾಗರಾಜ್ ಎಂಟ್ರಿ ಕೊಟ್ಟಿದ್ದೇ 2010-11ನೇ ಸಾಲಿಗೆ ಈ ಪ್ರಮಾಣ 1.5 ಲಕ್ಷ ಕ್ವಿಂಟಾಲಿಗೇರಿತು. ಆದರೆ 2011-12ನೇ ಸಾಲಿಗೆ ಎಂಥಾ ಪವಾಡ ನಡೆಯಿತೆಂದರೆ ಹಿಂದಿನ ವರ್ಷ ಒಂದೂವರೆ ಲಕ್ಷ ಕ್ವಿಂಟಾಲಿದ್ದದ್ದು ಆ ವರ್ಷ ಏಕಾಏಕಿ 10.5 ಲಕ್ಷ ಕ್ವಿಂಟಾಲಿಗೇರಿತು!

ಮುವತ್ತೋ ನಲವತ್ತೋ ಸಾವಿರ ಕ್ವಿಂಟಾಲ್ ಖರೀದಿಯಾಗುತ್ತಿದ್ದ ಜಾಗದಲ್ಲಿ ಏಕಾಏಕಿ ಹತ್ತೂವರೆ ಲಕ್ಷ ಕ್ವಿಂಟಾಲುಗಳಷ್ಟು ಭತ್ತ ಖರೀದಿಯಾಯಿತೆಂದರೆ ಅದು ಪವಾಡವಲ್ಲದೆ ಮತ್ತೇನು?

ಈ ರೀತಿ ಖರೀದಿಯಾದ ಹತ್ತೂವರೆ ಲಕ್ಷ ಕ್ವಿಂಟಾಲ್‌ಗಳ ಪೈಕಿ ಶೇ.90ರಷ್ಟನ್ನು ಆಹಾರ ನಿಗಮದ ಅಧಿಕಾರಿಗಳು ಸುರಕ್ಷಾ ನಾಗರಾಜನ ಮೂಲಕವೇ ಖರೀದಿಸಿದ್ದರು. ಎತ್ತಿಂದೆತ್ತ ಲೆಕ್ಕ ಹಾಕಿದರೂ ಶಿವಮೊಗ್ಗ ಜಿಲ್ಲೆಯ ಎಲ್ಲಾ ಭತ್ತದ ಗದ್ದೆಗಳನ್ನು ಎಡತಾಕಿದರೂ ಲಕ್ಷ ಕ್ವಿಂಟಾಲ್ ಭತ್ತ ಹುಟ್ಟುವುದು ಕಷ್ಟವಾಗಿರುವಾಗ ಯಾವ ಮಾಯೆಯಿಂದ ಏಕಾಏಕಿ ಶಿವಮೊಗ್ಗದಲ್ಲಿ ಹತ್ತೂವರೆ ಲಕ್ಷ ಕ್ವಿಂಟಾಲ್ ಭತ್ತ ಉತ್ಪಾದನೆಯಾಯಿತು?

ಇಡೀ ರಾಜ್ಯಕ್ಕೆ ಹೋಲಿಸಿದರೆ ಇದು ಯಾವ ಪ್ರಮಾಣದ ಉತ್ಪಾದನೆಯಾಯಿತ್ತೆಂದರೆ ಬಳ್ಳಾರಿ, ರಾಯಚೂರು, ಮಂಡ್ಯ, ಮೈಸೂರು, ದಾವಣಗೆರೆಯಂಥ ಜಿಲ್ಲೆಗಳ ಅಷ್ಟೂ ಭತ್ತವನ್ನು ಕಲೆಹಾಕಿದರೂ ಶಿವಮೊಗ್ಗದ ಪ್ರಮಾಣಕ್ಕದು ಶೇ.20 ರಷ್ಟಾಗಿದ್ದರೆ ಉಳಿಕೆ ಶೇ.80 ರಷ್ಟನ್ನು ಶಿವಮೊಗ್ಗದಿಂದ ಖರೀದಿಸಲಾಗಿತ್ತು.

ಇದರರ್ಥ ಮುವತ್ತೋ ನಲವತ್ತೋ ಸಾವಿರ ಕ್ವಿಂಟಾಲುಗಳು ಶಿವಮೊಗ್ಗ ಜಿಲ್ಲೆಯಿಂದ ಖರೀದಿಸಿ ಉಳಿಕೆ 8 ಲಕ್ಷ ಕ್ವಿಂಟಾಲುಗಳಷ್ಟು ಕಳಪೆ ಅಕ್ಕಿಯನ್ನು ನಾಗರಾಜು ತಮಿಳುನಾಡಿನಿಂದ ಶಿವಮೊಗ್ಗಕ್ಕೆ ಸಾಗಿಸಿದ್ದ. ಭತ್ತವನ್ನು ತರಿಸಿ ಅಕ್ಕಿ ಮಾಡಿಸಿದಾಗಲೂ ಇದೇ ಪ್ರಮಾಣದಲ್ಲಿ ಅಕ್ಕಿ ಗಿಟ್ಟುತ್ತದೆ. ಭತ್ತವನ್ನೇ ಖರೀದಿಸದೆ, ಕೇವಲ ದಾಖಲೆಗಳಲ್ಲಷ್ಟೆ ರೈತರ ಪಹಣಿಯನ್ನು ಬಳಸಿ ಖರೀದಿಯ ನಾಟಕ ನಡೆದಿತ್ತಾದ್ದರಿಂದ ಆ ಲೆಕ್ಕದಲ್ಲಿ ತಮಿಳುನಾಡಿನಿಂದ ತರಿಸಿದ ಕಳಪೆ ಅಕ್ಕಿಯನ್ನೇ ರಾಜ್ಯದ ಬಹುತೇಕ ನ್ಯಾಯಬೆಲೆ ಅಂಗಡಿಗಳಿಗೆ ರವಾನಿಸಲಾಯ್ತು. ಹುಳ ಗೂಡು ಕಟ್ಟಿದ್ದ ತಿನ್ನಲು ಸಾಧ್ಯವೇ ಇಲ್ಲದ ಅಕ್ಕಿಯ ವಿರುದ್ಧ ಜನ ಬೀದಿಗಳಿದು ಪ್ರತಿಭಟಿಸಿದರಾದರೂ ಮಂತ್ರಿ ಜೀವರಾಜ್ ಮಾತ್ರ ತನಗೂ ಇದಕ್ಕೂ ಸಂಬಂಧವೇ ಇಲ್ಲದಂತೆ ಇದ್ದುಬಿಟ್ಟರು.

ಹೀಗೆ ದಾಖಲೆ ಮಾತ್ರಕ್ಕೆ ಖರೀದಿಸಿದ್ದ ಭತ್ತ ಮತ್ತು ಅಕ್ಕಿಯ ಪೈಕಿ ಈಗ 60 ಸಾವಿರ ಕ್ವಿಂಟಾಲ್ ಭತ್ತ ಮತ್ತು 40 ಸಾವಿರ ಕ್ವಿಂಟಾಲ್ ಅಕ್ಕಿ ಕೊರತೆಯಾಗಿದೆ. ಇದರ ಪ್ರಮಾಣ ಇನ್ನೂ ಹೆಚ್ಚಿರಲೂಬಹುದು. ಆದರೆ ತಪಾಸಣೆ ಮಾಡುವವರ್‍ಯಾರು? ಲೆಕ್ಕ ಹಾಕುವವರ್‍ಯಾರು? ಸುರಕ್ಷಾ ನಾಗರಾಜನ ವಿರುದ್ಧ ಕ್ರಮ ಜರುಗಿಸುವ ತಾಕತ್ತು ಯಾರಿಗಿದೆ?

ಡಿಸಿಎಂ ಈಶ್ವರಪ್ಪನವರೇ ಸುರಕ್ಷಾ ನಾಗರಾಜನ ಬೆನ್ನಿಗೆ ನಿಂತಿರುವಾಗ ಮುಖ್ಯಮಂತ್ರಿ ಶೆಟ್ಟರ್ ಆಗಲಿ, ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿ ಜೀವರಾಜ್ ಆಗಲಿ- 2 ರೂ. ಗೆ ಕೆ.ಜಿ ಅಕ್ಕಿ ಕೊಟ್ಟರೆಷ್ಟು, ನ್ಯಾಯಬೆಲೆ ಅಂಗಡಿಗಳ ಉದ್ಧಾರದ ಬಗ್ಗೆ ಏನೇ ಭಾಷಣ ಹೊಡೆದರೆಷ್ಟು?

ಮುಗ್ಗಲು ಅಕ್ಕಿಯ ಕರ್ಮದಿಂದ ನಾಡಿನ ಬಡಬಗ್ಗರಿಗೆ ಮುಕ್ತಿಯಂತೂ ಸದ್ಯಕ್ಕಿಲ್ಲ.

ಸುರಕ್ಷಾ ಗೋಡೌನಿನ ಮೇಲೆ ದಾಳಿ ಮಾಡುವ ಧೈರ್ಯವೂ ಬಿಜೆಪಿ ಸರ್ಕಾರಕ್ಕಿಲ್ಲ.

● ಡಾ. ಸೋಮನಾಥ್

ಮಾಯಕೊಂಡ: ಬಿಜೆಪಿಗೆ ಸೋಲು ಗ್ಯಾರಂಟಿ

ದಾವಣಗೆರೆಯಲ್ಲಿ ಸ್ಥಳೀಯ ಸಂಸ್ಥೆಯ ಚುನಾವಣೆಗಳ ಫಲಿತಾಂಶ ಬಂದ ನಂತರ ಇಲ್ಲಿ ಬಿಜೆಪಿ ಸೊಂಟ ಮುರಕೊಂಡು ಮಿಸುಕಾಡುತ್ತಿದೆ. ತರಕಾರಿ ಮಂತ್ರಿ ರವೀಂದ್ರನಾಥರಂತೂ ಮತದಾರರೆದುರು 'ನಮ್ಮಿಂದ ತಪ್ಪಾಗಿದೆ' ಎಂದು ಒಪ್ಪಿಕೊಳ್ಳುವ ದಯನೀಯ ಸ್ಥಿತಿ ತಲುಪಿದ್ದಾರೆ. ಜಿಲ್ಲೆಯಾದ್ಯಂತ ಕಾಂಗ್ರೆಸ್ ಚೇತರಿಸಿಕೊಂಡು ನಳನಳಿಸುತ್ತಿದೆ. ಮಾಜಿ ಮಂತ್ರಿ ಮಲ್ಲಿಕಾರ್ಜುನರ ನೇತೃತ್ವದಲ್ಲಿ ಜಿಲ್ಲೆಯಲ್ಲಿ, ಅದರಲ್ಲೂ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ, ಕಾಂಗ್ರೆಸ್ ನಿರ್ಣಾಯಕ ಗೆಲುವು ಸಾಧಿಸಿದೆ.

ಐದು ವರ್ಷಗಳ ಹಿಂದೆ ದಾವಣಗೆರೆ ಮಹಾನಗರ ಪಾಲಿಕೆಯನಲ್ಲದೆ, ಹರಿಹರ, ಚನ್ನಗಿರಿ, ಜಗಳೂರು ಮತ್ತು ಹರಪ್ಪನಹಳ್ಳಿ ಪಟ್ಟಣ ಪಂಚಾಯತಿಗಳಲ್ಲೂ ಅಧಿಕಾರ ಕಳೆದುಕೊಂಡಿದ್ದ ಕಾಂಗ್ರೆಸ್ ಯಾವಾಗ ಅವುಗಳನ್ನೆಲ್ಲ ಮರು ಪಡೆಯಿತೋ ಆ ಕ್ಷಣದಿಂದ ಜಿಲ್ಲೆಯ ಏಳೂ ಜನ ಬಿಜೆಪಿ ಶಾಸಕರ ತೊಳ್ಳೆಗಳು ನಡುಗತೊಡಗಿದವು. ಅಂಥವರಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕ ಬಸವರಾಜ ನಾಯ್ಕ ಕೂಡ ಒಬ್ಬರು.

ಕಳೆದ ಐದು ವರ್ಷಗಳಿಂದ ಜಿಲ್ಲೆಯ ಮೇಲೆ ಸಂಪೂರ್ಣ ಅಧಿಕಾರ ಹೊಂದಿದ್ದ ಬಿಜೆಪಿ ಎಂಬ ನಕಲಿ ದೇಶಭಕ್ತರ ಪಾರ್ಟಿ ಇಡೀ ಜಿಲ್ಲೆಯನ್ನೇ ಜಾತಿ ಭ್ರಷ್ಟಗೊಳಿಸಿತ್ತು, ಅಧಿಕಾರವನ್ನು ದುರುಪಯೋಗ ಮಾಡಿತ್ತು, ಇಲ್ಲಿನ ಏಳು ಶಾಸಕರು, ಅವರಲ್ಲಿ ಇಬ್ಬರು ಮಂತ್ರಿಗಳು, ಮತ್ತು ಸಂಸದರು - ಎಲ್ಲರೂ ಜಿಲ್ಲೆಯನ್ನು ಅನಾಥ ಸ್ಥಿತಿಗೆ ದೂಡಿದ್ದರು.

ಬಸವರಾಜ ನಾಯ್ಕ ಮಾಯಕೊಂಡದಿಂದ ಪ್ರಗತಿ ಎಂಬುದನ್ನೇ ದೂರ ಇಟ್ಟರು. ಈಗ ಅದು ಅವರಿಗೆ ಅರ್ಥವಾಗಿದೆ. ಆದರೆ ಕಾಲ ಮಿಂಚಿದೆ. ಬರುವ ಮೇ 5ನೇ ತಾರೀಖು ಅವರಿಗೆ ಸೂಕ್ತ ಪಾಠ ಕಲಿಸಲು ಇಲ್ಲಿನ ಮತದಾರರು ಸಜ್ಜಾಗಿದ್ದಾರೆ.

ಹೋದ ಬಾರಿ ಬಸವರಾಜ ನಾಯ್ಕರ ಗೆಲುವಿಗೆ ಆಸರೆಯಾಗಿದ್ದವರು ತರಕಾರಿ ಮಂತ್ರಿ ರವೀಂದ್ರನಾಥ. ಆದರೆ ಈಗ ಸ್ವತಃ ತಾವು ದಾವಣಗೆರೆ ಉತ್ತರದಿಂದ ಗೆಲ್ಲುವ ಗ್ಯಾರಂಟಿ ರವೀಂದ್ರನಾಥರಿಗೆ ಇಲ್ಲದಂತಾಗಿದೆ. ಹೀಗಿರುವಾಗ ಮಾಯಕೊಂಡದಲ್ಲಿ ಬಸವರಾಜ ನಾಯ್ಕನ ಅಸ್ತಿತ್ವವನ್ನು ಉಳಿಸುವ ಗೋಜು ರವೀಂದ್ರನಾಥರಿಗೆ ಬೇಡವಾಗಿದೆ. ಅಷ್ಟೇ ಅಲ್ಲ, ಕಳೆದ ಬಾರಿ ಯಡ್ಡಿಯ 'ವಚನ ಭ್ರಷ್ಟ' ಪಿತೂರಿಯನ್ನು ನಂಬಿ ಬಸವರಾಜ ನಾಯ್ಕನಿಗೆ ತಮ್ಮ ಮತಗಳನ್ನು ಗುದ್ದಿದ್ದ ಇಲ್ಲಿನ ಪ್ರಭಾವಿ ಸಾದು ಲಿಂಗಾಯತ ಸಮುದಾಯ ಕೂಡ ಈಗ ಆತನ ವಿರುದ್ಧ ತಿರುಗಿ ಬಿದ್ದಿದೆ.

ಹೀಗೆ ಎಲ್ಲ ನಿಟ್ಟಿನಲ್ಲಿ ಮಾಯಕೊಂಡದಿಂದ ಬಸವರಾಜ ನಾಯ್ಕನ ಸೋಲು ಖಚಿತವಾಗಿರುವ ಹಾಲಿ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಟಿಕೆಟಿಗಾಗಿ ಆಕಾಂಕ್ಷಿಗಳ ದೊಡ್ಡ ದಂಡೇ ಇದೆ. ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಏಳು ಕ್ಷೇತ್ರಗಳಿಂದ ಹೆಚ್ಚು ಕಮ್ಮಿ ಸ್ಪರ್ಧಿಸುವ ಅಭ್ಯರ್ಥಿಗಳು ಯಾರೆಂಬುದು ಖಾತರಿಯಾಗಿದ್ದರೂ ಮಾಯಕೊಂಡ ಕ್ಷೇತ್ರದ ವಿಷಯ ಮಾತ್ರ ಇನ್ನೂ ಚಿದಂಬರ ರಹಸ್ಯದಂತಿದೆ.

ಕಳೆದ ಬಾರಿ ಬಿಜೆಪಿಯ ಬಸವರಾಜ ನಾಯ್ಕರ ವಿರುದ್ಧ ಕಾಂಗ್ರೆಸ್‌ನಿಂದ ಡಾ.ವೈ. ರಾಮಪ್ಪ ನಿಂತಿದ್ದರು. ಅದಕ್ಕೂ ಮುನ್ನ ಜಿಲ್ಲಾ ಪಂಚಾಯತಿಯ ಸದಸ್ಯರಾಗಿದ್ದ ರಾಮಪ್ಪರ ದರ್ಬಾರು ಮತ್ತು ಉದ್ಧಟತನ ಮತದಾರರಲ್ಲಿ ರೇಜಿಗೆ ಹುಟ್ಟಿಸಿದ್ದವು. ಪರಿಣಾಮವಾಗಿ ಬಸವರಾಜ ನಾಯ್ಕ ಹದಿನಾರು ಸಾವಿರ ಮತಗಳ ಅಂತರದಿಂದ ಗೆದ್ದಿದ್ದರು.


ಅವತ್ತು ಬಸವರಾಜ ನಾಯ್ಕರ ವಿರುದ್ಧ ಸೋತಿದ್ದ ರಾಮಪ್ಪ ಈ ಬಾರಿಯೂ ಕಾಂಗ್ರೆಸ್ ಟಿಕೆಟಿಗಾಗಿ ಲಾಬಿ ಶುರು ಹಚ್ಚಿಕೊಂಡಿದ್ದಾರೆ. ಅವರಿಗೆ ತೀವ್ರ ಪೈಪೋಟಿ ನೀಡುತ್ತಿರುವುದು ಮಾಜಿ ವಿಧಾನ ಪರಿಷತ್ ಸದಸ್ಯೆ ಜಲಜಾ ನಾಯ್ಕ, ಮಾಜಿ ಮಂತ್ರಿ ಶಿವಮೂರ್ತಿ ನಾಯ್ಕ ಮತ್ತು ಕೆ.ಎಸ್. ಬಸವರಾಜ.

ಶಿವಮೂರ್ತಿ ನಾಯ್ಕ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರ ಗರಡಿಯಲ್ಲಿ ರಾಜಕೀಯ ಸಾಮು ತೆಗೆದರಾದರೂ ಓರ್ವ ಮಾಸ್ ಲೀಡರ್ ಆಗಿ ಬೆಳೆಯಲಿಲ್ಲ. ಬಂಗಾರಪ್ಪನವರ ಸಂಪುಟದಲ್ಲಿ ಅಬಕಾರಿ ಸಚಿವರಾಗಿದ್ದ ಶಿವಮೂರ್ತಿ ನಾಯ್ಕ ಸೋತ ನಂತರ ಜನರತ್ತ ಮುಖ ಮಾಡಲಿಲ್ಲ. ಈಗ ಜಿಲ್ಲೆಯಲ್ಲಿ ಕಾಂಗ್ರೆಸ್ ಪರ ಹವಾ ಇರುವುದರಿಂದ ಮತ್ತೆ ತಮ್ಮ ರಾಜಕೀಯ ಅಸ್ತಿತ್ವವನ್ನು ಪಡೆದುಕೊಳ್ಳಲು ಹಾತೊರೆಯುತ್ತಿದ್ದಾರೆ.

ಇನ್ನು ಕೆ.ಎಸ್. ಬಸವರಾಜ್ ಅವರು ಮಾಜಿ ಶಾಸಕ ಹೆಚ್. ಆಂಜನೇಯರ ಅಳಿಯ. ಭರಮಸಾಗರದಿಂದ ಆಂಜನೇಯ ಜೆಡಿಎಸ್ ಅಭ್ಯರ್ಥಿಯಾಗಿ ಗೆದ್ದಿದ್ದರ ಹಿಂದೆ ಬಸವರಾಜರ ಶ್ರಮವಿತ್ತು. ಆದರೆ ಯಾವಾಗ ಭರಮಸಾಗರ ಕ್ಷೇತ್ರವು ಚಿತ್ರದುರ್ಗ, ಹೊಳಲ್ಕೆರೆ, ಮಾಯಕೊಂಡ ಮತ್ತು ಜಗಳೂರು ಕ್ಷೇತ್ರಗಳ ನಡುವೆ ಹರಿದುಹೋಯಿತೋ ಆಗ ಬಸವರಾಜ್ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಡೆ ಮುಖಮಾಡಿದರು.

ಕಾಂಗ್ರೆಸ್ ಟಿಕೆಟಿಗೆ ಹಲವಾರು ಆಕಾಂಕ್ಷಿಗಳಿದ್ದರೆ ಬಿಜೆಪಿ ಟಿಕೆಟ್ ಬೇಕು ಎನ್ನುವವರೇ ಇಲ್ಲಿ ಇಲ್ಲದಂತಾಗಿದ್ದಾರೆ. ಹಾಗಾಗಿ ಹಾಳೂರಿಗೆ ಉಳಿದವನೇ ನಾಯಕ ಎಂಬ ಸ್ಥಿತಿಯಲ್ಲಿ ಹಾಲಿ ಶಾಸಕ ಬಸವರಾಜ ನಾಯ್ಕ 'ಕಂಗೊಳಿಸುತ್ತಿದ್ದಾರೆ'!


ಇನ್ನು ಇಲ್ಲಿ ಜೆಡಿಎಸ್ ಆಟಕ್ಕುಂಟು ಆದರೆ ಲೆಕ್ಕಕ್ಕಿಲ್ಲ. ಯಡಿಯೂರಪ್ಪ ನಾಯಕತ್ವದ ಕೆಜೆಪಿ ಇಲ್ಲಿ ತನ್ನ ಅಸ್ತಿತ್ವವನ್ನು ಹುಡುಕಿಕೊಳ್ಳಲು ಯತ್ನಿಸುತ್ತಿದೆ. ಇದಕ್ಕೆ ಪ್ರಮುಖ ಕಾರಣ ಬಿಜೆಪಿಯ ಬಸವರಾಜ ನಾಯ್ಕರನ್ನು ಸೋಲಿಸಲೆಂದೇ ಬಿಜೆಪಿಯ ಮುಕ್ಕಾಲು ಪಾಲು ಜನ ಕೆಜೆಪಿಯನ್ನು ಸೇರಿರುವುದು. ಈ ಹಿಂದೆ ಜೆಡಿಎಸ್ ಅಭ್ಯರ್ಥಿಯಾಗಿ ಭರಮಸಾಗರದಿಂದ ಸ್ಪರ್ಧಿಸಿ ಸೋತಿದ್ದ ಆನಂದ್ ಎಂಬುವವರು ಈ ಬಾರಿ ಕೆಜೆಪಿಯಿಂದ ಸ್ಪರ್ಧಿಸುವ ಲಕ್ಷಣಗಳು ಕಾಣಿಸುತ್ತಿವೆ. ಆನಂದ್ ಚಿತ್ರದುರ್ಗದ ಗುಡ್ಡದ ರಂಗವ್ವನ ಹಳ್ಳಿಯ ಸುತ್ತುಮುತ್ತ ಕಲ್ಲು ಗಣಿಗಾರಿಕೆ ಮಾಡುತ್ತಾ ದುಂಡಗಾದವರು.


ಕೆ.ಎಸ್. ಬಸವರಾಜ್

ಒಟ್ಟಾರೆಯಾಗಿ ಇತ್ತ ಬಸವರಾಜ ನಾಯ್ಕ ಎಂಬ ಬಿಜೆಪಿ ಶಾಸಕ ಹೆಸರು ಕೆಡಿಸಿಕೊಂಡಿರುವುದು, ಅತ್ತ ಮಲ್ಲಿಕಾರ್ಜುನರ ನೇತೃತ್ವದಲ್ಲಿ ಕಾಂಗ್ರೆಸ್ ಚೇತರಿಸಿಕೊಂಡಿರುವುದು - ಇವರೆಡೂ ಪ್ರಕ್ರಿಯೆಗಳಿಂದಾಗಿ ಬರುವ ಚುನಾವಣೆಯಲ್ಲಿ ಮಾಯಕೊಂಡದಿಂದ ಕಾಂಗ್ರೆಸ್ ಗೆಲುವು ನಿರೀಕ್ಷಿತವಾಗಿದೆ.

● ವರದಿಗಾರ

ಮೊಳಕಾಲ್ಮೂರು: ಬಿಎಸ್ಸಾರ್ ಪರ ಅಲೆ


ಪಟೇಲ್ ಜಿ.ಎಂ. ತಿಪ್ಪೇಸ್ವಾಮಿ

ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚಿಗೆ ಶ್ರೀರಾಮುಲು ನೇತೃತ್ವದ ಬಿಎಸ್‌ಆರ್ ಕಾಂಗ್ರೆಸ್ ಪರ ರಾಜಕೀಯ ಅಲೆ ಬೀಸುತ್ತಿದೆ. ಹಾಗೆ ನೋಡಿದರೆ, ಮೂರ್‍ನಾಲ್ಕು ತಿಂಗಳುಗಳ ಹಿಂದಿನವರೆಗೆ ಇಲ್ಲಿ ಶ್ರೀರಾಮುಲುವಿನ ಪಕ್ಷ ಅಸ್ತಿತ್ವದಲ್ಲೇ ಇರಲಿಲ್ಲ. ಆದರೀಗ ಬಿಎಸ್‌ಆರ್ ಪಕ್ಷದ ಅಬ್ಬರ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಲ್ಲಿ ನಡುಕ ಹುಟ್ಟಿಸಿದೆ.

ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಮತದಾರರು ಕಾಂಗ್ರೆಸ್‌ಗೆ ಅಗ್ರಿಮೆಂಟ್ ಮಾಡಿಕೊಟ್ಟಂತೆ ಹಲವಾರು ಬಾರಿ ಆ ಪಕ್ಷವನ್ನು ಬೆಂಬಲಿಸುತ್ತಲೇ ಬಂದಿದ್ದಾರೆ. 1985 ಮತ್ತು 1994ರಲ್ಲಿ ಜನತಾ ಪಕ್ಷದ ಪೂರ್ಣ ಮುತ್ತಯ್ಯ ಗೆದ್ದಿದ್ದು ಬಿಟ್ಟರೆ ಈ ಕ್ಷೇತ್ರ ಲಗಾಯತ್ತಿನಿಂದಲೂ ಕಾಂಗ್ರೆಸ್ ಪರವೇ. ಕಳೆದ ಮೂರು ಚುನಾವಣೆಗಳಲ್ಲಿ ಗೆದ್ದು ಶಾಸಕನಾದ ಕಾಂಗ್ರೆಸ್ ಪಕ್ಷದ ಎನ್.ವೈ.ಗೋಪಾಲಕೃಷ್ಣ ಈ ಕ್ಷೇತ್ರದ ಪ್ರಶ್ನಾತೀತ ನಾಯಕರಾಗಿ ದರ್ಬಾರು ನಡೆಸಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ಮೊಳಕಾಲ್ಮೂರು ಕ್ಷೇತ್ರ ಅಪಾರ ನಿಷ್ಠೆಯನ್ನು ತೋರಿದ್ದರೂ ಅದರಿಂದ ಇಲ್ಲಿನ ಜನರಿಗೆ ಆದ ಲಾಭ ಅಷ್ಟರಲ್ಲೇ ಇದೆ. ಉದಾಹರಣೆಗೆ ನಾಯಕನಹಟ್ಟಿಯ ಜನಸಂಖ್ಯೆ 15 ಸಾವಿರ ಇದ್ದರೂ ಇದು ಈಗಲೂ ಗ್ರಾಮ ಪಂಚಾಯಾತಿಯಾಗಿಯೇ ಉಳಿದಿದೆ. ಸರಕಾರಿ ಮಹಿಳಾ ಕಾಲೇಜು ಬೇಕು ಎಂದು ನಾಯಕನಹಟ್ಟಿಯಲ್ಲಿ ಚಳವಳಿಗಳು ನಡೆದು ಜನ ಅಬ್ಬರಿಸಿದರೂ ಶಾಸಕ ಗೋಪಾಲಕೃಷ್ಣರ ಕಿವಿಗಳಿಗೆ ಅದು ಕೇಳಿಸಲೇ ಇಲ್ಲ. ಹೀಗೆ ಕ್ಷೇತ್ರದ ಅಭಿವೃದ್ಧಿ ಮತ್ತು ಜನರ ಆಶೋತ್ತರಗಳನ್ನು ಕಡೆಗಣಿಸಿದ ಕಾರಣಕ್ಕೆ ಇವತ್ತು ಇಲ್ಲಿನ ಜನ ಬದಲಾವಣೆಯನ್ನು ಬಯಸುತ್ತಿರುವಂತೆ ಕಾಣಿಸುತ್ತಿದೆ.

ಬಿಎಸ್‌ಆರ್ ಗಾಳಿ

ಈ ಕ್ಷೇತ್ರ ಬಳ್ಳಾರಿಗೆ ಹತ್ತಿರವಿದ್ದರೂ ಇತ್ತೀಚಿಗಿನ ತನಕ ಇದರತ್ತ ಶ್ರೀರಾಮುಲು ಗಮನ ಹರಿಸಿರಲಿಲ್ಲ. ಅಷ್ಟೇ ಅಲ್ಲ, ಇಲ್ಲಿ ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೂ ಇರಲಿಲ್ಲ. ಆದರೀಗ ಕಳೆದ ಮೂರು ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕಾಂಗ್ರೆಸ್‌ನ ಗೋಪಾಲಕೃಷ್ಣರ ವಿರುದ್ಧ ಸೋತಿದ್ದ ಪಟೇಲ್ ಜಿ.ಎಂ. ತಿಪ್ಪೇಸ್ವಾಮಿ ಅಲಿಯಾಸ್ ಎತ್ನಹಟ್ಟಿ ಗೌಡರನ್ನು ಕರೆತಂದು ಬಿಎಸ್‌ಆರ್ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ತಂತ್ರ ರೂಪ ಪಡೆದಿದೆ. ಈ ಹಿಂದೆ ತಿಪ್ಪೇಸ್ವಾಮಿ ಸರಣಿ ಸೋಲುಗಳನ್ನು ಕಂಡಿದ್ದರೂ ಅವರು ಇವತ್ತಿಗೂ ನಾಯಕನಹಟ್ಟಿ ಮತ್ತು ತಳುಕು ಭಾಗಗಳಲ್ಲಿ ಜನಪ್ರಿಯ ರಾಜಕಾರಣಿ ಆಗಿದ್ದಾರೆ. ಇಂತಹ ತಿಪ್ಪೇಸ್ವಾಮಿಯನ್ನು ಶ್ರೀರಾಮುಲು ತನ್ನ ಪಕ್ಷಕ್ಕೆ ಬರಮಾಡಿಕೊಂಡ ದಿನದಿಂದ ಇಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಕೆಜೆಪಿಗಳು ಕದಲತೊಡಗಿದವು.

ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿ ಎರಡನೆ ಸ್ಥಾನ ಪಡೆದಿದ್ದ ಎಸ್. ತಿಪ್ಪೇಸ್ವಾಮಿ ಈ ಬಾರಿ ಕೆಜೆಪಿಯಿಂದ ಸ್ಪರ್ಧಿಸುವ ಇರಾದೆ ಹೊಂದಿದ್ದರು. ಆದರೆ ಆತನನ್ನು ಬಿಎಸ್‌ಆರ್‌ಗೆ ಸೇರಿಸಲು ಯತ್ನಿಸಿದ್ದು ನಾಗೀರೆಡ್ಡಿ ಎಂಬಾತ. ಈ ನಾಗೀರೆಡ್ಡಿ ಸಾಮಾನ್ಯ ವ್ಯಕ್ತಿಯಲ್ಲ. ಈತ ರೆಡ್ಡಿ ಲಿಂಗಾಯತನಾದರೂ ರೆಡ್ಡಿ ಎಂಬ ನಾಮಬಲದಿಂದ ಬಳ್ಳಾರಿಯ ಗಣಿ ಕಳ್ಳ ರೆಡ್ಡಿ ಗ್ಯಾಂಗಿಗೆ ಹತ್ತಿರವಾದವನು. ಹಿರಿಯೂರು, ಹಗರಿ, ಅಶೋಕ ಸಿದ್ದಾಪುರದಲ್ಲಿ ಸುಖತ್ ಮರಳಿನ ದಂಧೆ ಮಾಡುತ್ತಲೇ ಕೋಟಿಗಳಿಸಿದವನು. ಹಗರಿ ಜಿಲ್ಲಾ ಪಂಚಾಯತಿ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಬಂದವನು. ಮೊಳಕಾಲ್ಮೂರು ಮತಕ್ಷೇತ್ರದಲ್ಲಿ ಈತನಿಗೆ ಯಾವ ರಾಜಕೀಯ ಬೇಸ್ ಇರದಿದ್ದರೂ ಅವನ ಕುತಂತ್ರ ರಾಜಕಾರಣ ಮಾತ್ರ ಸದ್ದು ಮಾಡುತ್ತಲೇ ಇರುತ್ತದೆ.

2008ರ ಚುನಾವಣೆಯಲ್ಲಿ ಬಿಜೆಪಿಯ ತಿಪ್ಪೇಸ್ವಾಮಿಯನ್ನು ಗೆಲ್ಲಿಸುವ ಹೊಣೆ ಹೊತ್ತಿದ್ದು ಮತ್ತು ಅದರಲ್ಲಿ ಸೋತಿದ್ದೂ ಇದೇ ನಾಗೀರೆಡ್ಡಿ. ಅಂದಹಾಗೆ, ಬಿಜೆಪಿಯ ತಿಪ್ಪೇಸ್ವಾಮಿಯ ತಮ್ಮ ಮುತ್ತಯ್ಯ ಬೇರೆ ಯಾರೂ ಅಲ್ಲ, ಬಳ್ಳಾರಿಯ ಭೂಮಿಯನ್ನು ತನ್ನ ಸ್ವಂತ ಆಸ್ತಿ ಎಂಬಂತೆ ಗಣಿ ಕಳ್ಳ ರೆಡ್ಡಿಗಳಿಗೆ ಬೇಕಾಬಿಟ್ಟಿಯಾಗಿ ಹಂಚಿ ಈಗ ಜೈಲಿಯಲ್ಲಿ ಮುದ್ದೆ ಮುರಿಯುತ್ತಿರುವ ಅರಣ್ಯಾಧಿಕಾರಿ ಮುತ್ತಯ್ಯ!

2008ರಲ್ಲಿ ಯಾವಾಗ ಮುತ್ತಯ್ಯನ ಅಣ್ಣ ತಿಪ್ಪೇಸ್ವಾಮಿ ಮೊಳಕಾಲ್ಮೂರು ಕ್ಷೇತ್ರದಿಂದ ಸ್ಪರ್ಧಿಸುವುದು ಖಚಿತವಾಯಿತೋ ಆಗ ಪರಪ್ಪನ ಅಗ್ರಹಾರದ ಎದುರು ಪ್ರತ್ಯಕ್ಷನಾದ ನಾಗೀರೆಡ್ಡಿ ಜೈಲಿಯಲ್ಲಿ ಮುತ್ತಯ್ಯನನ್ನು ಭೇಟಿ ಆಗಿ "ನಿನ್ನ ಅಣ್ಣ ತಿಪ್ಪೇಸ್ವಾಮಿಯನ್ನು ಗೆಲ್ಲಿಸುತ್ತಾನೆ" ಎಂದು ಭರವಸೆ ನೀಡಿ, ಆತನಿಂದ ಆರವತ್ತು ಲಕ್ಷ ರೂಪಾಯಿ ಕಿತ್ತನೆಂದು ಕ್ಷೇತ್ರದ ಜನ ಈಗಲೂ ಮಾತನಾಡಿಕೊಳ್ಳುತ್ತಾರೆ.

ಯಡಿಯೂರಪ್ಪ ಬಿಜೆಪಿಯನ್ನು ತೊರೆದು ಕೆಜೆಪಿ ಸ್ಥಾಪಿಸಿದಾಗ ತಿಪ್ಪೇಸ್ವಾಮಿಯನ್ನು ಯಡ್ಡಿಯ ಪಕ್ಷಕ್ಕೆ ಸೇರಿಸಿದ್ದೂ ಇದೇ ನಾಗೀರೆಡ್ಡಿ. ಈಗ "ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಿಂದ ಬಿಎಸ್‌ಆರ್ ಕಾಂಗ್ರೆಸ್‌ನ ಅಭ್ಯರ್ಥಿಯನ್ನು ನಾನು ಗೆಲ್ಲಿಸುತ್ತೇನೆ" ಎಂದು ಅಬ್ಬರಿಸುತ್ತಿರುವ ನಾಗೀರೆಡ್ಡಿ ತಿಪ್ಪೇಸ್ವಾಮಿಯನ್ನು ಕೆಜೆಪಿಯಿಂದ ಬಿಡಿಸಿ ಬಿಎಸ್‌ಆರ್ ಪಕ್ಷಕ್ಕೆ ಸೇರಿಸುವ ಹುನ್ನಾರದಲ್ಲಿದ್ದಾಗ. ಹಾಗೊಮ್ಮೆ ನಾಗೀರೆಡ್ಡಿಯ ಮಾತನ್ನು ನಂಬಿ ಶ್ರೀರಾಮುಲು ಎಸ್.ತಿಪ್ಪೇಸ್ವಾಮಿಗೆ ಟಿಕೆಟ್ ಕೊಟ್ಟರೆ ಅನಾಹುತ ಗ್ಯಾರಂಟಿ.

ಕಳ್ಳ ಮುತ್ತಯ್ಯ

ಈಗ ಶ್ರೀರಾಮುಲುಗೆ ಮುತ್ತಯ್ಯನ ಮನೆತನದ ಮೇಲೆ ಅನುಮಾನವಿದೆ. ಯಾಕೆಂದರೆ ಶ್ರೀರಾಮುಲುವಿನ ಆಪ್ತ ಜನಾರ್ದನ ರೆಡ್ಡಿಯೊಂದಿಗೆ ಮುತ್ತಯ್ಯ ಕೂಡ ಜೈಲುಪಾಲಾದಾಗ ಇದೇ ತಿಪ್ಪೇಸ್ವಾಮಿ ಶ್ರೀರಾಮುಲು ಮನೆಯಲ್ಲಿ ದಿಢೀರ್ ಪ್ರತ್ಯಕ್ಷನಾಗಿ "ನಿನ್ನಿಂದಲೇ ನನ್ನ ತಮ್ಮ ಜೈಲು ಸೇರಿದ್ದು" ಎಂದು ದಬಾಯಿಸಿದ್ದ.

ಅದಾದ ನಂತರ ಇನ್ನೊಂದು ಪ್ರಕರಣ ಜರುಗಿತ್ತು. 2008ರಲ್ಲಿ ಜಗಳೂರು ವಿಧಾನಸಭಾ ಕ್ಷೇತ್ರದಿಂದ ಇದೇ ಮುತ್ತಯ್ಯ ಮತ್ತು ತಿಪ್ಪೇಸ್ವಾಮಿಯ ಸಹೋದರಿಯ ಮಗನಾದ ಎಚ್.ಪಿ.ರಾಜೇಶ್ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ. ಆಗ ರಾಜೇಶನಿಗೆ ಶ್ರೀರಾಮುಲು ಹತ್ತು ಕೋಟಿ ರೂಪಾಯಿ ಕೊಟ್ಟಿದ್ದ ಎಂಬ ಸುದ್ದಿಗಳು ಹರಡಿದ್ದವು. ಆದರೆ ರಾಜೇಶ್ ಕಾಂಗ್ರೆಸ್‌ನ ಎಸ್.ವಿ.ರಾಮಚಂದ್ರರ ವಿರುದ್ಧ ಸೋತಿದ್ದ. ತದ ನಂತರ ಶಾಸಕ ರಾಮಚಂದ್ರ ಚೆಡ್ಡಿಗಳು ಮತ್ತು ರೆಡ್ಡಿಗಳು ಜೊತೆಗೂಡಿ ಮಾಡಿದ ಆಪರೇಶನ್ ಕಮಲಕ್ಕೆ ಬಲಿಯಾಗಿದ್ದ. ಆಗ ವಿಧಿ ಇಲ್ಲದೆ ರಾಜೇಶ್ ಕಾಂಗ್ರೆಸ್ ಅಂಗಲಕ್ಕೆ ಕಾಲಿಟ್ಟಿದ್ದ. ಹೀಗೆ ತನ್ನಿಂದ ಹತ್ತು ಕೋಟಿ ರೂಪಾಯಿಗಳನ್ನು ಪಡೆದಿದ್ದರೂ ಕಾಂಗ್ರೆಸ್‌ಗೆ ವಲಸೆ ಹೋದ ರಾಜೇಶನ ಬಗ್ಗೆ ಶ್ರೀರಾಮುಲುಗೆ ಅಸಮಾಧಾನ ಇದ್ದೇ ಇದೆ. ಆದ್ದರಿಂದ ನಾಗೀರೆಡ್ಡಿ ಅದೆಷ್ಟೇ ತಿಪ್ಪರಲಾಗ ಹಾಗಿದರೂ ಎಸ್.ತಿಪ್ಪೇಸ್ವಾಮಿ ಬಿಎಸ್‌ಆರ್ ಕಾಂಗ್ರೆಸ್ ಸೇರುವುದು ಮತ್ತು ಅದರ ಅಭ್ಯರ್ಥಿಯಾಗುವುದು ಕಷ್ಟಸಾಧ್ಯ.


ಶ್ರೀರಾಮುಲು ಮುಂದೆ ಸವಾಲು

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿಯಿಂದ ಕಾಂಗ್ರೆಸ್‌ನ ಎನ್.ವೈ.ಹನುಮಂತಪ್ಪ ಸೋತು ಶ್ರೀರಾಮುಲುವಿನ ತಂಗಿ ಶಾಂತಾ ಗೆದ್ದಿದ್ದರು. ಆದರೆ ತನ್ನ ಸೋಲನ್ನು ಒಪ್ಪದ ಹನುಮಂತಪ್ಪ ತನ್ನ ಬೆಂಬಲಿಗರಿಂದ ಶಾಂತಾರ ಗೆಲುವನ್ನು ಪ್ರಶ್ನಿಸಿ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿ ತಿರಸ್ಕೃತಗೊಂಡಿತಾದರೂ ಅಂದಿನಿಂದ 'ಎನ್.ವೈ' ಕುಟುಂಬದ ವಿರುದ್ಧ ಶ್ರೀರಾಮುಲುಗೆ ಸೇಡಿದೆ. ಆಕಾರಣಕ್ಕೆ ಬರುವ ವಿಧಾನಸಭಾ ಚುನಾವಣೆಯಲ್ಲಿ ಎನ್.ವೈ. ಹನುಮಂತಪ್ಪನವರ ಸಹೋದರ ಶಾಸಕ ಎನ್.ವೈ.ಗೋಪಾಲಕೃಷ್ಣರನ್ನು ಸೋಲಿಸುವ ತವಕದಲ್ಲಿದ್ದಾರೆ. ಆ ನಿಟ್ಟಿನಲ್ಲೇ ಕಳೆದ ಮೂರು ಬಾರಿ ಗೋಪಾಲಕೃಷ್ಣರ ವಿರುದ್ಧ ಸೋತಿದ್ದರೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಪಟೇಲ ತಿಪ್ಪೇಸ್ವಾಮಿಯನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡಿರುವುದು.

ಪಟೇಲ ತಿಪ್ಪೇಸ್ವಾಮಿ ಈ ಹಿಂದೆ ಜಿಲ್ಲಾ ಪಂಚಾಯ ಸದಸ್ಯರಾಗಿದ್ದವರು. ಕಳೆದ ಮೂವತ್ತು ವರ್ಷಗಳಿಂದ ರಾಜಕೀಯದಲ್ಲಿದ್ದಾರೆ. ಆದರೂ ಬಾನಗಡಿ ಮಾಡಿ ದುಡ್ಡು ಮಾಡಿದವರಲ್ಲ. ಈಗಲೂ ಹೊಲ ಮತ್ತು ದನದ ಚಾಕರಿ ಮಾಡಿದ ನಂತರವೇ ಕ್ಷೇತ್ರದ ರಾಜಕಾರಣದ ಕಡೆ ತಮ್ಮ ಗಮನ ಹರಿಸುತ್ತಾರೆ.

ಮೂರು ಬಾರಿ ಶಾಸಕನಾಗಿರುವ ಗೋಪಾಲಕೃಷ್ಣ ಕ್ಷೇತ್ರವನ್ನು ಅದ್ವಾನವೆಬ್ಬಿಸಿದ್ದಾರೆ. ಇದರ ಬಗ್ಗೆ ಮತದಾರರಲ್ಲಿ ಸಿಟ್ಟಿದೆ. ಬಿಜೆಪಿಯ ಎಸ್.ತಿಪ್ಪೇಸ್ವಾಮಿ ಬಿಟ್ಟಿ ದುಡ್ಡಲ್ಲಿ ರಾಜಕಾರಣ ಮಾಡುವ ಮನುಷ್ಯ ಎಂಬ ತಾತ್ಸಾರವಿದೆ. ಇಂತಹ ವಾತಾವರಣದಲ್ಲಿ ಪಟೇಲ ತಿಪ್ಪೇಸ್ವಾಮಿ ಬಿಎಸ್‌ಆರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದರೆ ಮತದಾರರು ಅವರ ಕೈ ಹಿಡಿಯುವುದು ಗ್ಯಾರಂಟಿ.


● ಟಿ.ಎನ್.ಷಣ್ಮುಖ


ಮಾಜಿ ಸೆಕ್ಸ್ ಮಂತ್ರಿ ಸಿ.ಸಿ.ಪಾಟೀಲನಿಗೆ ಸೋಲಿನ ಗುಂಡೇಟು!

ಮಾಜಿ ಮಂತ್ರಿ ಬ್ಲೂಬಾಯ್ ಸಿ.ಸಿ.ಪಾಟೀಲನ ಕಳೆದ ವಾರ ಆತನ ಗನ್ ಮ್ಯಾನ್ ಹಾರಿಸಿದ ...ಮುಂದಿನ ಚುನಾವಣೆಯ ಅಡ್ವಾನ್ಸ್ ಸೋಲಿನ ... ಹೊರತು ಬೇರೇನೂ ಅಲ್ಲ.

...ಯಾಕೆಂದರೆ ಈ ಪಾಟೀಲ ನರಗುಂದ ಕ್ಷೇತ್ರದಿಂದ ...ನಂತರ ಇಲ್ಲಿ ಅಭಿವೃದ್ಧಿ ಮಾಡಿದ್ದಕ್ಕಿಂತ ಹೆಚ್ಚಾಗಿ ...ದ್ದು ಪರ್ಸೆಂಟೇಜ್ ಹಣವನ್ನು. ಮೊನ್ನೆಯ ತನಕ ...ಡಿಯೂರಪ್ಪನವರೇ ನನ್ನ ತಂದೆ, ಕೆಜೆಪಿಯೇ ನನ್ನ ...ಎನ್ನುತ್ತಿದ್ದ ಪಾಟೀಲನಿಗೆ ಜ್ಞಾನೋದಯವಾಗಿ "ನಾನು ...ಪಿಗೂ ಹೋಗಲ್ಲ, ಬಿಜೆಪಿಯಲ್ಲೇ ...ತೇನೆ. ಇದೇ ಪಕ್ಷದಿಂದ ಚುನಾವಣೆಗೆ ...ಸುತ್ತೇನೆ" ಎನ್ನಲಾರಂಭಿಸಿದ. ಪಾಟೀಲ ...ಸ ಗೊಂದಲಮಯ ರಾಜಕೀಯ ...ಕ್ಕೆ ಜನರಿಂದ ಗೂಸಾ ತಿನ್ನುವ ... ಗನ್ ಮ್ಯಾನ್‌ನಿಂದ ಗುಂಡೇಟು ...ದ್ದಾನೆ.



...ವಿಧಾನ ಸಭಾ ಚುನಾವಣೆ ಘೋಷಣೆ ...ಗುವ ಮುನ್ನ ಸಾಧ್ಯವಾದಷ್ಟು ರಿಬ್ಬನ್ ...ಮಾಡಬೇಕು, ಶಂಕುಸ್ಥಾಪನೆ ನೆರವೇರಿಸ... ಎಂಬ ಆತುರಕ್ಕೆ ಬಿದ್ದ ಪಾಟೀಲ ... ಪ್ರಚಾರದ ಭರಾಟೆಯಲ್ಲಿ ಜನರಿಂದ ...ಗೆ ಬಂದಂತೆ ಬೈಸಿಕೊಂಡಿದ್ದಾನೆ. ಜನರ ಈ ...ರೋಧವನ್ನು ತಡೆಯುವ ನಿಟ್ಟನಲ್ಲಿ ಕೆಜೆಪಿ ಸೇರುವ ...ರ ಕೈಬಿಟ್ಟು ಬಿಜೆಪಿಯಲ್ಲೇ ಉಳಿದು, ನರಗುಂದದಿಂದ ...ಸ್ಪರ್ಧಿಸುತ್ತೇನೆ ಎಂದಿದ್ದು ಕೂಡ ಪಾಟೀಲ ಐಸಿಯುಗೆ ...ಲು ಕಾರಣವಾಗಿದೆ.

ಕೆಜೆಪಿ ಅಪ್ಪಿಕೊಂಡಿದ್ದ

...004ರಲ್ಲಿ ರಾಜ್ಯದ ಜನರಲ್ಲಿ ಕಾಂಗ್ರೆಸ್ ವಿರುದ್ಧ ...ಅಸಮಾಧಾನವೇ ಪಾಟೀಲನನ್ನು ಪ್ರಥಮ ಬಾರಿಗೆ ...ನ ಸಭೆಗೆ ಗೆಲ್ಲಿಸಿತ್ತು. ಆನಂತರ 2008ರಲ್ಲಿ ನಡೆದ ...ವಣೆಗಳಲ್ಲಿ ಯಡಿಯೂರಪ್ಪನ ಪರವಿದ್ದ ಲಿಂಗಾಯತ ...ಯಲ್ಲಿ ಮತ್ತೆ ಪಾಟೀಲ ವಿಧಾನ ಸಭೆಯನ್ನು ಪ್ರವೇಶಿಸಿದ. ...ಸಲ ಬಾರಿಗೆ ಗೆದ್ದಾಗಿನಿಂದ ಯಡ್ಡಿಯ ...ನಗೋಚಿಯಾಗಿಯೇ ತನ್ನ ಅಧಿಕಾರಾವಧಿಯನ್ನು ಕಳೆದ. ...ಗೆ ವಿಧಾನಸಭೆಯಲ್ಲಿ ಅಧಿವೇಶನ ನಡೆಯುತ್ತಿದ್ದಾಗ ...ಲ್‌ನಲ್ಲಿ ಬ್ಲೂ ಫಿಲ್ಮ್ ನೋಡುವ ಮೂಲಕ ಪಾಟೀಲ ...ಳನ ಚಾರಿತ್ರ್ಯವನ್ನು ಬೆತ್ತಲಾಗಿಸಿಕೊಂಡಿದ್ದ. ಅವತ್ತಿನಿಂದ ...ನನ್ನು ನರಗುಂದದಲ್ಲಿ 'ಸೆಕ್ಸ್ ಪಾಟೀಲ' ಎಂದೇ ...ಕರೆಯಲಾರಂಭಿಸಿದರು.

ಈ ಬ್ಲೂಬಾಯ್ ರಾಜ್ಯದ ಜನರಿಂದಷ್ಟೇ ಅಲ್ಲದೆ, ... ಮಂಡಲದ ಸಹೋದ್ಯೋಗಿಗಳಿಂದಲೂ 'ಛೀ.. ..." ಎಂದು ಉಗಿಸಿಕೊಳ್ಳುತ್ತಿದ್ದಾಗ ಆತನಿಗೆ ಸಾಂತ್ವನ ...ಧೈರ್ಯ ತುಂಬಿದ್ದು ಅದೇ ಯಡಿಯೂರಪ್ಪ. ಹೀಗಾಗಿ ...ಯ ನೆರಳಿನಂತೆಯೇ ಇರಲಾರಂಭಿಸಿದ.

ಯಡಿಯೂರಪ್ಪ ಬಿಜೆಪಿ ತೊರೆದು, ಕೆಜೆಪಿಗೆ ಜನ್ಮ ಕೊಟ್ಟಾಗ, ಹಾವೇರಿಯಲ್ಲಿ ತಮ್ಮ ಪಕ್ಷದ ಸಮಾವೇಶವನ್ನು ನಡೆಸಿದಾಗ, ಮತ್ತು ಆನಂತರ ನಡೆದ ಎಲ್ಲಾ ಸಭೆಗಳಲ್ಲಿ ಈ ಪಾಟೀಲ್ ಯಡ್ಡಿಯೊಂದಿಗೇ ಇದ್ದ. ಅಷ್ಟೇ ಅಲ್ಲ, ಕ್ಷೇತ್ರದಲ್ಲಿ ಜರುಗಿದ ಪ್ರತಿಯೊಂದು ಕಾರ್ಯಕ್ರಮದಲ್ಲೂ ಪಾಟೀಲ ತಾನು ಬರುವ ಚುನಾವಣೆಯಲ್ಲಿ ಕೆಜೆಪಿಯಿಂದ ಸ್ಪರ್ಧಿಸುವುದಾಗಿ ಹೇಳಿಕೊಂಡು ತಿರುಗಾಡುತ್ತಿದ್ದ.

ಈತ ಕೆಜೆಪಿಗೆ ಹೋಗುವುದು ಗ್ಯಾರಂಟಿ ಎನಿಸಿದಾಗ ಸಹಜವಾಗಿಯೇ ಬಿಜೆಪಿಯ ನಾಯಕರು ತಮ್ಮ ಪಕ್ಷದ ನೂತನ ಅಭ್ಯರ್ಥಿಗಾಗಿ ತಲಾಶ್ ಪ್ರಾರಂಭಿಸಿದರು. ಈತನನ್ನು ಮುಂದಿನ ಚುನಾವಣೆಯಲ್ಲಿ ಹಣಿಯಬೇಕು ಎಂಬ ಲೆಕ್ಕಾಚಾರದಲ್ಲೇ ಹಿರೇಗೌಡರ ಫ್ಯಾಮಿಲಿಯ ಬಸನಗೌಡ ಹಿರೇಗೌಡರು ಎಂಬುವವರನ್ನು ಆಯ್ಕೆ ಮಾಡಿದರು. ಈ ಹಿರೇಗೌಡರು ಮೊನ್ನೆ ಪಾಟೀಲನಿಗೆ ಗುಂಡೇಟು ಬಿದ್ದ ಮೆಣಸಗಿ ಗ್ರಾಮದಲ್ಲಿ ಪ್ರಭಾವಿ ಆಗಿರುವವರು.

ಬಿಜೆಪಿಯಿಂದ ಪಾಟೀಲ ಹೊರಗೆಹೋಗುವುದು ಗ್ಯಾರಂಟಿ ಹಾಗೆಯೇ ತಾನು ಕಮಲ ಪಕ್ಷದ ಅಭ್ಯರ್ಥಿಯಾಗುವುದೂ ಅಷ್ಟೇ ಗ್ಯಾರಂಟಿ ಎಂದು ಬಸನಗೌಡ ಹಿರೇಗೌಡರು ಚುನಾವಣಾ ಪ್ರಚಾರವನ್ನೂ ಪ್ರಾರಂಭಿಸಿದ್ದ. ಅಂದಹಾಗೆ, ಈ ಬಸನಗೌಡ ಹಿರೇಗೌಡರು ಸ್ವತಃ ಮಾಜಿ ಪೊಲೀಸ್ ಅಧಿಕಾರಿ ಮಾತ್ರವಲ್ಲ ಅವರ ಫ್ಯಾಮಿಲಿಯಲ್ಲಿ ಬಹುತೇಕ ಸಹೋದರರೆಲ್ಲಾ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದವರು. ಸಧ್ಯ ಎಲ್ಲರೂ ಫುಲ್ ಟೈಮ್ ಪಾಲಿಟಿಕ್ಸ್‌ನಲ್ಲಿದ್ದಾರೆ. ಹೀಗಾಗಿ ಈ ಪರಿವಾರಕ್ಕೆ ನರಗುಂದ ಕ್ಷೇತ್ರದಲ್ಲಿ ಹೆಚ್ಚು ಮಾನ್ಯತೆ ಇದೆ.

ಬಂಡಿಯ ಎಂಟ್ರಿ

ಪಾಟೀಲ ಆಹಾರ ಮಂತ್ರಿ ಆಗಿದ್ದಾಗ ಆತನಿಗೆ ಗದಗ ಜಿಲ್ಲೆಯ ಉಸ್ತುವಾರಿಯನ್ನು ವಹಿಸಲಾಗಿತ್ತು. ಆಗ ಅಧಿಕಾರದ ದರ್ಪದಿಂದ ತುಂಬಿದ್ದ ಪಾಟೀಲ ಜಿಲ್ಲೆಯ ಬಹುತೇಕ ಶಾಸಕರನ್ನು ಕೆಟ್ಟದಾಗಿ ನಡೆಸಿಕೊಂಡಿದ್ದ. ಅಂತಹವರಲ್ಲಿ ಹಾಲಿ ಮಂತ್ರಿ ರೋಣದ ಕಳಕಪ್ಪ ಬಂಡಿ ಕೂಡ ಒಬ್ಬರು. ಯಾವಾಗ ಬ್ಲೂಬಾಯ್ ಪಾಟೀಲನ ಕೈಯಿಂದ ಮಂತ್ರಿಗಿರಿ ಹೋಗಿ ಆತ ಮನೆ ಸೇರಿದನೋ ಆಗ ಜಿಲ್ಲೆಯ ಮೇಲಿನ ಅಧಿಕಾರ ಬಂಡಿಯತ್ತ ವಾಲಿತ್ತು.

ಅವತ್ತಿನಿಂದ ಪಾಟೀಲನ ವಿರುದ್ಧ ಬಂಡಿ ಸೈಲೆಂಟಾಗಿ ಕೆಲಸ ಮಾಡಲು ಪ್ರಾರಂಭಿಸಿದ್ದರು. ಹೇಗಾದರೂ ಮಾಡಿ ಮುಂದಿನ ಚುನಾವಣೆಯಲ್ಲಿ ಪಾಟೀಲನನ್ನು ನೆಲಕಚ್ಚಿಸಬೇಕು ಎಂಬ ಜಿದ್ದಿಗೆ ಬಿದ್ದ ಬಂಡಿ ಬಸವನಗೌಡ ಹಿರೇಗೌಡರನ್ನ ಪಾಟೀಲನ ವಿರುದ್ಧ ಎತ್ತಿಕಟ್ಟಲಾರಂಭಿಸಿದರು. ಹಾಲಿ ಬಿಜೆಪಿ ಸಂಸದರೊಬ್ಬರು ಹಿರೇಗೌಡರ ಸಂಬಂಧಿ ಆಗಿರುವುದರಿಂದ ಪಕ್ಷದ ಬಿ ಫಾರ್ಮ್ ಪಡೆಯುವುದೂ ಅವರಿಗೆ ಕಷ್ಟದ ಕೆಲಸವೇನಲ್ಲ.

ಅಂದರ್ ಆದ ಹಿರೇಗೌಡರು

ಗುಂಡೇಟಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂಗರಕ್ಷಕ ಮಂಜುನಾಥ ದಿಬ್ಬದಮನಿ ನೀಡಿದ ದೂರಿನ ಆಧಾರದ ಮೇಲೆ ಮೆಣಸಗಿ ಗ್ರಾಮದ ಐದು ಜನ ಹಿರೇಗೌಡರಗಳನ್ನು ಗದಗ ಪೊಲೀಸರು ಬಂಧಿಸಿ ಅಂದರ್ ಮಾಡಿದ್ದಾರೆ. ಗೋಪಿ ಹಿರೇಗೌಡರ, ಬಸನಗೌಡ ಶೇಖರಗೌಡ ಹಿರೇಗೌಡರ, ಹನುಮಂತಗೌಡ ಗರ್ಲಗೌಡರ, ಶಿವನಗೌಡ ರಾಮನ ಗೌಡ ಹಿರೇಗೌಡರ, ರಾಮನಗೌಡ ಬಸನಗೌಡ ಹಿರೇಗೌಡರ ಎಂಬುವರ ಮೇಲೆ ದೊಂಬಿ ಕಾಯ್ದೆಯನ್ನ ಜಡಿಯಲಾಗಿದೆ.

ಅಡ್ಡಗಾಲು ಹಾಕಿದ

ಗದಗ ಜಿಲ್ಲಾ ಪಂಚಾಯತಿಯ ಕೊನೆ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಯ ಸಂದರ್ಭದಲ್ಲೂ ಈ ಪಾಟೀಲ ಎಡವಟ್ಟು ಮಾಡಿಕೊಂಡಿದ್ದ. ಆಗ ಬೆಳವಣಿಕಿ ಕ್ಷೇತ್ರದ ಸದಸ್ಯೆ ಶಾರದಾ ಬಸವನಗೌಡ ಹಿರೇಗೌಡರ ಅಧ್ಯಕ್ಷೆಯಾಗಿ ಆಯ್ಕೆಯಾಗುವುದು ಬಹುತೇಕ ಗ್ಯಾರಂಟಿಯಾಗಿತ್ತು. ಆದರೆ ಹಿರೇಗೌಡರ ಫ್ಯಾಮಿಲಿ ರಾಜಕೀಯವಾಗಿ ತನ್ನನ್ನು ವಿರೋಧಿಸುತ್ತಾ ಪ್ರಭಾವಿ ಆಗುತ್ತಿದೆ ಎಂದು ಭಾವಿಸಿದ ಪಾಟೀಲ ಅವರು ಅಧ್ಯಕ್ಷೆ ಆಗುವುದನ್ನು ತಪ್ಪಿಸಿದ್ದ. ಅಷ್ಟೇ ಅಲ್ಲ, ತನ್ನ ಖಾಸಾ ಚೇಲಾ ಎಂ.ಎಸ್.ಪಾಟೀಲನನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದ್ದ. ಸಹಜವಾಗಿಯೇ ಇದರಿಂದ ಕೋಪಗೊಂಡ ಹಿರೇಗೌಡರ ಫ್ಯಾಮಿಲಿ ಅಂದಿನಿಂದ ಪಾಟೀಲನ ವಿರುದ್ಧ ಬಹಿರಂಗವಾಗಿಯೇ ಸಮರ ಸಾರಿತ್ತು.



ಈ ಬೆಳವಣಿಗೆಯಾದ ನಂತರ ಕ್ಷೇತ್ರದಲ್ಲಿ ಪಾಟೀಲ ಭಾಗವಹಿಸಿದ ಪ್ರತಿಯೊಂದು ಕಾರ್ಯಕ್ರಮದಲ್ಲೂ ವಿರೋಧದ ವಾಸನೆ ಹೊಗೆಆಡಲಾರಂಭಿಸಿತ್ತು. ಹಲವಾರು ಕಡೆ ಮಾತಿನ ಸಮರಗಳು ನಡೆದಿದ್ದವು. ಕೆಲವೊಮ್ಮೆ ಜಗಳಗಳು ಬೆಳೆದು ಜನ ಪಾಟೀಲನ ಮೈ ಮುಟ್ಟುವ ಹಂತಕ್ಕೆ ಹೋಗಿದ್ದವು.

ಇದನ್ನೆಲ್ಲಾ ಗಮನಿಸಿದ ಪಾಟೀಲ ಇತ್ತೀಚೆಗೆ ಜರುಗಿದ ಸ್ಥಳೀಯ ಸಂಸ್ಥೆಯ ಚುನಾವಣೆಗೂ ಮುನ್ನ ಕೆಜೆಪಿಗೆ ಹೋಗುವ ನಿರ್ಧಾರ ಕೈಬಿಟ್ಟು "ನಾನು ಬಿಜೆಪಿಯಲ್ಲೇ ಉಳಿಯುತ್ತೇನೆ. ನಾನೇ ಮುಂದಿನ ಅಭ್ಯರ್ಥಿ" ಎಂದು ಹೇಳಲಾರಂಭಿಸಿದ. ಇದು ಹಿರೇಗೌಡರ ಫ್ಯಾಮಿಲಿಗೆ ಮೆಣಸಿನಕಾಯಿ ಮುರಿದಂತಾಯಿತು. ತಾವೇ ಬಿಜೆಪಿಯ ಅಭ್ಯರ್ಥಿ ಎಂದು ಚುನಾವಣಾ ತಯಾರಿಯಲ್ಲಿ ತೊಡಗಿದ್ದ ಬಸವನಗೌಡ ಹಿರೇಗೌಡರ ಪಾಟೀಲನ ವಿರುದ್ಧ ಕತ್ತಿ ಮಸಿಯಲು ಆರಂಭಿಸಿದರು. ಅದರ ಮುಂದುವರೆದ ಭಾಗವೇ ಗುಂಡೇಟು ಪ್ರಕರಣ.

ಅಂದು ಆಗಿದ್ದೇನು?

ಚುನಾವಣೆ ಅಧಿಸೂಚನೆ ಹೊರಬೀಳುವ ಮುನ್ನ ಬಾಕಿ ಉಳಿದಿರುವ ಕಾಮಗಾರಿಗಳಿಗೆ ಗುದ್ದಲಿ ಹಾಕಿ, ಕಟ್ಟಡಗಳಿಗೆ ರಿಬ್ಬನ್ ಕಟ್ ಮಾಡಿ, ಕಂಟ್ರ್ಯಾಕ್ಟರ್‌ಗಳಿಂದ ಬಾಕಿ ಉಳಿದಿರುವ ಪರ್ಸೆಂಟೇಜ್ ಹಣವನ್ನ ಕಿತ್ತುಕೊಳ್ಳುವುದರ ಜೊತೆಗೆ ಕೆಜೆಪಿಗೆ ಸೇರಲ್ಲ ಎಂಬುದನ್ನು ಕ್ಷೇತ್ರದ ತುಂಬ ಹೇಳಿಕೊಳ್ಳುವುದಕ್ಕೆ ಕಳೆದೊಂದು ವಾರದಿಂದ ಸತತ ಕಾರ್ಯಕ್ರಮಗಳನ್ನು ಫಿಕ್ಸ್ ಮಾಡಿಸಿದ್ದ ಪಾಟೀಲ. ಅದರಂತೆ ಪ್ರತಿ ಕಾರ್ಯಕ್ರಮದಲ್ಲೂ "ನಾನೇ ಬಿಜೆಪಿ ಅಭ್ಯರ್ಥಿ" ಎಂದು ಹೇಳುವುದನ್ನು ಆತ ಮರೆಯಲಿಲ್ಲ. ಆ ಮಾತೇ ಆತನಿಗೆ ಗುಂಡೇಟು ಕೊಟ್ಟಿದ್ದು ಕೂಡ.

ಮಾರ್ಚ್ 17 ರಂದು ಬೆಳಗ್ಗೆಯಿಂದಲೇ ಬಿಡುವಿಲ್ಲದಂತೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಪಾಟೀಲರು ಸಂಜೆಯ ಹೊತ್ತಿಗೆ ರೋಣ ತಾಲೂಕಿನ ಮೆಣಸಗಿ ಗ್ರಾಮಕ್ಕೂ ಬರಬೇಕಿತ್ತು. ಆದರೆ ಅಲ್ಲಿ ವ್ಯಾಪಕ ವಿರೋಧದ ಜೊತೆಗೆ ಜನ ಬಂಡೇಳುವ ಸಾಧ್ಯತೆ ಇದೆ ಎಂಬ ಮಾಹಿತಿ ಬಂತು. ಆಗ ಆ ಗ್ರಾಮದ ಕಾರ್ಯಕ್ರಮವನ್ನು ರದ್ದುಪಡಿಸಿ ಗಾಡಗೋಳಿ, ಹೊಳೆಮಣ್ಣೂರು, ತುಮ್ಮಿನಕಟ್ಟಿ ಮತ್ತು ಹೊಳೆಆಲೂರು ಗ್ರಾಮಗಳಲ್ಲಿ ರಾತ್ರಿ 9 ರ ತನಕ ಸುತ್ತಾಡಿದ. ಹೊಳೆಆಲೂರಿನಲ್ಲಿ ನೂತನ ಮಾರಾಟ ಮಳಿಗೆ ಹಾಗೂ 1.25 ಕೋಟಿ ರೂ. ವೆಚ್ಚದ ಆಲೂರು ವೆಂಕಟರಾಯರ ಸ್ಮಾರಕ ಭವನವನ್ನ ಉದ್ಘಾಟಿಸಿದ. ಅಷ್ಟು ಹೊತ್ತಿಗೆ ಪಾಟೀಲ ಮೆಣಸಗಿ ಗ್ರಾಮಕ್ಕೆ ಬರಲು ಹೆದರಿದ ಎಂಬ ಗಾಳಿ ಸುದ್ದಿ ಹೊಳೆ ಆಲೂರಿನ ತುಂಬ ಹರಡಿತ್ತು. ಇದು ಪಾಟೀಲನಲ್ಲಿ ಇರಿಸು ಮುರಿಸು ಉಂಟು ಮಾಡಿತು. ಆದ್ದರಿಂದ ಆತ ಮೆಣಸಗಿ ಗ್ರಾಮಕ್ಕೆ ಹೋಗಲು ನಿರ್ಧರಿಸಿದ.



ಮೆಣಸಗಿ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ ನೀಡುವ ಸಮಾರಂಭ ಜರುಗಬೇಕಿತ್ತು. ಇದಕ್ಕಾಗಿ ಹಾಕಲಾಗಿದ್ದ ಶಾಮಿಯಾನದಿಂದ ಹಿಡಿದು ಬಹುತೇಕ ಎಲ್ಲ ತಯಾರಿಗಳನ್ನು ಕಿತ್ತುಹಾಕಿದ್ದ ಮೆಣಸಗಿ ಗ್ರಾಮಸ್ಥರು ಪಾಟೀಲ ಊರಿಗೆ ಕಾಲಿಡಲಿ ನೋಡಿಕೊಳ್ಳೋಣ ಎನ್ನುತ್ತಾ ಕಾಯುತ್ತಿದ್ದರು. ಸೂಕ್ತ ಪೊಲೀಸ್ ಬಂದೋಬಸ್ತ್ ಇಲ್ಲದೆ, ಬೆರಳೆಣಿಕೆಯಷ್ಟು ಹಿಂಬಾಲಕರನ್ನಿಟ್ಟುಕೊಂಡು ಗ್ರಾಮಕ್ಕೆ ಕಾಲಿಟ್ಟ ಪಾಟೀಲನಿಗೆ ಬೈಗುಳಗಳಿಂದಲೇ ಸ್ವಾಗತ ಸಿಕ್ಕಿತು. "ಅಂದು ಕೆಜೆಪಿ, ಇಂದು ಬಿಜೆಪಿ ಎಂದು ಹೇಳುವ ನೀನು ಅತ್ತ ಗಂಡಸೂ ಅಲ್ಲ ಇತ್ತ ಹೆಂಗಸೂ ಅಲ್ಲ" ಎಂದು ಜನ ಕುಟುಕಿದರು. ಇದೆಲ್ಲದರ ಮಧ್ಯೆಯೂ ಬಸ್ ಸ್ಟ್ಯಾಂಡಿನಿಂದ ಗ್ರಾಮದ ಸೊಸೈಟಿವರೆಗಿನ ರಸ್ತೆ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಿದ ಪಾಟೀಲನಿಗೆ ಹಿಂದೆ ಇದ್ದ ತನ್ನ ಕಾರ್ ತಲುಪಿ ಅದನ್ನು ಹತ್ತಲು ಸಾಧ್ಯವಾಗಿಲ್ಲ. ಅಲ್ಲಿ ಸೇರಿದ್ದ ಸಾವಿರಾರು ಗ್ರಾಮಸ್ಥರು ಪಾಟೀಲನನ್ನು ಹರಿದು ಮುಕ್ಕುವವರ ಹಾಗೆ ಆತನೊಂದಿಗೆ ಜಗಳಕ್ಕೆ ಬಿದ್ದಿದ್ದಾರೆ.

ಪರಿಸ್ಥಿತಿ ಕೈಮೀರುವ ಹಂತ ತಲುಪಿದಾಗ ಪಾಟೀಲ ಏರು ಧ್ವನಿಯಲ್ಲಿ ಗನ್‌ಮ್ಯಾನ್‌ಗೆ ಗನ್ ಲೋಡ್ ಮಾಡುವಂತೆ ಹೇಳಿದ್ದಾನೆ. ಇದು ಜನರನ್ನು ಮತ್ತಷ್ಟು ಕೆರಳಿಸಿದೆ. ಅಷ್ಟು ಹೊತ್ತಿಗಾಗಲೇ ಕಾರಿನ ಫುಟ್‌ರೆಸ್ಟ್ ಮೇಲೆ ನಿಂತು "ಎರಡು ದಿನ ಬಿಟ್ಟು ಬಂದು ನಿಮ್ಮೊಂದಿಗೆ ಮಾತನಾಡುತ್ತೇನೆ" ಎಂದು ಹೇಳಿ ಅಲ್ಲಿಂದ ಕಾಲ್ಕೀಳಲು ಮಾಡಿದ ಪ್ರಯತ್ನ ಫಲ ಕೊಟ್ಟಿಲ್ಲ. ಜನರ ಆಕ್ರೋಶ ಹೆಚ್ಚಾಗುತ್ತಿದ್ದಂತೆ ಸ್ವತಃ ಪಾಟೀಲನೇ ಗನ್‌ಮ್ಯಾನ್ ಮಂಜುನಾಥ ದಿಬ್ಬದಮನಿಗೆ ಫೈರ್ ಮಾಡುವಂತೆ ಸೂಚಿಸಿದ್ದಾನೆ. ಇನ್ನೇನು ಟ್ರಿಗರ್ ಒತ್ತಬೇಕು ಎನ್ನುವಷ್ಟರಲ್ಲಿ ಸುತ್ತ ಇದ್ದ ಜನ ಗನ್‌ಮ್ಯಾನನ್ನು ನೆಲಕ್ಕೆ ಕೆಡವಿದ್ದಾರೆ. ಈ ಗಾಬರಿಯಲ್ಲಿ ಹಾರಿದ ಗುಂಡು ಗನ್‌ಮ್ಯಾನ್ ಮಂಜುನಾಥನ ಎಡಗೈಯೊಳಗೆ ಹಾಯ್ದು ಎದುರಿಗಿದ್ದ ಪಾಟೀಲನ ಕೆಳ ಭುಜದ ಮೂಲಕ ಹೊಟ್ಟೆಯ ಮೇಲ್ಭಾಗದಿಂದ ಹಾಯ್ದು ಹೋಗಿದೆ.

ಇದು ಕೇವಲ ಮೆಣಸಗಿ ಗ್ರಾಮದ ಜನರ ಅಥವಾ ಹಿರೇಗೌಡರ ಪರಿವಾರದ ಆಕ್ರೋಶವಾಗಿರಲಿಲ್ಲ. ಬದಲಿಗೆ ಇಡೀ ಕ್ಷೇತ್ರದ ಬಹುತೇಕ ಮತದಾರರ ಆಕ್ರೋಶವಾಗಿತ್ತು ಎಂಬುದು ಘಟನೆಯ ನಂತರದ ಬೆಳವಣಿಗೆಗಳು ಬೆತ್ತಲಾಗಿಸುತ್ತಿವೆ. ಪಾಟೀಲನ ಗೊಂದಲಮಯ ರಾಜಕೀಯ ಇಂದು ಆತನನ್ನ ಆಸ್ಪತ್ರೆಯ ಐಸಿಯುಗೆ ಸೇರಿಸಿದೆ ಎಂದರೆ ತಪ್ಪಾಗದು.

● ತುರಳಿಕುಪ್ಪಿ ವಿನಯ

...ಮೆಣಸಗಿಯಲ್ಲಿ ಮೆಣಸಿನಕಾಯಿ ಘಾಟು





...ಈ ಗ್ರಾಮದ ಇತಿಹಾಸ ಕೆದಕಿದಾಗ ಇಲ್ಲಿನ ಜನ ...ಪಾಟೀಲನ ಮೇಲೆ ಎಗರಿ ಹೋಗಿ ಗಲಾಟೆ ಮಾಡಿದ್ದು ... ಮೊದಲ ಬಾರಿ ಅಲ್ಲ. ನರಗುಂದ ಕ್ಷೇತ್ರದಿಂದ ...ಮವರೆಗೂ ಯಾರೇ ಶಾಸಕರಾದರೂ ಒಂದಿಲ್ಲಾ ಒಂದು ... ಪ್ರತಿರೋಧ ಒಡ್ಡಿದ 'ಕು'ಖ್ಯಾತಿ ಈ ಗ್ರಾಮಕ್ಕಿದೆ. ...ತ ಮಟ್ಟದ ಅಧಿಕಾರಿಗಳು, ಶಿಕ್ಷಕರು, ಅತಿ ಹೆಚ್ಚು ...ಶ್ರೀಮಂತರನ್ನು ಹೊಂದಿ ಸುಶಿಕ್ಷಿತ ಗ್ರಾಮ ...ಸಿಕೊಂಡಿದ್ದರೂ ರಾಜಕೀಯ ಸಂಘರ್ಷಗಳ ಮೂಲಕ, ...ವಣೆಯಲ್ಲಿ ನಿರ್ಣಾಯಕ ಗ್ರಾಮ ಎನಿಸಿಕೊಂಡಿದೆ. ... ಮಾಜಿ ಸಚಿವ ಬಿ.ಆರ್.ಯಾವಗಲ್ ಹಾಗೂ ಮಾಜಿ ...ಕ ಎಸ್.ಎಫ್.ಪಾಟೀಲರು 1995ರಲ್ಲಿ ಈ ಗ್ರಾಮದಲ್ಲಿ ಆದ ಅವಮಾನಕರ ಘಟನೆಯಿಂದ ಮನನೊಂದು ...ರೋಗಕ್ಕೆ ತುತ್ತಾಗಿ ಅದೇ ಕೊರಗಿನಲ್ಲಿ ಕೊನೆಯುಸಿರೆಳೆದಿದ್ದರು.

... ಈಗ ಅದೇ ಗ್ರಾಮ ಸಿ.ಸಿ.ಪಾಟೀಲರಿಗೆ ಗುಂಡೇಟು ನೀಡಿ ಅತೀ ಸೂಕ್ಷ್ಮ ಮಾತ್ರವಲ್ಲ ಅಪಾಯಕಾರಿ ಗ್ರಾಮ ...ವು ಕರೆಸಿಕೊಳ್ಳುತ್ತಿದೆ...

ರಾಮಾಯಣದೊಳಗಿನ ಬೆಂಕಿ ಹಾಗೂ ಬೆಳಕು

ಭಾಗ 2



ಬಂಜಗೆರೆ ಜಯಪ್ರಕಾಶ

ಒಂದು ಸಾಂಕೇತಿಕ ವ್ಯಕ್ತಿತ್ವ ಮತ್ತು ಒಂದು ಯುಗಧರ್ಮವನ್ನು ಪ್ರತೀಕಗೊಳಿಸಲು ನಿರ್ಮಾಣವಾಗಿರುವ ಪಾತ್ರವನ್ನು ಅದು ಚಾರಿತ್ರಿಕ ವ್ಯಕ್ತಿ ಆತ ಇಂತಲ್ಲಿಯೇ, ಇಂತದೇ ದಿನ ಹುಟ್ಟಿದನೆಂದು ವಾದಿಸುವುದು ಎಷ್ಟರಮಟ್ಟಿಗೆ ಸರಿ. ಇವು ಸರಿಯಾದ ವಾದಗಳಾಗಿರುವುದು ಸಾಧ್ಯವೇ? ವಿದ್ವಾಂಸರಾದವರು ಈ ರೀತಿಯಾಗಿ ವಾದ ಮಾಡಬಹುದೇ? ಹಾಗೆಯೇ ಲಂಕಾ ಎಂದು ಗುರುತಿಸಲ್ಪಟ್ಟ ಈ ಕಾವ್ಯದೊಳಗಿನ ಸ್ಥಳ ಶ್ರೀಲಂಕಾದಲ್ಲಿದೆ ಅಂತ ಹೇಳಲಾಗುತ್ತಿರುವ ವಿಷಯ. ಶ್ರೀಲಂಕಾ ಹಾಗೂ ಭಾರತ ನಡುವೆ ರಾಮನೇ ಸೇತುವೆಯನ್ನು ನಿರ್ಮಾಣ ಮಾಡಿದ ಅಂತ ಕೂಡ ಹೇಳಲಾಗುತ್ತಿದೆ. ಇವು ಕೂಡ ಬಹಳ ಅವಾಸ್ತವಿಕವಾಗಿರುವಂತಹ ನಂಬಿಕೆಗಳು. ಯಾವುದನ್ನೇ ಆಗಲಿ ಪವಿತ್ರೀಕರಣಗೊಳಿಸುವ ಉದ್ದೇಶಕ್ಕಾಗಿ ಸುಳ್ಳುಗಳನ್ನು ಅವಲಂಬಿಸಬಾರದು. ಲಂಕಾ ಎಂಬುದು ಮುಂಡಾ ಮತ್ತು ಗೊಂಡ ಭಾಷೆಯಲ್ಲಿ ಈಗಲೂ ಸುತ್ತ ನೀರು ಇರುವ ಮಧ್ಯೆ ಭೂಮಿ ಇರುವ ಸ್ಥಳಕ್ಕೆ ಇರುವ ಹೆಸರು. ಅಷ್ಟು ಸಾಲದು ಅಂತ ಎಚ್.ಡಿ. ಸಾಂಕಾಲಿಯಾ ಅನ್ನುವ ಪುರಾತತ್ವಶಾಸ್ತ್ರಜ್ಞ ಉತ್ಖನನಗಳನ್ನು ಮಾಡಿ, ವಿಂಧ್ಯ ಪರ್ವತ ಸಾಲುಗಳ ಬಳಿ ಇರುವ ಜಬಲ್‌ಪುರದ ಹತ್ತಿರ ಈ ಲಂಕಾ ಇತ್ತು ಎಂದು ತೋರಿಸಿದ್ದಾರೆ. ಲಂಕಾದ ಅವಶೇಷಗಳನ್ನು ತೋರಿಸಿದ್ದಾರೆ.

ದಂಡಕಾರಣ್ಯದಲ್ಲಿರುವ ಎಷ್ಟೋ ಬುಡಕಟ್ಟುಗಳ ಭಾಷೆಯಲ್ಲಿ ಅವರ ರಾಜನ ಹೆಸರು ರಾವಣ. ರಾವಣ ಅನ್ನುವುದು ಕೂಡ ಪದವಿಯ ಹೆಸರು. ಅದಕ್ಕೆ ವಾಲ್ಮೀಕಿ ರಾಮಾಯಣದ ರಾವಣ ದಶಕಂಠ ರಾವಣ. ಅದಕ್ಕಿಂತಲೂ ಮೊದಲು ಎಷ್ಟೋ ರಾವಣರು, ಆ ನಂತರದಲ್ಲೂ ಎಷ್ಟೋ ರಾವಣರು ಬಂದು ಹೋಗಿರಬಹುದು. ಈ ರಾವಣ ಎನ್ನುವ ಪದ, ದ್ರಾವಿಡ ಮೂಲದ ಇರೈವನ್‌ನಿಂದ ನಿಷ್ಪನ್ನಗೊಂಡಿದೆ ಎನ್ನುತ್ತಾರೆ ಭಾಷಾಶಾಸ್ತ್ರಜ್ಞರು. ಇರೈವನ್-ರಾವನ್-ರಾವಣ್ ಆಗುತ್ತದೆ. ಇರೈವನ್ ಅಂದರೆ ತಮಿಳಿನಲ್ಲಿ ರಾಜ, ಉಳ್ಳವನು ಅಂತಲೇ ಅರ್ಥ. ಆದ್ದರಿಂದ ರಾವಣ ಎನ್ನುವುದು ಒಂದು ಪದವಿಸೂಚಕವಾಗಿದ್ದಲ್ಲಿ ಕಥನದ ಒಬ್ಬ ವ್ಯಕ್ತಿಯನ್ನು ನಿರ್ದಿಷ್ಟ ಕಾಲಘಟ್ಟದಲ್ಲಿ ಇದ್ದು ಜಾತಕ ಬರೆಸಿಕೊಂಡಿರುವ ವ್ಯಕ್ತಿ ಎಂದು ಪರಿಭಾವಿಸಿ ವ್ಯವಹರಿಸುವುದು ಸರಿಯಲ್ಲ, ಆದ್ದರಿಂದ ರಾಮನಾಗಲಿ ರಾವಣನಾಗಲೀ ಕೇವಲ ಒಂದು ಸಂದರ್ಭದಲ್ಲಿ ಮಾತ್ರ ಜನಿಸಿ, ಇಂತಲ್ಲೇ ಹುಟ್ಟಿ, ಇಂತಲ್ಲೇ ಅವಸಾನ ಹೊಂದಿದ ಒಬ್ಬನೇ ವ್ಯಕ್ತಿ ಎಂದು ಪರಿಗಣಿಸುವುದು ಮಹಾಕಾವ್ಯವನ್ನು ನಾವು ದೋಷಯುಕ್ತವಾಗಿ ಅರ್ಥಮಾಡಿಕೊಂಡಂತೆ. ಸಂಸ್ಕೃತಿಯನ್ನು ಗೌರವಿಸುವುದು ಬೇರೆ. ನಮ್ಮ ಸಾಂಸ್ಕೃತಿಕ ಪ್ರತೀಕಗಳಿಂದ ಸ್ವೀಕರಿಸಬೇಕಾಗಿರುವ ಆಶಯಗಳನ್ನು ಅರ್ಥಮಾಡಿಕೊಳ್ಳುವುದು ಬೇರೆ. ವಿನಾಶಕಾರಿಯಾಗಿರುವ ಅಣುಬಾಂಬುಗಳ ರೀತಿ, ಆಯುಧಗಳ ರೀತಿ ಅವುಗಳನ್ನು ಬಳಸಿಕೊಳ್ಳುವುದು ಬೇರೆ. ಈ ಬಗ್ಗೆ ನಾವು ಸದಾ ಎಚ್ಚರವಾಗಿರಬೇಕು. ಯಾಕೆಂದರೆ ನಾವು ಶಾಂತಿಪ್ರಿಯರಾದ ನಾಗರಿಕ ಜನ. ನಮಗೆ ರಕ್ತಪಾತದಲ್ಲಿ ಸಂತೋಷವಿಲ್ಲ, ಬುದ್ಧ ಹುಟ್ಟಿ ಬೆಳೆದ ದೇಶ ಇದು. ಪ್ರಪಂಚದಲ್ಲಿ ಅಹಿಂಸಾ ಸಿದ್ಧಾಂತವನ್ನು ಎತ್ತಿ ಹಿಡಿದ ನಾಡಿದು. ಆದ್ದರಿಂದ ಯಾರ ಮೇಲೇ ಆಗಲಿ ಹಿಂಸೆ ನಡೆಸುವುದು, ರಕ್ತಪಾತ ಮಾಡುವುದು ನಮ್ಮ ನೀತಿಯಲ್ಲ, ನಾವು ಸತ್ಯವನ್ನು ಮಾತ್ರ ನಂಬುವವರು. ಸತ್ಯಮೇವ ಜಯತೆ ಅಂತ ಮಾತ್ರ ಅಲ್ಲ, ಸತ್ಯಂ ವದ, ಧರ್ಮಂ ಚರ ಎಂದೂ ಕೂಡ ಇದೆ. ಆ ಕಾಲದ ಆರ್ಷೇಯ ಋಷಿಗಳು ಹೇಳಿರುವ ಮಾತುಗಳನ್ನು ನಾವಿವತ್ತೂ ಪಾಲಿಸುತ್ತಿದ್ದೇವೆ. ಸತ್ಯವನ್ನು ಮಾತ್ರ ನಂಬುತ್ತೇವೆ. ಸುಳ್ಳುಗಳನ್ನಲ್ಲ, ವಿಚಾರಗಳ ಹೆಸರಲ್ಲಿ ಸುಳ್ಳುಗಳನ್ನು ಪ್ರತಿಪಾದಿಸಬಾರದು.

ಒರವಾ ಬುಡಕಟ್ಟನಲ್ಲಿ ರಾವಣ ವಂಶೀಯರಿದ್ದಾರೆ. ಗೊಂಡರಲ್ಲಿ ರಾವಣವಂಶಿ ಗೊಂಡರಿದ್ದಾರೆ. ಗೊಂಡರಲ್ಲಿ ಮೂರು ಮುಖ್ಯ ಪಂಗಡಗಳಿವೆ. ಗೊಂಡರೆಂದರೆ ಇಂದಿನ ಕುರುಬರ ಮೂಲ ಸಮುದಾಯ. ಅವರಲ್ಲಿ ಸೂರ್ಯವಂಶಿ ಗೊಂಡ, ದೇವವಂಶಿ ಗೊಂಡ ಎಂಬ ಪಂಗಡಗಳಿವೆ. ಮೊದಲಿನವರಿಬ್ಬರೂ ಕ್ಷತ್ರಿಯ ಮೂಲವನ್ನು ಹೇಳಿಕೊಳ್ಳುತ್ತಾರೆ. ರಾವಣ ವಂಶಿಗಳೊಂದಿಗೆ ಮದುವೆ ಸಂಬಂಧ ಮಾಡುವುದಿಲ್ಲ, ಯಾಕೆಂದರೆ ಇವರು ಸೋತ ಪಂಗಡದವರು. ರಾವಣ ವಂಶಿಗಳು. ರಾವಣನನ್ನು ಪೂಜಿಸುತ್ತಾರೆ. ಕರ್ನಾಟಕದಲ್ಲೂ ಮಳವಳ್ಳಿ ಹತ್ತಿರ ಒಂದು ರಾವಣ ದೇವಸ್ಥಾನವಿದೆ. ಅಲ್ಲಿ ರಾವಣನಿಗೆ ಪೂಜೆ, ಜಾತ್ರೆ ನಡೆಯುತ್ತದೆ. ಸೋತವನಾದ ಮಾತ್ರಕ್ಕೆ ರಾವಣನನ್ನು ಹಾಗೆಲ್ಲಾ ಹೀಯಾಳಿಸುವುದು ಧರ್ಮವೇ? ಉಚಿತವೇ? ಅವನನ್ನು ರಾಕ್ಷಸ ಕುಲ ಎನ್ನುತ್ತಾರೆ. ಅದು ತಪ್ಪಲ್ಲ, ಆದರೆ ರಾಕ್ಷಸರೆಂದರೆ ಹೇಗಿದ್ದರು ಎಂದು ಹೇಳುವ ವರ್ಣನೆ ಸುಳ್ಳಾಗಿದೆ. ರಾವಣನ ಬಗ್ಗೆ ಪುರಾಣಗಳಲ್ಲಿ ಬಹಳಷ್ಟು ವಿರೋಧವಿದೆ. ಹೇಗೆಂದರೆ ವೇದ-ಪುರಾಣಗಳಲ್ಲಿ ವಿಶ್ವಾಮಿತ್ರನ ಬಗ್ಗೆ ಇರುವ ವಿರೋಧದ ಹಾಗೆಯೇ ಇದು. ಯಾಕೆ? ಯಾಕೆಂದರೆ ವಿಶ್ವಾಮಿತ್ರ, ರಾವಣ ಇಬ್ಬರೂ ಕೂಡ ಪ್ರಜಾಪತಿ ಮೂಲದಿಂದ ಬಂದವರು. ರಾವಣನ ಹಾಗೆಯೇ ಮೂಲದಲ್ಲಿ ವಿಶ್ವಾಮಿತ್ರನೂ ರಾಕ್ಷಸ ಕುಲದ ಒಂದು ಕವಲಿನಲ್ಲಿ ಜನಿಸಿದವನು.

ಕ್ಷತ್ರಿಯನಾಗಿದ್ದ ವಿಶ್ವಾಮಿತ್ರ ಬ್ರಾಹ್ಮಣನಾಗಲು ಪ್ರಯತ್ನಪಟ್ಟ. ಆದ್ದರಿಂದ ಪುರೋಹಿತ ಮೂಲದವರಿಗೆ ಅವನನ್ನು ಕಂಡರೆ ಆಗುವುದಿಲ್ಲ, ಯಾಕೆಂದರೆ ಅವನು ಅವರನ್ನು ನಾಶಮಾಡುತ್ತೇನೆಂದು ಪ್ರಯತ್ನಪಟ್ಟ. ರಾಕ್ಷಸ ಕುಲಮೂಲದವನು ಬೇರೆ. ಇವರು ಎಷ್ಟೇ ಹೀಗಳೆಯಲು ನೋಡಿದರೂ ನಮಗೆ ರಾವಣನ ಮೌಲ್ಯ ಗೊತ್ತಾಗುವಂತಿದೆ. ಅವನು ಮಹಾ ಶಿವಭಕ್ತ, ತಪಸ್ಸು ಮಾಡಿ ಬ್ರಹ್ಮನಿಂದ ವಿಶೇಷ ವರಗಳನ್ನು ಪಡೆದವನು. ಆಕರ್ಷಕ ವ್ಯಕ್ತಿತ್ವದವನು. ಹಾಗಾಗಿಯೇ ಚಿತ್ರಪಟ ರಾಮಾಯಣದಲ್ಲಿ ರಾವಣ ಹೇಗಿದ್ದಾನೆಂದು ಚಿತ್ರ ಬರೆದು ತೋರಿಸು ಎಂಬ ಬೇಡಿಕೆಯನ್ನು ಇಡಲಾಗುತ್ತದೆ. ಸೀತೆ ರಾವಣನ ಚಿತ್ರ ಬರೆದು ತೋರಿಸುತ್ತಾಳೆ. ಆ ಸಂದರ್ಭದಲ್ಲಿ ರಾಮ ಸೀತೆಯ ಅಂತಃಪುರಕ್ಕೆ ಆಗಮಿಸುತ್ತಾನೆ. ಸೀತೆ ಅದನ್ನು ಹಾಸಿಗೆಯ ಅಡಿಯಲ್ಲಿ ಅವಿಸಿಡುತ್ತಾಳೆ. ಇಲ್ಲೇನು ನಡೆಯುತ್ತಿದೆ ಎಂದು ರಾಮ ಪ್ರಶ್ನಿಸಿದಾಗ ಹೀಗೇ ಸುಖದುಃಖ ಸಲ್ಲಾಪ ನಡೆಸುತ್ತಿದ್ದೇವೆ ಅಷ್ಟೆ ಎಂಬ ಉತ್ತರ ಹೇಳಿ ಸಮಾಧಾನಿಸುತ್ತಾರೆ. ಅಷ್ಟರಲ್ಲಿ ಲಕ್ಷ್ಮಣನೂ ಆಗಮಿಸುತ್ತಾನೆ. ಲಕ್ಷ್ಮಣ ಬಂದೊಡನೆ ಈ ರಾವಣನ ಚಿತ್ರಪಟ ಸುಮ್ಮನಿರುವುದಿಲ್ಲ, ಹಲ್ಲು ಕಡಿಯುತ್ತಾ ಕುಣಿದಾಡತೊಡಗುತ್ತದೆ.

ವಾಸ್ತವವಾಗಿ ರಾಮಾಯಣದಲ್ಲಿ ರಾವಣನ ವಧೆ ಆಗುವುದು ಲಕ್ಷ್ಮಣನಿಂದ. ಆ ನಂತರದಲ್ಲಿ ಈ ಬಗ್ಗೆ ಭಿನ್ನ ಕಥನಗಳು ಬಂದಿರುವುದೇನೋ ಹೌದು. ಅದಿರಲಿ.



ಅಷ್ಟು ಆಕರ್ಷಕ ವ್ಯಕ್ತಿತ್ವದವನು ರಾವಣ. ಆತ್ಮಲಿಂಗವನ್ನು ಪಡೆಯುವುದಕ್ಕಾಗಿ ಕರುಳುಗಳನ್ನು ಬಗೆದು ಹೊರಗೆಳೆದು ಅವುಗಳಿಂದಲೇ ರುದ್ರ ವೀಣೆಯ ನಾದವನ್ನು ಮೀಟಿದವನು ರಾವಣ. ರುದ್ರವೀಣೆ ಎಂಬುದೊಂದು ರೂಪಕ. ಅಂತಹ ಉದಾತ್ತ. ಜನಪದ ಗೀತೆಯೊಂದರಲ್ಲಿ ಇಂತಹ ಉಲ್ಲೇಖವಿದೆ. 'ಈ ರಾವಣರಿಗಿಂತ ಆ ರಾವಣನೇ ಮೇಲು, ಮಾನ ಕಳೆಯಲಿಲ್ಲ' ಎನ್ನುವ ಹಾಡದು. ನನ್ನ ಪ್ರಕಾರ ಆ ಹಾಡಿರುವುದು 'ಈ ರಾಮನಿಗಿಂತ ಆ ರಾವಣನೆ ಮೇಲು, ಮಾನ ಕಳೆಯಲಿಲ್ಲ' ಎಂದು. ಅಷ್ಟೊಂದು ಸಮಯ ತನ್ನ ಅಶೋಕವನದಲ್ಲಿದ್ದ ಸೀತೆಯನ್ನು ಕೈಯಾರೆ ಮುಟ್ಟಿ ಅಪಮಾನಗೊಳಿಸಲಿಲ್ಲ ರಾವಣ. ಅದೊಂದು ಬುಡಕಟ್ಟು ಜನರ ಮೌಲ್ಯ, ಅವನಿಗೆ ಇದ್ದ ಶಾಪದ ಕತೆಯೆಲ್ಲ ರಂಜನೆ. ಬುಡಕಟ್ಟು ಜನರ ಸಮಾಜದಲ್ಲಿ, ಪ್ರಾಚೀನ ಜನಪದಗಳಲ್ಲಿ ಹೆಣ್ಣಿನ ಸಮ್ಮತಿಯಿಲ್ಲದೆ ಅವಳ ದೇಹವನ್ನು ಮುಟ್ಟುವ ಅಧಿಕಾರ ಯಾರಿಗೂ ಇರಲಿಲ್ಲ, ಅದು ಅವರ ಶಿಷ್ಟಾಚಾರ. ನಮ್ಮನ್ನು ನೋಡಿ. ನಾವು ನಾಗರಿಕರೆಂದು ಕರೆದುಕೊಳ್ಳುತ್ತೇವೆ. ಸಂಸ್ಕೃತಿವಂತರಾಗಿದ್ದೇವೆಂದು ಹೇಳಿಕೊಳ್ಳುತ್ತೇವೆ. ಹೀಗಿದ್ದೂ ಹಾದಿ ಬೀದಿಯಲ್ಲಿ ಸಿಕ್ಕವರೆಲ್ಲರನ್ನೂ ಕೆಡಿಸಲು ಪ್ರಯತ್ನ ಮಾಡುತ್ತೇವೆ. ಅವರಿಗೆ ಆಧುನಿಕ ಶಿಕ್ಷಣ ಇರಲಿಲ್ಲ, ರಾಕ್ಷಸರು ಎಂದು ವರ್ಣಿತರಾಗಿದ್ದಾರೆ. ಕೋರೆ, ದಾಡೆ, ಭೀಕರಾಕೃತಿ ಇತ್ಯಾದಿ ವರ್ಣನೆಗಳು ಕಾವ್ಯದಲ್ಲಿವೆ. ಆದರೆ ಹೆಣ್ಣಿನ ಒಪ್ಪಿಗೆಯಿಲ್ಲದೆ ಅವಳ ಮೈಮುಟ್ಟುವಂತಿಲ್ಲ ಎಂದು ಅವರು ಇಟ್ಟುಕೊಂಡಿದ್ದ ಮೌಲ್ಯ ನಮಗಿಂತಲೂ ದೊಡ್ಡದು! ರಾವಣ ದಿನವೂ ಅಶೋಕವನಕ್ಕೆ ಬರುವುದು, ತನ್ನನ್ನು ವರಿಸುವಂತೆ ಸೀತೆಯನ್ನು ಕೇಳುವುದು, ಅವಳ ಒಪ್ಪಿಗೆ ಸಿಗುವುದು ಅಸಾಧ್ಯವೆಂದರಿತ ರಾವಣ ಒಂದು ಹಂತದಲ್ಲಿ ಅವಳನ್ನು ರಾಮನಿಗೆ ಹಿಂದಿರುಗಿ ಒಪ್ಪಿಸುವುದೆಂಬ ಅಭಿಪ್ರಾಯವನ್ನು ತಳೆದಿರುತ್ತಾನೆ. ಅದು ರಾವಣನ ಉದಾತ್ತತೆ.

ಹೆಣ್ಣಿನ ಒಪ್ಪಿಗೆಯಿಲ್ಲದೆ ಬಲಾತ್ಕಾರ ಮಾಡುವ ಅಭ್ಯಾಸ ಬಹುಪಾಲು ಬುಡಕಟ್ಟು ಸಮುದಾಯಗಳಲ್ಲಿ ಈ ಹಿಂದೆ ಇರಲಿಲ್ಲ. ಈಗಲೂ ಕೆಲವು ಬುಡಕಟ್ಟು ಭಾಷೆಗಳಲ್ಲಿ ಸೂಳೆ ಎಂಬ ಶಬ್ದವೇ ಬಳಕೆಯಲ್ಲಿಲ್ಲ, ಸೂಳೆಗಾರಿಕೆ ಯಾಕಿಲ್ಲ ಎಂದರೆ, ಒಲ್ಲದ ಗಂಡನೊಂದಿಗೆ ಬಾಳುವೆ ಮುಂದುವರಿಸಬೇಕಾದ ಇಕ್ಕಟ್ಟು ಅಂತಹ ಬುಡಕಟ್ಟುಗಳಲ್ಲಿ ಇಲ್ಲ. ತನಗೆ ಬೇಡವಾದ ದಿನ ಕುಲದವರನ್ನು ಸೇರಿಸಿ ಆ ಹೆಣ್ಣು ತನಗೆ ಈ ಗಂಡನ ಜೊತೆ ಸಂಸಾರ ನಡೆಸಲು ಇಷ್ಟವಿಲ್ಲ ಎಂದು ಹೇಳುವ ಅವಕಾಶವಿದೆ. ಕುಲಸ್ಥರು ಪಂಚಾಯ್ತಿ ಮಾಡಿ ವಿಚ್ಛೇದನ ಪಡೆಯಲು ಅವಕಾಶ ಕೊಡುತ್ತಾರೆ. ನಂತರದಲ್ಲಿ ಆಕೆ ಮತ್ತೆ ತನ್ನಿಚ್ಛೆ ಬಂದವರೊಂದಿಗೆ ಹೊಸ ಸಂಸಾರ ಹೂಡಬಹುದು. ಆ ಬಗೆಯ ಮುಕ್ತ ಅವಕಾಶ ಹೊಂದಿರುವವರೆಗೆ ಅಲ್ಲಿ ಸೂಳೆಗಾರಿಕೆಯೆಂಬುದು ಇರುವುದಿಲ್ಲ.

ವಿವಾಹ ಬಂಧ ಎನ್ನುವುದು ಎಲ್ಲಿ ಏಳೇಳು ಜನ್ಮದ ಬಂಧನ ಅನ್ನುತ್ತೀವೋ ಅಂತಹ ಕಡೆಗಳಲ್ಲಿ ಸೂಳೆಯರು ಉದ್ಭವವಾಗುತ್ತಾರೆ. ಈ ಗಂಡ ಈ ಜನ್ಮಕ್ಕೆ ಸಾಲದು ಅಂತ ಮತ್ತೆ ಏಳು ಜನ್ಮಕ್ಕೆ ಬೇರೆ! ಗಂಡನಿಗೆ ಆ ಬಗೆಯ ನಿರ್ಬಂಧವಿಲ್ಲ, ಅವನು ಮುಂದಿನ ಜನ್ಮವಿರಲಿ, ಈ ಜನ್ಮದಲ್ಲೇ ಆರೇಳು ಹೆಂಡತಿಯರನ್ನು ಮಾಡಿಕೊಳ್ಳಬಹುದು ಅಥವಾ ಬದಲಿಸಬಹುದು. ಇದೇ ಮೌಲ್ಯಗಳು ಮಾಡುವ ಮೋಸ. ಹೆಣ್ಣಿಗೆ ಪಾತಿವ್ರತ್ಯ ಮುಖ್ಯವಾದರೆ ಗಂಡಿಗೂ ಪತ್ನೀವ್ರತ್ಯ ಮುಖ್ಯವಾಗಬೇಕಿತ್ತು, ಇಲ್ಲದಿದ್ದರೆ ಅಂತಹ ಸಮಾಜದ ಮೌಲ್ಯಗಳಿಗೆ ನೀತಿ, ನ್ಯಾಯ ಎರಡೂ ಇಲ್ಲವೆಂಬುದು ನಿಶ್ಚಿತವಾಗುತ್ತದೆ. ಯಾವ ವ್ಯವಸ್ಥೆಯಲ್ಲಿ ಹೆಣ್ಣಿನ ಒಪ್ಪಿಗೆಯಿಲ್ಲದೆ ನಡೆಯುವ ಸಮಾಗಮಕ್ಕೆ ಅವಕಾಶವಿಲ್ಲ ಎನ್ನುವುದು ಸರ್ವಸಮ್ಮತವಾಗಿ ಚಾಲ್ತಿಯಲ್ಲಿರುತ್ತದೋ ಅದನ್ನು ಸಂಸ್ಕೃತಿವಂತ ಸಮಾಜ ಎನ್ನಬಹುದು. ರಾವಣನಿದ್ದ ಸಮಾಜದಲ್ಲಿ ಅಂತಹ ಮೌಲ್ಯಗಳಿದ್ದವು ಎನ್ನುವುದಕ್ಕೆ ನಿದರ್ಶನಗಳಿವೆ.

ರಾವಣನ ಉದಾತ್ತತೆಗೆ ಇನ್ನೊಂದು ನಿದರ್ಶನವನ್ನು ಕೊಡಬಹುದು. ರಾಮಾಯಣದಲ್ಲಿ ರಾವಣನನ್ನು ಖಳನಾಗಿ ಚಿತ್ರಿಸಲಿಕ್ಕೆ ಇರುವ ಮತ್ತೊಂದು ಕಾರಣವೆಂದರೆ ಅವನು ಶಿವ ಭಕ್ತ, ರಾಮಾಯಣದ ಮೂಲಕ ಭಾಗವತ ಪಂಥದ ಪ್ರಭಾವವುಳ್ಳ ವೈಷ್ಣವ ಪಾರಮ್ಯವನ್ನು ಮೆರೆಸುವ ಹುನ್ನಾರವಿದೆ. ಆದ್ದರಿಂದ ಶೈವ - ವೈಷ್ಣವ ಪಂಥಗಳ ನಡುವಿನ ಸಂಘರ್ಷ ರಾಮಾಯಣದ ಪಾತ್ರ ಚಿತ್ರಣಗಳಲ್ಲೂ ಪ್ರತಿಫಲಿತವಾಗಿದೆ. ರಾಮ ಯುದ್ಧ ಆರಂಭಿಸುವ ಮೊದಲು ಕಂಕಣ ಕಟ್ಟಿಕೊಳ್ಳಬೇಕು. ಆ ಪ್ರದೇಶದಲ್ಲಿ ಯಾರೂ ಪುರೋಹಿತ ಬ್ರಾಹ್ಮಣರಿಲ್ಲ, ಕಡೆಗೆ ಜಾಂಬವಂತ ರಾಮನಿಗೆ ಹೇಳುತ್ತಾನೆ- ಜಾಂಬವಂತನಿಗೆ ಈ ನೆಲದ ಬಹಳ ವಿಷಯಗಳು ಗೊತ್ತು, ಯಾಕೆಂದರೆ ಅವನು ಇಲ್ಲಿನ ಆದಿ ಕುಲದವನು. ಈ ಪ್ರದೇಶವನ್ನು ಜಂಬೂದ್ವೀಪ ಎಂದು ಕರೆಯಲಾಗುತ್ತಿತ್ತು, ಆತ ಪುರಾತನ ನೆಲೆಸಿಗ ಇಲ್ಲಿ. ಆದ್ದರಿಂದಲೇ ರಾಮಾಯಣದಲ್ಲಿ ಜಾಂಬವಂತ ತುಂಬಾ ವೃದ್ಧನೆಂಬಂತೆ ಚಿತ್ರಿಸಲ್ಪಟ್ಟಿದ್ದಾನೆ. ಸಮುದ್ರ ಲಂಘನ ಮಾಡುವ ಶಕ್ತಿಯುಳ್ಳ ಜಾಂಬವಂತ ಈಗ ವೃದ್ಧಾಪ್ಯದಿಂದಾಗಿ ಅದನ್ನು ಮಾಡಲು ಸಾಧ್ಯವಾಗುತ್ತಿಲ್ಲ ಎಂಬ ವರ್ಣನೆ ಕೂಡ ಈ ಅಂಶವನ್ನೇ ಹೇಳುತ್ತಿದೆ. ಈ ಸನ್ನಿವೇಶದಲ್ಲಿ ಜಾಂಬವಂತ ಹೇಳುತ್ತಾನೆ- ನಿನಗೆ ಕಂಕಣಧಾರಿಯಾಗಲು ನೆರವಾಗಬಲ್ಲ ಏಕೈಕ ಮಹಾಬ್ರಾಹ್ಮಣ ಎಂದರೆ ರಾವಣ. ಮಹಾತಪಸ್ವಿ ಅವನು. ಬ್ರಹ್ಮನ ವರ ಪಡೆದವನು.

ರಾವಣನ ಮೇಲೆ ಯುದ್ಧಕ್ಕೆ ಹೊರಟಿರುವ ಸನ್ನಿವೇಶದಲ್ಲಿ ರಾವಣನಿಂದಲೇ ಕಂಕಣಧಾರಿಯಾಗಲು ಸಾಧ್ಯವಿದೆಯೇ ಎಂಬುದು ರಾಮನ ಯೋಚನೆ. ಈ ಆಹ್ವಾನವನ್ನು ರಾವಣ ಮನ್ನಿಸಲು ಸಾಧ್ಯವೇ? ಜಾಂಬವಂತನ ಪ್ರಕಾರ ಶುಭ ಕಾರ್ಯಾರಂಭಕ್ಕೆ ಆಶೀರ್ವದಿಸಲು ಯಾರನ್ನೇ ಕರೆದರೂ ಅವರದನ್ನು ನಿರಾಕರಿಸುವಂತಿಲ್ಲ, ರಾವಣ ಈ ಶಿಷ್ಟಾಚಾರವನ್ನು ಮೀರದಂತಹ ಉದಾತ್ತ.

ರಾಮನ ಧೂತರ ಆಹ್ವಾನದ ಮೇರೆಗೆ ಯುದ್ಧಭೂಮಿಗೆ ಪುರೋಹಿತನಾಗಿ ಆಗಮಿಸಿ, ಕ್ರಿಯಾವಿಧಿಗಳನ್ನು ಪೂರೈಸಿ ರಾಮನಿಗೆ ಯುದ್ಧ ಕಂಕಣ ಕಟ್ಟಿ 'ವಿಜಯೀಭವ' ಎಂದು ಆಶೀರ್ವದಿಸಿ ಹೊರಡುತ್ತಾನೆ ರಾವಣ. ಉದಾತ್ತತೆಗೆ ಇದಕ್ಕಿಂತ ಮಿಗಿಲಾದ ನಿದರ್ಶನ ಬೇಕೆ? ಮರೆಯಲ್ಲಿ ನಿಂತು ವಾಲಿಯನ್ನು ಕೊಂದು ಧರ್ಮಕಾರ್ಯವನ್ನು ನೆರವೇರಿಸಿದೆ ಎಂದು ಭಾವಿಸುವ ರಾಮ ಎಲ್ಲಿ ತನ್ನನ್ನು ಕೊಲ್ಲಲಿಕ್ಕೆಂದು ಯುದ್ಧ ಸಾರಿರುವ ರಾಮನಿಗೆ ಬಂದು ಕಂಕಣ ಕಟ್ಟಿ 'ವಿಜಯೀಭವ' ಎಂದು ಆಶೀರ್ವದಿಸಿ ಹೋಗುವ ರಾವಣ ಎಲ್ಲಿ? ತಮ್ಮ ಕರ್ತವ್ಯವನ್ನು ನಿರ್ವಹಿಸುವುದನ್ನು ಒಂದು ಸಂಸ್ಕೃತಿ ಎಂದು ಕರೆಯುತ್ತೇವೆ. ಯಾಕೆಂದರೆ ಆ ಸಂಸ್ಕೃತಿಯಲ್ಲಿ ನೀನು ಗುರುಸ್ಥಾನದಲ್ಲಿ ನಿಂತಾಗ ನೀನು ಗುರುವಾಗಿಯೇ ಭಾವಿಸಬೇಕು ಮತ್ತು ವರ್ತಿಸಬೇಕು. ಎದುರಾಳಿಗಳಾಗಿ ಯುದ್ಧರಂಗದಲ್ಲಿ ನಿಂತಾಗ ಕೃಷ್ಣಾರ್ಜುನರಾದರೂ ಹೊಡೆದಾಡಬೇಕು. ಭೀಷ್ಮಾರ್ಜುನರಾದರೂ ಹೊಡೆದಾಡಬೇಕು. ಅದು ಧರ್ಮಯುದ್ಧ. ಅದು ಧರ್ಮದ ಕಾಲ. ನಾವು ಮೋಸದ ಕಾಲದಲ್ಲಿ ಬದುಕುತ್ತಾ ಇದ್ದೀವಿ. ಆ ರೀತಿಯಾಗಿರುವಂತಹ ವಿಷಯಗಳು ಇದರೊಳಗೆ ಎಷ್ಟು ಕಾಣಿಸುತ್ತಿವೆ ಎಂಬುದು ಮುಖ್ಯ.

ರಾಮಾಯಣದಲ್ಲಿ ಶೋಧಿಸುವುದು ಏನನ್ನು? ಅದನ್ನು ಶೋಧಿಸಿ ಕುವೆಂಪು ಅವರ ರೀತಿಯಲ್ಲಿ ಅದನ್ನು 'ರಾಮಾಯಣ ದರ್ಶನ'ವಾಗಿಸಿದಾಗ ಅದರ ಅರ್ಥವೇ ಬೇರೆ. ಅದರಲ್ಲಿ ನಾವೀಗ ಸಾಮೂಹಿಕ ನೆಲೆಯ ಒಳಿತನ್ನು ನೋಡುತ್ತಿದ್ದೇವೆ. ಪಾಪಿಗೂ ಉದ್ಧಾರವುಂಟು. ಅದೊಂದು ಬಹಳ ಮುಖ್ಯವಾಗಿರುವಂತ ದರ್ಶನ. ಯಾಕೆಂದರೆ ಯಾರೂ ಹುಟ್ಟುತ್ತಲೇ ಪಾಪಿಗಳಲ್ಲ, ಸನ್ನಿವೇಶವಶಾತ್ ಅವರು ಪಾಪಿಗಳಾದವರು. ಖಲೀಲ್ ಗಿಬ್ರಾನ್ ಹೇಳುತ್ತಾನೆ- ಅಪರಾಧ ಮಾಡಿದವರು ನಿಮ್ಮ ನಡುವೆ ಯಾರಾದರೂ ಕಂಡರೆ, ಅವರು ಸಿಕ್ಕಿಬಿದ್ದಿದ್ದಕ್ಕೆ ಸಂತೋಷಿಸಬೇಡಿ. ಪಶ್ಚಾತ್ತಾಪಪಡಿ. ನಿಮ್ಮಲ್ಲಿ ಅವಿಸಿಟ್ಟಿರುವ ಪಾಪಗಳಿಗಾಗಿ, ಇಲ್ಲೊಂದು ಎಡವುವ ಕಲ್ಲಿದೆ ಎಂದು ತೋರಿಸುವುದಕ್ಕಾಗಿ ಅವನು ಸಿಕ್ಕಿಬಿದ್ದಿದ್ದಾನೆ. ಇಡೀ ಮರದ ಮೌನ ಸಮ್ಮತಿಯಿಲ್ಲದೆ ಒಂದು ಎಲೆ ಹೇಗೆ ಹಳದಿಯಾಗುವುದು ಸಾಧ್ಯವಿಲ್ಲವೋ ಹಾಗೆ. ನಿಮ್ಮೆಲ್ಲರ ಅವಿಸಿಟ್ಟ ಪಾಪಗಳಿಲ್ಲದೆ ಒಬ್ಬ ಪಾತಕಿ ಉದಯಿಸುವುದಿಲ್ಲ, ಇದು ನಮಗೆ ಗೊತ್ತಿರಬೇಕು. ನಾವೆಲ್ಲರೂ ಒಳಗೆ ಕೇಡಿಗಳು. ನಾವು ನಮ್ಮೊಳಗೆ ಕೇಡಿಗಳಲ್ಲದಿದ್ದರೆ ಸಮಾಜದಲ್ಲಿ ಅಷ್ಟೊಂದು ಕೇಡಿಗಳು ಹುಟ್ಟಲು ಹೇಗೆ ಸಾಧ್ಯ? ಆದ್ದರಿಂದ ಸಿಕ್ಕಿ ಬೀಳುವ ಮೂಲಕ ಇಲ್ಲೊಂದು ಎಡಹುವ ಕಲ್ಲಿದೆ ಎಂದು ತೋರಿಸಿದ ಪಾಪಿಗೂ ಉದ್ಧಾರದ ಅವಕಾಶವಿರಬೇಕು. ಅವನು ಸಿಕ್ಕಿಬಿದ್ದಿರುವುದರಿಂದ ಪಾಪಿ ಎನಿಸಿಕೊಂಡಿದ್ದಾನೆ. ನಾವು ಸಿಕ್ಕಿಬಿದ್ದಿಲ್ಲವಾದ್ದರಿಂದ ಮಹಾತ್ಮರೆನಿಸಿಕೊಂಡಿದ್ದೇವೆ. ಇಷ್ಟೇ ವ್ಯತ್ಯಾಸ.

ಆದ್ದರಿಂದ ನಮ್ಮ ಆಳಗಳನ್ನು ನೋಡಿಕೊಳ್ಳುವುದಕ್ಕೆ ಈ ರೀತಿಯ ಕಾವ್ಯಗಳು ಒಂದು ದಾರ್ಶನಿಕ ಪ್ರಭೆಯಾಗಬೇಕು. ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ, ನಮ್ಮ ಪರಂಪರೆಯನ್ನು ಅರಿಯುವುದಕ್ಕೆ, ನಾವು ನಡೆದುಬಂದ ದಾರಿಯನ್ನು ನೋಡುವುದಕ್ಕೆ, ಮತ್ತು ನಡೆಯಲಿರುವ ದಾರಿಯನ್ನು ಕಂಡುಕೊಳ್ಳಲಿಕ್ಕೆ ಸಹ. 'ಆಗಿದ್ದು ಮಾತ್ರವಲ್ಲ, ಅಪ್ಪುದೂ ನಮಗಿಲ್ಲಿ ಬೇಕು'. 'ರಾಮಾಯಣ ದರ್ಶನಂ'ನಲ್ಲಿ ಹೇಳಿರುವಂತೆ ನಾವು 'ಅಪ್ಪುದು' ಏನು ಎಂಬುದೂ ನಮಗಿಲ್ಲಿ ಸಿಗಬೇಕು. ನಮ್ಮ ಪರಂಪರೆಯ ಬೇರಿನಲ್ಲಿ ನಾವದನ್ನು ಕಂಡುಕೊಳ್ಳಬೇಕು.

ಕೃಷ್ಣನ ಕತೆಯಾಗಲಿ, ರಾಮನ ಕತೆಯಾಗಲಿ ಅವರಿಬ್ಬರನ್ನು ನಾವು ಮತ್ತೆ ಮತ್ತೆ ಯಾಕೆ ನೆನಪಿಸಿಕೊಳ್ಳುತ್ತಿದ್ದೇವೆಂದರೆ ಅವರಿಬ್ಬರೂ ಕೂಡ ಬ್ರಾಹ್ಮಣ ಸಂಜಾತರಲ್ಲ. ಇಬ್ಬರೂ ಕಪ್ಪು ದೇವತೆಗಳೇ. ನೀಲ ಮೇಘ ಶ್ಯಾಮರೇ! ಕಪ್ಪು ಕುಲದವರಾದ ಅವರನ್ನೇ ಬಳಸಿ ದ್ರಾವಿಡ ಕುಲಗಳವರನ್ನು ಅವಮಾನಿಸುವ ಒಂದು ಪ್ರಯತ್ನ, ಆರ್ಯ ಸಂಸ್ಕೃತಿಯನ್ನು ಮೆರೆಸುವ ಪ್ರಯತ್ನ, ಅವರ ಶೋಷಣೆಯ ನೀತಿಗಳನ್ನು ಇವರ ಬಾಯಲ್ಲಿ ಹೇಳಿಸುವ ಪ್ರಯತ್ನ, ಆ ಮೂಲಕ ನಮ್ಮನ್ನು ಸಾಂಸ್ಕೃತಿಕ ಬಂದಿಗಳನ್ನಾಗಿಸುವ ಪ್ರಯತ್ನ- ಇದು ಬಹಳ ಅಪಾಯಕಾರಿಯಾದುದು.

ಆದ್ದರಿಂದ ಕಾವ್ಯವನ್ನು ಕಾವ್ಯವಾಗಿ ಓದಬೇಕು. ಮಹಾಕಾವ್ಯವನ್ನು ಪರಂಪರೆಯ ಅಂಗವಾಗಿ ನೋಡಬೇಕು. ಆದರೆ ಸಂಸ್ಕೃತಿಯ ಅಂಶಗಳಲ್ಲಿ ಯಾವುದನ್ನೇ ಆಗಲಿ, ನಾವು ಎಲ್ಲವನ್ನೂ ಇಡಿಯಾಗಿ ನಂಬುತ್ತೇವೆ ಎಂಬ ಕುರುಡು ನೀತಿ ಇರಬಾರದು. ವಿವೇಚನೆ ಸದಾ ಎಚ್ಚರಾಗಿರಬೇಕು. ಯಾವ ಶಾಸ್ತ್ರಗ್ರಂಥ ಏನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು? ಯಾವಾಗಲೂ ನಮ್ಮ ಅಂತಃಸಾಕ್ಷಿಯೇ ನಮ್ಮನ್ನು ಮುನ್ನಡೆಸಬೇಕು. ಪ್ರತಿಯೊಬ್ಬರಿಗೂ ಒಂದು ಅಂತಃಸಾಕ್ಷಿ ಇರುತ್ತದೆ. ಯಾವ ಶಾಸ್ತ್ರಪುರಾಣಗಳ ಹೆಸರಿನಲ್ಲಿ ಏನೇ ಸುಳ್ಳು ಹೇಳಿದರೂ ಅವನೊಳಗಿನ ನ್ಯಾಯಾಧೀಶ ನ್ಯಾಯವನ್ನೇ ಮಾತನಾಡುತ್ತಿರುತ್ತಾನೆ. ಅವನ ದನಿಯನ್ನು ನಾವು ಅಮುಕದಿರುವ ಹಾಗೆ ನಮ್ಮನ್ನು ಪರಂಪರೆಯೂ ಹಾಗೂ ಮಹಾಕಾವ್ಯಗಳೂ ಮತ್ತೆ ಮತ್ತೆ ಓದಿಗೂ, ಮತ್ತೆ ಮತ್ತೆ ಹುಡುಕಾಟಕ್ಕೂ ಹಚ್ಚಬೇಕು. ಈ ಆಶಯಗಳು ಮತ್ತು ಸಂಸ್ಕೃತಿ ಚಿಂತನೆಗಳು ಮತ್ತು ಮರು ಓದುಗಳು ನಮ್ಮನ್ನು ಮತ್ತಷ್ಟು ಮುಂದಕ್ಕೆ ಮನುಷ್ಯತ್ವದೆಡೆಗೆ ಮುನ್ನಡೆಸಲಿ.

(ಮುಂಬೈನಲ್ಲಿ ಗೋರೆಗಾಂವ್ ಕರ್ನಾಟಕ ಸಂಘ 17. 2. 2013 ರಂದು ನಡೆಸಿದ 15ನೇ ಕರ್ನಾಟಕ ವಿಚಾರ ಭಾರತಿ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾಡಿದ ಸಮಾರೋಪ ಭಾಷಣದ ಪರಿಷ್ಕೃತ ಬರಹ ರೂಪ)

ಮುಗಿಯಿತು

ಶೂದ್ರರನ್ನು ಮೂಲೆಗುಂಪು ಮಾಡಿರುವ ಬ್ರಾಹ್ಮಣ ಅರ್ಚಕರು



ಒಂದು ಪತ್ರ

ಶಶಿ ಪುತ್ತೂರ ಅವರು (ಫೆಬ್ರವರಿ 13, 2013ರ ಸಂಚಿಕೆ) ತಮ್ಮ ಹದಲ್ಲಿ ಹೇಳಿರುವಂತೆ 'ಕುಕ್ಕೆಯ ಶೈವ ದೇಗುಲ ಮಾಧ್ವರಿಂದ ಹೈಜಾಕ್ ರುವುದು' ನಿಜ. ವಾಸ್ತವವಾಗಿ ನಮ್ಮ ದಕ್ಷಿಣ ಕರಾವಳಿ ಅರ್ಥಾತ್ ಳುನಾಡಿನಲ್ಲಿ ಹೆಚ್ಚಿನ ಶೈವ ದೇಗುಲಗಳು (ಶಿವ, ಸುಬ್ರಹ್ಮಣ್ಯ, ದುರ್ಗಾ, ಣಪತಿ ದೇವಳಗಳು) ವೈಷ್ಣವ ಅರ್ಚಕರ ಕೈಗೆ ಸಿಕ್ಕಿ ಕುಲಗೆಟ್ಟು ಹೋಗಿವೆ. ಸರ ಹಿಂದೆ 500 ವರ್ಷ ಹಿಂದಿನ ಒಂದು 'ಧಾರ್ಮಿಕ ದೌರ್ಜನ್ಯದ' ತಿಹಾಸ ಅಡಗಿದೆ. ವಾದಿರಾಜ ಸ್ವಾಮಿಯ ಕಾಲದಲ್ಲಿ ಅವರು ತಮ್ಮ ಪ್ಪರೊಡಗೂಡಿ ಶೈವ ದೇಗುಲಗಳಿಗೆಲ್ಲ ನುಗ್ಗಿ ಅಲ್ಲಿಯ ಶೈವ ಅರ್ಚಕರನ್ನು ಷ್ಣವ ಮತಕ್ಕೆ "ಬಲಾತ್ಕಾರದಿಂದ ಮತಾಂತರ" ಮಾಡಿ, ಆ ಎಲ್ಲ ಶೈವ ಗುಲಗಳಲ್ಲಿ ಸಾಲಿಗ್ರಾಮ ಸ್ಥಾಪಿಸಿ, ವೈಷ್ಣವ ಪದ್ಧತಿಯಲ್ಲಿ ಪೂಜಾ ಪದ್ಧತಿ ಚಿಸಿದರು. ಇದಕ್ಕೆ ಒಪ್ಪದ ಶೈವ ಅರ್ಚಕರನ್ನು ಓಡಿಸಿ ಆ ಜಾಗದಲ್ಲಿ ತನ್ನ ಡಾಳ ಶಿಷ್ಯರಲ್ಲಿ ಒಬ್ಬರನ್ನು ನೇಮಿಸಿದ್ದು ಇದೇ ವಾದಿರಾಜ.

ಕರ್ನಾಟಕದವರು ಅತಿಯಾಗಿ ಗೌರವಿಸುವ ಧರ್ಮಸ್ಥಳದಲ್ಲೂ ವೈಷ್ಣವ ರ್ಚಕರದ್ದೇ ಕಾರುಬಾರು. ಧರ್ಮಸ್ಥಳದ ಭಕ್ತರು ಮಂಜುನಾಥನಿಗೆ ಭಕ್ತಿ ೀರಿದರೆ, ಸುಳ್ಳು ಆಣೆ-ಪ್ರಮಾಣ ಮಾಡಲು ಭಯಪಟ್ಟರೆ, ಸ್ವತಃ ಧರ್ಮಸ್ಥಳದ ರ್ಚಕರು ಮಾತ್ರ ಯಾವುದೇ ಭಯವಿಲ್ಲದೆ ಮೊದಲ ಪ್ರಾಶಸ್ತ್ಯದ ಪೂಜೆಯನ್ನು ಮ್ಮ ವಿಷ್ಣು ಸಾಲಿಗ್ರಾಮಕ್ಕೆ ಅರ್ಪಿಸಿ ಮಂಜುನಾಥನನ್ನು ಎರಡನೇ ದರ್ಜೆಯ ವರನ್ನಾಗಿ ಪರಿವರ್ತಿಸಿ ಮಂಜುನಾಥನಿಗೇ ಮೋಸ ಮಾಡುತ್ತಿದ್ದಾರೆ. ಯಾವುದೇ ವರಿಗೆ ಪೂಜೆ ಮಾಡಿದರೂ ಕೊನೆಗೆ ಎಲ್ಲ ಪೂಜೆಗಳ ಫಲವನ್ನು ತಮ್ಮ ಲದೇವತೆ ಕೃಷ್ಣನಿಗೆ ಅರ್ಪಿಸಿ "ಕೃಷ್ಣಾರ್ಪಣಮಸ್ತು" ಎನ್ನುವುದು ತುಳುನಾಡಿನ ಷ್ಣವ ಅರ್ಚಕರು ಹಾಕಿರುವ ಕೆಟ್ಟ ಸಂಪ್ರದಾಯ.

ಭಾರತದ ಎಲ್ಲಾ ಹಿಂದೂ ದೇವಳಗಳಲ್ಲಿ ಅರ್ಚಕರಿಂದ ಭಕ್ತರಿಗೆ ಮೋಸ ಡೆಯುತ್ತದೆ. ಆದರೆ ಸ್ವತಃ ದೇವರಿಗೇ ಮೋಸಮಾಡುವುದು ಮಾತ್ರ ಕೇವಲ ತುಳುನಾಡಿನಲ್ಲಿ ಮಾತ್ರ ನಡೆಯುವಂತಹುದ್ದು. ಶೈವ ದೇವರನ್ನು ಶೈವ ಅರ್ಚಕನೇ ಪೂಜಿಸಬೇಕೇ ವಿನಃ ವೈಷ್ಣವ ಅರ್ಚಕನು ಪೂಜಿಸುವ ಪದ್ಧತಿ ಇಡೀ ಭಾರತದಲ್ಲಿ ಎಲ್ಲಿಯೂ ಇಲ್ಲ, ಕೇವಲ ತುಳುನಾಡಿನಲ್ಲಿ ಮಾತ್ರ ಇದು ಪ್ರಚಲಿತ. ಬುದ್ಧಿವಂತರ ಜಿಲ್ಲೆಯವರ 'ಅತಿ ಬುದ್ಧಿವಂತಿಕೆಗೆ' ಇದು ಒಂದು ಉದಾಹರಣೆ.

ಆಶ್ಚರ್ಯವೆಂದರೆ ತುಳುನಾಡಿನ ಎಲ್ಲ ಶೈವ ದೇವಾಲಯಗಳ ಧರ್ಮದರ್ಶಿಗಳು (ಮೊಕ್ತೇಸರರು) ಶೂದ್ರರೇ ಆಗಿದ್ದರೂ ಈ ಶೂದ್ರರಿಗೆ ದೇವಸ್ಥಾನದ ಪೂಜಾ ಪದ್ಧತಿ ಮತ್ತು ಬ್ರಾಹ್ಮಣರಲ್ಲಿಯ ಉಪಜಾತಿಗಳ ಬಗ್ಗೆ ಜ್ಞಾನವೇ ಇಲ್ಲ. ಶೂದ್ರ ಮೊಕ್ತೇಸರರ ಈ ಅಜ್ಞಾನದ ದುರ್ಲಾಭವನ್ನು ವೈಷ್ಣವ ಅರ್ಚಕರು ಶತಮಾನಗಳಿಂದ ಪಡೆದು ತಮ್ಮ ಸ್ಥಾನ ಗಟ್ಟಿಗೊಳಿಸಿಕೊಂಡಿದ್ದಾರೆ.


ಸರ್ಕಾರದ ಸುಪರ್ದಿಗೆ ಹೋದ ದೇವಳಗಳಲ್ಲಂತೂ ಶೂದ್ರ ಧರ್ಮದರ್ಶಿಗಳನ್ನು ಹೊರಕ್ಕೆ ನೂಕಿ ಈ ವೈಷ್ಣವ ಅರ್ಚಕರು ಶೈವ ದೇವಳದ ಸಂಪೂರ್ಣ ಆಡಳಿತವನ್ನು ತಮ್ಮ ಕೈವಶ ಮಾಡಿಕೊಂಡಿದ್ದಾರೆ. ಕಟೀಲು ದೇವಳ ಇದಕ್ಕೆ ತಾಜಾ ಉದಾಹರಣೆ. ಈ ಕಟೀಲು ದೇವಳದಲ್ಲಿ ಮೊದಲು ವಂಶಪರಂಪರಾ ಆಡಳಿತವು ಶೂದ್ರ ಬಂಟರ ಜಾತಿಯ ಕೈಯಲ್ಲಿ ಇತ್ತು. ಈಗ ವೈಷ್ಣವ ಅರ್ಚಕರು ಬಂಟರನ್ನು ನಯವಾಗಿ ಬದಿಗೆ ನೂಕಿ ತಾವೇ 'ಅನುವಂಶಿಕ ಮೊಕ್ತೇಸರರು' ಎಂದು ಖೋಟಾ ಬಿರುದು ಧರಿಸಿ ಆಡಳಿತ ನಡೆಸುತ್ತಿದ್ದಾರೆ. ಇಲ್ಲಿ ಸರಕಾರಿ ಆಡಳಿತಾಧಿಕಾರಿ ಇರುವುದು ನಾಮಮಾತ್ರಕ್ಕೆ.

ಒಂದು ವೇಳೆ ಒಬ್ಬ ಮುಸಲ್ಮಾನ ದೊರೆ ಶೈವ ದೇಗುಲಗಳನ್ನು ಕೈವಶ ಮಾಡಿಕೊಂಡು ಅಲ್ಲಿ ಶೈವ ದೇವರಿಗೆ ತನ್ನ ಧರ್ಮದ ಅರ್ಚಕರನ್ನು ನೇಮಿಸಿ ತನ್ನ ಧರ್ಮದ ಪೂಜಾ ಪದ್ಧತಿ ವಿಧಿಸಿದ್ದರೆ ಹಿಂದೂಗಳು ಸುಮ್ಮನಿರುತ್ತಿದ್ದರೆ? ಹಾಗಿರುವಾಗ ವಿಭೂತಿಯ ಬಗ್ಗೆ ಅಲರ್ಜಿ ಇರುವ ವೈಷ್ಣವ ಅರ್ಚಕರು ಎಲ್ಲ ಶೈವ ದೇಗುಲಗಳನ್ನು ಕೈವಶ ಮಾಡಿಕೊಂಡಿರುವಾಗ ಹಿಂದೂ ಧರ್ಮದ ರಕ್ಷಕರು ಸುಮ್ಮನಿರುವುದೇಕೆ? ಎಂಬ ಶಶಿ ಪುತ್ತೂರ ಅವರ ಪ್ರಶ್ನೆ ತುಂಬಾ ಉಚಿತ.

ನನ್ನ ಜೀವನದ ಒಂದು ಸಾರಸ್ಯಕರವಾದ ನಿಜ ಘಟನೆ ಹೀಗಿದೆ: ಮುಂಬೈಯಲ್ಲಿ ಉದ್ಯಮಿಯಾಗಿರುವ ನನ್ನ ಒಬ್ಬ 75 ವರ್ಷದ ಹಿರಿಯ ಸಂಬಂಧಿಕರು ತಮ್ಮ 20 ನೇ ವಯಸ್ಸಿನಿಂದ ವರ್ಷಕ್ಕೆರಡು ಬಾರಿ ಕಟೀಲು ಹಾಗೂ ಬಪ್ಪನಾಡು ದುರ್ಗಾ ದೇವಳಕ್ಕೆ ಭೇಟಿ ಕೊಟ್ಟು ಪೂಜೆ ಮಾಡಿಸುತ್ತಿದ್ದರು. ಐದು ವರ್ಷಗಳ ಹಿಂದೆ ಅವರು ನನಗೆ ಸಿಕ್ಕಿದಾಗ "ನಾನು ಸೆಂಚುರಿ ಬಾರಿಸಿದ್ದೇನೆ" ಎಂದು ಹೇಳಿದರು. ಅಂದರೆ ಹಿಂದಿನ 50 ವರ್ಷದಲ್ಲಿ ಒಂದುನೂರು ಸಾರಿಗೂ ಹೆಚ್ಚು ಬಾರಿ ಕಟೀಲು ಹಾಗೂ ಬಪ್ಪನಾಡಿಗೆ ಹೋಗಿ ಪೂಜೆ ಸಲ್ಲಿಸಿದ್ದರು ಅವರು. ಆಗ ನಾನು "ಹಾಗಾದರೆ ಆ ಎರಡೂ ದೇವಳಗಳಲ್ಲಿಯ ಮೂಲ ಉದ್ಭವ ಮೂರ್ತಿಗಳ ಸ್ವರೂಪ ಹೇಳಬಲ್ಲಿರಾ?" ಎಂದು ಕೇಳಿದೆ. ಅದಕ್ಕೆ ಅವರು "ಕೈ, ಕಾಲು, ಬಾಯಿ" ಎಂದು ದೇವಿಯ ಅವಯವಗಳ ಎಣಿಕೆ ಪ್ರಾರಂಭಿಸಿದರು. ಆಗ ನಾನು "ನೀವು ಹೇಳುತ್ತಿರುವುದು ಉತ್ಸವ ಮೂರ್ತಿಯ ರೂಪ. ಆದರೆ ಮೂಲ ಉದ್ಭವ ಮೂರ್ತಿಯ ರೂಪ ಹೇಳಬಲ್ಲಿರಾ" ಎಂದು ಕೇಳಿದೆ. ಆದರೂ ಅವರು ತಾವು ಹೇಳಿದ್ದೆ ಸರಿ ಎಂದು ವಾದಿಸಿದಾಗ ನಾನು "ಮೂಲ ಮೂರ್ತಿ ಲಿಂಗ ರೂಪದಲ್ಲಿದೆ. ಹೋಗಿ ಆಯಾ ದೇವಸ್ಥಾನಗಳ ಅರ್ಚಕರನ್ನೇ ಕೇಳಿ ಬನ್ನಿ" ಎಂದು ಹೇಳಿದೆ.

ಮರುದಿನವೇ ಅವರು ಆ ದೇವಳಗಳಿಗೆ ಹೋಗಿ ಅರ್ಚಕರನ್ನು ಕೇಳಿ ಮೂಲ ಮೂರ್ತಿಗಳು 'ಲಿಂಗ' ರೂಪದಲ್ಲಿವೆ ಎಂದು ಖಾತ್ರಿಪಡಿಸಿಕೊಂಡರು. ಅನಂತರ ಅದೇನಾಯಿತೋ ಏನೋ ಅವರು ತಮ್ಮ 50 ವರ್ಷದ ಭಕ್ತಿಯಲ್ಲಿ ನಂಬಿಕೆಯನ್ನೇ ಕಳೆದುಕೊಂಡು ಆ ದೇವಸ್ಥಾನಗಳಿಗೆ ಹೋಗುವುದನ್ನೇ ನಿಲ್ಲಿಸಿದರು! ಭಕ್ತಿಯೆಂದರೆ ಅದೊಂದು ಭ್ರಾಂತಿ ಎಂದು ಅವರಿಗೆ ಮನವರಿಕೆಯಾಗಿರಬೇಕು.

ಕಟೀಲಿಗೆ ಹೋಗುವ ಭಕ್ತರಲ್ಲಿ ಶೇಕಡ 95 ಜನರಿಗೆ ತಾವು ಪೂಜಿಸುವ ದೇವಿಯ ಮೂಲ ಮೂರ್ತಿಯ ರೂಪವೇ ಗೊತ್ತಿಲ್ಲ. ಹಾಗಿರುವಾಗ ಅವರ ಪೂಜೆಗೆ ಏನಾದರು ಅರ್ಥವಿದೆಯೇ? ಗುಡಿಯಲ್ಲಿ ಮೂಲ ಮೂರ್ತಿಯ ಮೇಲೆ ಫೋಕಸ್ ಲೈಟ್ ಹಾಕಿದ್ದರೆ ಈ ಅಜ್ಞಾನ ಭಕ್ತರಲ್ಲಿ ಉಂಟಾಗುತ್ತಲೇ



ಇರಲಿಲ್ಲ. ಹಿಂದೂ ದೇವಾಲಯಗಳ ಗರ್ಭ ಗುಡಿಯಲ್ಲಿ ಎಲೆಕ್ಟ್ರಿಸಿಟಿ ದೀಪ ಹಾಕಬಾರದೆಂದು ನಿಯಮ ಮಾಡಿದವರಾರು? ವಿದ್ಯುತ್ ದೀಪ ಹಾಕಿದರೆ ಅದು ಹೇಗೆ ದೇವರಿಗೆ ಅಪಚಾರವಾಗುತ್ತದೆ? ಮೂಲ ಮೂರ್ತಿಯ ಮೇಲೆ ವಿದ್ಯುತ್ ದೀಪ ಹಾಕಿದರೆ ಹಾಗೂ ಹೂವಿನ- ಅಲಂಕಾರ ಕಡಿಮೆ ಇಟ್ಟರೆ ಭಕ್ತರಿಗೆಲ್ಲ ಮೂಲ ದೇವರ ಮೂರ್ತಿಯ ದರ್ಶನ ಸರಿಯಾಗಿ ಆಗುತ್ತದೆಯಲ್ಲವೇ? ನೂರೊಂದು ಸಾರಿ ದೇವಸ್ಥಾನಕ್ಕೆ ಹೋಗಿ ಬಂದವರಿಗೂ ದೇವರ ಮೂರ್ತಿಯ ಮೂಲ ಸ್ವರೂಪ ಗೊತ್ತಿಲ್ಲದಿರುವುದು ಎಷ್ಟು ಹಾಸ್ಯಾಸ್ಪದವಲ್ಲವೇ? ಇಂತಹ ಪೊಳ್ಳು ನಿಯಮಕ್ಕೆ ಅರ್ಥವೆಲ್ಲಿದೆ? ಪುರಾಣ ಕಾಲದಲ್ಲಿ ವಿದ್ಯುತ್ ಮತ್ತು ಬಂದೂಕುಗಳು ಇದ್ದಿದ್ದರೆ ನಮ್ಮ ಪೂರ್ವಜರೇ ದೇವರ ಕೈಯಲ್ಲಿ ಬಂದೂಕು ಕೊಟ್ಟು ಗರ್ಭಗುಡಿಯಲ್ಲಿ ವಿದ್ಯುತ್ ಹಾಕುವ ಪ್ರಥೆ ಆರಂಭಿಸುತ್ತಿದ್ದರೇನೋ!

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು


ನನ್ನ ಪ್ರೀತಿಯ ಮಲೆನಾಡು

ಮಲೆನಾಡೆಂದರೆ ಥಟ್ಟನೆ ನೆನಪಾಗುವುದು ಸಿರು, ಗಿರಿಶಿಖರಗಳು. ಪ್ರೀತಿಯ ಮಲೆನಾಡೇ ಾಗೆ. ಹಕ್ಕಿಗಳ ಕಲರವ, ಪ್ರಾಣಿಗಳ ಓಡಾಟ, ಲ್ಲೊಂದು ಇಲ್ಲೊಂದು ಇಣುಕಾಡುವ ಕಡವೆ, ಡುಹಂದಿ, ಕಾಡುಕೋಣ, ಹುಲಿ-ಚಿರತೆಗಳು, ಹಸಿರ ನರಾಶಿ, ಅಳಿಲು, ಹಾರು ಬೆಕ್ಕು, ಕಾಡು ಪಾಪಗಳ ಡು ಇದರೊಂದಿಗೆ ಸಹಜತೆಯಲ್ಲಿ ತಲಾಂತರದಿಂದ ಮಲೆನಾಡಿನ ಗಿರಿಶೃಂಗಗಳಲ್ಲಿ ಸಿರಿನಲ್ಲೇ ಉಸಿರಾಗಿರುವ ಗಿರಿಜನರ ಬದುಕು. ಲೆನಾಡಿನ ಬಗ್ಗೆ ಪುಸ್ತಕಗಳಲ್ಲಿ ಕಥೆ-ಕಾದಂಬರಿಗಳಲ್ಲಿ ದಿದಷ್ಟು ತಿಳಿದುಕೊಳ್ಳುವುದು ಸುಲಭವೇನಲ್ಲ. ಇಲ್ಲಿ ದನ್ನರಿತರೆ ಇನ್ನೊಂದು ಭಿನ್ನವಾಗಿ ಣಿಸಿಕೊಳ್ಳುವುದು.

ನನ್ನ ಪ್ರೀತಿಯ ಮಲೆನಾಡು ಗಿರಿ ಶಿಖರಗಳ ಾಪವಲ್ಲದೆ ಬದುಕನ್ನೇ ಬದಲಿಸಬಲ್ಲ, ಕಥೆ-ದಂಬರಿಗೆ ವಸ್ತುವಾಗುವ ಎಲ್ಲಾ ವಿಷಯಗಳನ್ನು ಳಗೊಂಡಿರುವ ಬೃಹತ್ ನೈಸರ್ಗಿಕ ಕಾರ್ಖಾನೆ. ಣ್ಣಿಗೆ ಕಾಣುವ-ಕಾಣದ ಅದೆಷ್ಟೋ ವಸ್ತು-ವಿಚಾರಗಳು ಂತೆಯೇ ಬದುಕನ್ನು ಬದಲಿಸುವ, ಬದುಕಿನ ೌಲ್ಯವನ್ನು ಹೆಚ್ಚಿಸಬಲ್ಲ ಅಮೋಘ ಶಕ್ತಿ. ಇದು ದುಕಿನ ಭದ್ರ ನೆಲೆಗೆ ಪೂರಕವಾಗಿ ತನ್ನೊಡಲಿನಲ್ಲಿ ಚ್ಚಿಟ್ಟುಕೊಂಡಿರುವ ಅಸಂಖ್ಯೆ ವಸ್ತುಗಳ ಚಿರಂಜೀವಿ.

ನನ್ನ ಪ್ರೀತಿಯ ಮಲೆನಾಡಿನಲ್ಲಿ ಪ್ರಾಣಿ-ಪಕ್ಷಿಗಳ ಡನಾಟದೊಂದಿಗೆ ಕಾಡಿನೊಳಗಿನ ಸರ್ವಸ್ವವನ್ನು ನ್ನೊಳಗೆ ಬಚ್ಚಿಟ್ಟುಕೊಂಡು ಜೀವನ ನಡೆಸುವ ಮುಕರಿದ್ದಾರೆ, ಅಕ್ಷರ ಜ್ಞಾನವಿಲ್ಲದಿದ್ದರೂ ಮಲೆನಾಡಿನ ರಿತ್ರೆಯನ್ನು ತೆರೆದಿಡಬಲ್ಲ ಜನರಿದ್ದಾರೆ.

ಮಲೆನಾಡಿನ ಜನರು ತನ್ನ ನೆಲೆಯನ್ನು ಣಬೇಕೆಂದರೆ ನಗರ ಪ್ರದೇಶದಿಂದ 8-10 ಲೋಮೀಟರ್ ದೂರ ನಡೆಯಬೇಕಾದ ದಾರಿ, ದುಕಿನ ಬಂಡಿ ಸಾಗಬೇಕಾದರೆ ಆತ ಮಲೆನಾಡಿನ ಡಲಿನಲ್ಲಿ ಇನ್ನಷ್ಟು ದೂರ ಕ್ರಮಿಸಿ ಕಾಡಿನ ಉತ್ಪನ್ನ ಂಗ್ರಹಿಸಬೇಕಾಗುತ್ತದೆ. ಆದರೆ ಇಲ್ಲಿನ ಮುಗ್ಧ ಜನತೆ ಾಭದ ಆಸೆಗಾಗಿ ಮಲೆನಾಡನ್ನು ಬಲಿಕೊಡಲಾರರು.



ಮಳೆಯೇ ಇರಲಿ, ಬಿಸಿಲೇ ಇರಲಿ ತನ್ನಷ್ಟಕ್ಕೆ ತಾನು ಕೆಲಸ ಮಾಡುತ್ತಿದ್ದಾರೆ. ಪ್ರೀತಿಯ ಮಲೆನಾಡಿನ ಬದುಕು ನಗರ ಪ್ರದೇಶಕ್ಕೆ ಹೋಲಿಸಿದರೆ ತನಗೆಂದೂ ಕಷ್ಟವೇನೂ ಅಲ್ಲವೇ ಅಲ್ಲ.

ಇಂದು ನನ್ನ ಪ್ರೀತಿಯ ಮಲೆನಾಡಿನ ಪರಿಸ್ಥಿತಿ ಆತಂಕಕಾರಿ. ಪ್ರಾಣಿ-ಪಕ್ಷಿಗಳಿಗೆ, ಮಲೆನಾಡಿನ ಗಿರಿಜನರಿಗೆ ನೆಲೆಯಿಲ್ಲದಂತೆ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಮಲೆನಾಡಿನ ಮಡಿಲನ್ನೇ ಬಗೆದು ರೆಸಾರ್ಟ್‌ಗಳ ನಿರ್ಮಾಣ, ಪ್ರವಾಸೋದ್ಯಮ, ಗಣಿಗಾರಿಕೆ, ನೇತ್ರಾವತಿ ನದಿ ತಿರುವು, ಅಣೆಕಟ್ಟುಗಳ ನಿರ್ಮಾಣ, ಹುಲಿ ಸಂರಕ್ಷಣೆ, ಆನೆ ಕಾರಿಡಾರ್, ಪುಷ್ಪಗಿರಿ ವನ್ಯಧಾಮ ಮೊದಲಾದವುಗಳು ಮಲೆನಾಡನ್ನೇ ಆಕ್ರಮಿಸಿ ತನ್ನ ಅಧಿಪತ್ಯವನ್ನು ಸ್ಥಾಪಿಸಲು ಹೊರಟಿವೆ. ಮಲೆನಾಡನ್ನೇ ತಲೆತಲಾಂತರದಿಂದ ಕಾಪಾಡಿಕೊಂಡು ಬಂದಿರುವ ಗಿರಿಜನರ ಬದುಕು ಬೀದಿಗೆ ಬೀಳಲು ಕೆಲವೇ ದಿನಗಳು ಉಳಿದಿವೆಯೋ ಏನೋ?

ಇನ್ನೊಂದು ಕಡೆಯಲ್ಲಿ ಮಲೆನಾಡಿನ ಜನತೆಗೆ (?) ಸೌಕರ್ಯವನ್ನು ಒದಗಿಸಲು ಸರಕಾರಗಳು ಲಕ್ಷಣ ಗೆರೆಯನ್ನು ದಾಟಿ ಕೋಟಿಯ ಲೆಕ್ಕದಲ್ಲಿ ಲೆಕ್ಕ ಬರೆಯಬಲ್ಲರು. ವಾಸ್ತವತೆಯಲ್ಲಿ ಮಲೆನಾಡು ಅಭಿವೃದ್ಧಿಯಾಗಲು ಹಲವು ಅಡ್ಡಿ ಆತಂಕಗಳು, ಸರಕಾರದ ಕೋಟಿಯ ಲೆಕ್ಕ ಇಲ್ಲಿ ತಲುಪುವುದೇ ಇಲ್ಲ. (ಮಲೆನಾಡು ಹೇಗಿದ್ದರೂ ಏರು ಪರ್ವತವಲ್ಲವೇ? ನೈಸರ್ಗಿಕ ಪ್ರಕ್ರಿಯೆಯಲ್ಲಿ ಕೆಳಗಿನಿಂದ ಮೇಲೇರುವುದು ಸಾಧ್ಯವಿಲ್ಲವೋ ಏನೋ?)

ಇಂದು ನನ್ನ ಪ್ರೀತಿಯ ಮಲೆನಾಡನ್ನೇ ಬಗೆದು ಕೋಟಿ-ಕೋಟಿ ತೂಗುವ ಜನರಿದ್ದಾರೆ. ಮಲೆನಾಡಿನ ಅಸ್ತಿತ್ವವನ್ನೇ ಬುಡಮೇಲು ಮಾಡುವ ಯೋಜನೆಗಳಿವೆ. ಇದರಿಂದಾಗಿ ಶಾಂತವಾಗಿದ್ದ ಮಲೆನಾಡು ನೆತ್ತರನ್ನು ಬಸಿಯುವ ಹಂತಕ್ಕೆ ತಲುಪಿದೆ. ಹಸಿರು ನಾಡಿನಲ್ಲಿ ಕೆಂಪು ಚುಕ್ಕಿಗಳು ಮಿಂಚಿ ಮರೆಯಾಗುತ್ತಿವೆ. ಮಲೆನಾಡಿನ ಮಣ್ಣಿನ ಮಕ್ಕಳ ವಿಶಾಲ ಪ್ರಪಂಚ ಕರಗುತ್ತಿದೆ. ತಂಪು ಕಡಿಮೆಯಾಗುತ್ತಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ನನ್ನ ಪ್ರೀತಿಯ ಮಲೆನಾಡಿಗೆ ಬೇಕಾಗಿರುವುದು ಆಕ್ರೋಶ ತುಂಬಿದ ಬದುಕಿಗೆ ವಿದಾಯ. ಪ್ರೀತಿಯ ಮಲೆನಾಡಿನ ಅಭಿವೃದ್ಧಿ ಹೆಸರಿನಲ್ಲಾಗುವ ಲೂಟಿಗೆ ತಡೆಗೋಡೆ. ಅವೈಜ್ಞಾನಿಕ ಯೋಜನೆಗಳಿಗೆ ಗೇಟ್‌ಪಾಸ್. ಬೂಟುಗಳ ಬೂಟಾಟಿಕೆಯ ಅಂತ್ಯ. ಪ್ರೀತಿಯ ಮಲೆನಾಡಿಗೆ ಹಸಿರಿನ ಕವಚ.

ಅಂತೆಯೇ ಮಲೆನಾಡಿನ ಜನತೆಯ ಅತಂತ್ರ ಸ್ಥಳಾಂತರದಿಂದ ಮುಕ್ತಿ, ಒಟ್ಟಿನಲ್ಲಿ ಸ್ವಾಭಿಮಾನದ ಜೀವನ ರೂಪುಗೊಳ್ಳಬೇಕು. ಮಲೆನಾಡು ಸದಾ ತಂಪಾಗಿ, ಪ್ರಾಣಿ-ಪಕ್ಷಿ-ಮನುಷ್ಯ ಎಲ್ಲರೂ ಒಂದಾಗಿ ಬಾಳುವ ಸ್ಥಿತಿ ಮರುಕಳಿಸಬೇಕು. ಜೊತೆಗೆ ಮಲೆನಾಡಿನ ಉಳಿವೂ ಅತೀ ಅವಶ್ಯಕವಾಗಿ ಆಗಬೇಕು.




- ವಿಠಲ ಮಲೆಕುಡಿಯ, ಬೆಳ್ತಂಗಡಿ ದ.ಕ.

ಸಾಹಿತ್ಯ ಪರಿಷತ್ತುಗಳಿಗೂ ಮಾರ್ಚ್ ಜ್ವರ

ಮಾರ್ಚ್ ತಿಂಗಳು ಬಂತು ಎಂದರೆ ಅಧಿಕಾರಿಗಳಿಗೆ ಶಾನೆ ಕೆಲಸ. ಏನೋ ತರಾತುರಿ. ಬಂದಿರೋ, ಬರಲಿರೋ ಹಣವನ್ನು ಆರ್ಥಿಕ ವರ್ಷದ ಒಳಗೇ ಖಾಲಿ ಮಾಡಬೇಕು. ತಪ್ಪಿದಲ್ಲಿ ಅನ್ಯಾಯವಾಗಿ ಸರ್ಕಾರೀ ಖಜಾನೆಲೇ ಉಳಿಸಬೇಕಾಗುತ್ತೆ ಅನ್ನೋ ಸಂಕಟ ಅವರನ್ನು ಕಾಡುತ್ತೆ. ಕೆಲವು ಸಲ ಹಣವೇನೋ ಬಿಡುಗಡೆಯಾಗಿರುತ್ತದೆ. ಯಾವ ಕೆಲಸಕ್ಕೆ ಅದು ಆಗಿದೆ ಎನ್ನುವುದೇ ಗೊತ್ತಿರುವುದಿಲ್ಲ. ಆದರೂ ಬಿಲ್ ಮಾಡಿ, ಹಣ ಮಂಜೂರು ಮಾಡಿಕೊಳ್ಳೋ ಜಾಣತನ ತೋರ್ತಾರೆ!

ಇತ್ತೀಚೆಗೆ ಈ ಮಾರ್ಚ್ ತಿಂಗಳ ರೋಗ ಕನ್ನಡ ಸಾಹಿತ್ಯ ಪರಿಷತ್ತಿಗೂ ಬಡಿದಿದೆ. ಹಿಂದೆಲ್ಲ ಹೀಗೆ ಇರಲಿಲ್ಲ. ಜಿಲ್ಲಾ, ತಾಲ್ಲೂಕು ಸಾಹಿತ್ಯ ಸಮ್ಮೇಳನಗಳನ್ನು ಅನುಕೂಲವಾದ ಸಮಯದಲ್ಲಿ ಆಯೋಜಿಸುತ್ತಿದ್ದರು. ಸಾಧ್ಯವಾಗದೇ ಇದ್ದರೆ ತೆಪ್ಪಗಿರುತ್ತಿದ್ದರು. ಯಾಕೆಂದರೆ ಆಗೆಲ್ಲ ಸರ್ಕಾರದ ಯಾವ, ನೆರವೂ ದೊರೀತಿರಲಿಲ್ಲ. ಯಾವಾಗ ಘನ ಸರ್ಕಾರ ತಾಲ್ಲೂಕು ಸಮ್ಮೇಳನಗಳಿಗೆ ಒಂದು ಲಕ್ಷ ರೂಪಾಯಿ, ಜಿಲ್ಲಾ ಸಮ್ಮೇಳನಗಳಿಗೆ ಐದು ಲಕ್ಷ ರೂಪಾಯಿ ಕೊಡ್ತೀನಿ ಅಂತ ವಾಗ್ದಾನ ಮಾಡ್ತೋ ಆಗಿನಿಂದ ಸಾಹಿತ್ಯದ ಮೇಲಿನ ಅಭಿಮಾನ ಉಕ್ಕೋಯ್ತು ನೋಡಿ. ಆಗ ಬಂದದ್ದು ಈ ಜ್ವರ. ಸರ್ಕಾರದ ಅನುದಾನಾಧಾರಿತ ಸಮ್ಮೇಳನ ಅಲ್ವಾ. ಆರ್ಥಿಕ ವರ್ಷದ ಒಳಗೆ ಮಾಡಿ ಮುಗಿಸಬೇಕು. ವರ್ಷದ ಮೊದಲೇ ಯೋಜನೆ ರೂಪಿಸಿಕೊಳ್ಳಬೇಕಿತ್ತು ಅಂತ ಕೆಲವರಿಗೆ ಅನ್ನಿಸಬಹುದು. ಆದರೆ ಹೇಳಿ ಕೇಳಿ ಸರ್ಕಾರದ ಯೋಜನೆ. ತಲೆ ಕೆಟ್ಟ ಅದು ಈ ಸಾಲಿನಲ್ಲಿ ಅದಕ್ಕೆ ಹಣ ಬಿಡುಗಡೆ ಮಾಡುವುದಿಲ್ಲ ಅಂದರೇನು ಮಾಡೋದು ಹೇಳಿ. ಅದಕ್ಕೇ ಹಣ ಬಿಡುಗಡೆ ಖಾತರಿ ಮಾಡಿಕೊಂಡು ತಯಾರಿ ನಡೆಸೋಕೆ ತಡ ಮಾಡಿರ್ತಾರೆ. ಸಮ್ಮೇಳನಗಳು ನಡೆಯಲಿ ಬಿಡಲಿ, ಸರ್ಕಾರಕ್ಕೆ ಬೇಕಾಗಿರುವುದು ನಡೆಯಿತು ಅನ್ನುವುದಕ್ಕೆ ದಾಖಲೆ. ಫೋಟೋ ಸೆಷನ್ ಮಾಡಿ, ವೈಭವೋಪೇತವಾಗಿ ಸಮ್ಮೇಳನ ಜರುಗಿತು ಅಂತ ಸುಳ್ಳು ದಾಖಲೆ ಸೃಷ್ಟಿಸುವ ಕಲೆ ಇನ್ನೂ ಕರಗತ ಆಗಿಲ್ಲವೋ; ಇಂತಹದ್ದೇನಾದರೂ ಆಗಲಿ ಅಂತ ಕಾಯ್ದು ಕುಂತಿರೋ ಸಾಹಿತ್ಯ ಲೋಕದ ಸಹಜ ವೈರಿಗಳ ಭಯವೋ ಅಥವಾ ಸಾಹಿತ್ಯದ ಮೇಲಿನ ನೈಜ ಪ್ರೀತಿಯೋ ಏನೋ ಗೊತ್ತಿಲ್ಲ; ಯಾವುದೇ ದುಸ್ಸಾಹಸಕ್ಕೆ ಕೈಹಾಕದೆ ಸಮ್ಮೇಳನ ಅಂತ ಒಂದು ಮಾಡಿ ಮೆರೆಯೋಕೋ ಇಲ್ಲ ಕೈತೊಳೆದುಕೊಳ್ಳುವುದಕ್ಕೋ ಪದಾಧಿಕಾರಿಗಳು ತರಾತುರೀಲಿ ಓಡಾಡ್ತಾರೆ.

ಜಿಲ್ಲಾ, ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರುಗಳ ಆಯ್ಕೆಯಾದಾಗಲೆಲ್ಲ ನನಗೊಂದು ಪ್ರಶ್ನೆ ಕಾಡುತ್ತೆ. ಇಂತಹ ಆಯ್ಕೆಗೆ ಇರುವ ಮಾನದಂಡಗಳೇನು? ಯಾವ ಮಾರ್ಗದರ್ಶನ ಸೂತ್ರ ಅನುಸರಿಸಿ ಇದನ್ನು ಮಾಡಲಾಗುತ್ತದೆ? ಜಿಲ್ಲಾ, ತಾಲ್ಲೂಕು ಸಾಹಿತ್ಯ ಸಮ್ಮೇಳನಗಳಿಗೆ ಯಾವ ಜಿಲ್ಲೆ, ತಾಲ್ಲೂಕಿನವರಾದರೂ ಆಯ್ಕೆಯಾಗಬಹುದಾ? ಅಥವಾ ಆ ಪ್ರದೇಶಕ್ಕೆ ಸೀಮಿತ ಆಗಿರಬೇಕಾ? ಎರಡನೆಯದೇ ಹೌದಾದರೆ ಅದನ್ನು ನಿರ್ಧರಿಸುವುದು ಹೇಗೆ? ಜನ್ಮ ಸ್ಥಳವೇ? ಅದು ಅವರ ನಿಜವಾದ ಜನ್ಮ ಸ್ಥಳವೆ? ಅಥವಾ ಸರ್ಕಾರಿ ದಾಖಲೆಗಳು ತಿಳಿಸುವುದೆ? ಯಾಕೆಂದರೆ ಮುಕ್ಕಾಲು ಮೂರು ವೀಸೆ ಪಾಲು ಇವು ಎರಡೂ ಒಂದೇ ಆಗಿರುವುದಿಲ್ಲ. ಸಾಮಾನ್ಯವಾಗಿ ಮೊದಲ ಒಂದೆರಡು ಹೆರಿಗೆಗಳು ತಾಯಿಯ ತೌರು ಮನೆಯಲ್ಲಿ ಆಗಿರುತ್ತವೆ. ಈಗಂತೂ ತೌರಿನ ಸಮೀಪದ ನರ್ಸಿಂಗ್ ಹೋಂನಲ್ಲೋ, ಸರ್ಕಾರಿ ಆಸ್ಪತ್ರೆಗಳಲ್ಲೋ ಆಗಿರುತ್ತವೆ. ಆರ್ಥಿಕ ಅನುಕೂಲ ಇದ್ದರೆ



ನಗರದ ಪ್ರತಿಷ್ಠಿತ ನರ್ಸಿಂಗ್ ಹೋಂಗಳೇ ಬೇಕು ಹೆರಿಗೆ ಆಗಲು! ಇವೆಲ್ಲ ಅದೇ ಜಿಲ್ಲೆ, ತಾಲ್ಲೂಕಿನಲ್ಲಿದ್ದಿರಬಹುದು; ಇಲ್ಲದೇ ಇರಬಹುದು.

ಪುರುಷರಿಗೆ ಈ ರೀತಿಯ ಗೊಂದಲಗಳು ಮುತ್ತಿಕೊಂಡರೆ ಸ್ತ್ರೀಯರ ವಿಷಯದಲ್ಲಿ ಅದು ಇನ್ನೂ ಗೋಜಲು, ಗೋಜಲು. ತಾಯಿಯ ತೌರು ಮನೆಯಲ್ಲಿ ಜನಿಸಿ, ತಂದೆಯ ಮನೆಯಲ್ಲಿ ಬೆಳೆದಿರುತ್ತಾರೆ. ಗಂಡನ ಮನೆಯಲ್ಲಿಯೇ ಅವರ ಬದುಕು. ಸ್ವಂತ ಸ್ಥಳದ ಬಗ್ಗೆ ವಿಚಾರಿಸಿದರೆ ಸಾಮಾನ್ಯವಾಗಿ ತಂದೆಯ ಊರನ್ನು ಹೆಸರಿಸುವುದಿಲ್ಲ, ಗಂಡನ ಊರೇ ಆಕೆಯ ಊರೂ ಆಗಿರುತ್ತೆ! ಸಮ್ಮೇಳನದ ಅಧ್ಯಕ್ಷತೆಗೆ ಸಂಬಂಧಿಸಿದ ಪ್ರಶ್ನೆ: ಇವೆಲ್ಲ ಬೇರೆ ಬೇರೆ ಜಿಲ್ಲೆಗಳಲ್ಲಿದ್ದರೆ ಆಕೆಯನ್ನು ಎಲ್ಲಿಗೆ ಸೇರಿಸಬೇಕು? ಇನ್ನೂ ಕ್ಲಿಷ್ಟಕರವಾದದ್ದು ಎಂದರೆ ತಂದೆ ಎಲ್ಲೋ ನೌಕರಿಯಲ್ಲಿದ್ದು, ಅಲ್ಲೇ ಬದುಕು ಅರಳಿಸಿಕೊಂಡಿದ್ದರೆ ತಂದೆಯ ಊರು ಇವರ ಊರಾಗುವುದೆ? ಇಂತಹ ಗೊಂದಲ ಪರಿಸ್ಥಿತಿ ದುರುಪಯೋಗಿಸಿ ಮೂರೂ ಕಡೆ ಫಲಾನುಭವಿಯಾಗಲು ಪ್ರಯತ್ನಿಸುವ ಲೇಖಕಿಯರು ಇದ್ದರೂ ಇರಬಹುದು!

ಜನ್ಮಸ್ಥಳ ಅಲ್ಲ. ವಾಸಿಸುವ ಸ್ಥಳ ಮುಖ್ಯ. ಇಂತಿಷ್ಟು ವರ್ಷಗಳು ವಾಸವಾಗಿದ್ದರೆ ಅವರನ್ನು ಆ ಪ್ರದೇಶದವರೇ ಎಂದು ಪರಿಗಣಿಸಬೇಕು ಎನ್ನುವುದಾದರೆ ಇದನ್ನು ಮಾನ್ಯ ಮಾಡಲು ಆ ಪ್ರದೇಶದ ಹಲವರು ಮಾನಸಿಕವಾಗಿ ಸಿದ್ಧರಿಲ್ಲ ಎಂಬುದಕ್ಕೆ ಒಂದು ನಿದರ್ಶನ ನೀಡಲು ಬಯಸುತ್ತೇನೆ.

ನನ್ನ ಗೆಳೆಯರೊಬ್ಬರು ಇದ್ದಾರೆ. ಅವರು ಕನ್ನಡ ಅಧ್ಯಾಪಕರಾಗಿದ್ದವರು. ಈಗ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ. ಅವರ ತಾಯಿ ಮದ್ದೂರಿನ ಹಳ್ಳಿಯವರು. ಅಲ್ಲೇ ಅವರ ಜನನ ಆಯಿತು. ಅವರ ತಂದೆಯ ಊರು ಚನ್ನಪಟ್ಟಣ ಬಳಿಯ ಒಂದು ಹಳ್ಳಿ. ಹೀಗಾಗಿ ಅವರು ತಂದೆಯ ಊರಿನವರೆಂದು ದಾಖಲಾದರು. ಪದವಿವರೆವಿಗೆ ವಿದ್ಯಾಭ್ಯಾಸವನ್ನು ಮದ್ದೂರಿನಲ್ಲಿ ಮಾಡಿದರು. ಸ್ನಾತಕೋತ್ತರ ಪದವಿಯನ್ನು ಮಂಗಳಗಂಗೋತ್ರಿಯಲ್ಲಿ ಪಡೆದರು. ಶಿಕ್ಷಣ ಮುಗಿದ ನಂತರ ಮದ್ದೂರು ಕಾಲೇಜಿನಲ್ಲಿ ಎರಡು ವರ್ಷ ಸೇವೆಯಲ್ಲಿದ್ದರು. ತದ ನಂತರ ಇಡೀ ತಮ್ಮ ಸೇವೆಯನ್ನು ಅದೇ ತಾಲ್ಲೂಕಿನ ಭಾರತಿ ಕಾಲೇಜಿಗೆ ಸಲ್ಲಿಸಿದರು.

ಈಗ ಪ್ರಶ್ನೆ: ಇವರು ಸೇರುವುದು ಯಾವ ಜಿಲ್ಲೆಗೆ?

ಶಿಕ್ಷಣ ತಜ್ಞರೂ, ಸಾಹಿತಿಯೂ ಆದ ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಬೇಕಾಗಿ ಬಂದಾಗ ಈ ಪ್ರಶ್ನೆ ಉದ್ಭವಿಸಿತಂತೆ. ಮಂಡ್ಯದವರು ಇವರು 'ಹೊರಗಿನವರು' ಎಂಬ ಅಸಮಾಧಾನ ವ್ಯಕ್ತಪಡಿಸಿದರಂತೆ. ರಾಮನಗರ ಜಿಲ್ಲೆಯವರು ಪ್ರಶಸ್ತಿ ಸ್ವೀಕರಿಸಲು ಒತ್ತಾಯಿಸಿದರಂತೆ!

ಸರ್ಕಾರ ನೀಡುವ ಯಾವ ಪ್ರಶಸ್ತಿಗೂ ಕಿಲುಬು ಕಾಸಿನ ಕಿಮ್ಮತ್ತು ಇಲ್ಲ ಎಂದು ಸಾರಿ ಸಾರಿ ಹೇಳುವುದನ್ನು ಕೇಳಿದ್ದೇನೆ. ಆದರೆ ರಾಜ್ಯೋತ್ಸೋವ ಪ್ರಶಸ್ತಿಗಳು ಇದಕ್ಕೆ ಭಿನ್ನವಾಗಿಲ್ಲ ಎನ್ನುವವರೂ ಇದನ್ನು ತಿರಸ್ಕರಿಸುವುದಿಲ್ಲ. ಯಾಕೆಂದರೆ ಅದರ ಜೊತೆಗೆ ಕೊಡ ಮಾಡುವ ಒಂದು ಲಕ್ಷ ರೂಪಾಯಿಗೆ ಬೆಲೆ ಇದೆಯಲ್ಲ ಅದಕ್ಕೇ! ಇರಲಿ. ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡುವಾಗ ಪ್ರತಿ ಜಿಲ್ಲೆಯಿಂದಲೂ ಕನಿಷ್ಠ ಒಬ್ಬ ಸಾಧಕರಾದರೂ ಇರುವಂತೆ ಸರ್ಕಾರ ಎಚ್ಚರ ವಹಿಸುತ್ತದೆ. ಜಿಲ್ಲೆಯಲ್ಲಿ ನೆಲೆಯೇ ಇಲ್ಲದವರು ಆ ಜಿಲ್ಲೆಯ ಹೆಸರಿನಲ್ಲಿ ಹೊಡೆದುಕೊಳ್ಳುತ್ತಿದ್ದಾರೆ ಎಂಬ ಆರೋಪ ಇದೆ.

ಈ ಎಲ್ಲ ಆಯ್ಕೆಗಳಿಗೆ ಯಾವುದೇ ಸ್ಪಷ್ಟ ಮಾನದಂಡ ಇಲ್ಲದಿರುವುದೇ ಈ ಎಲ್ಲ ಗೊಂದಲಗಳಿಗೆ ಕಾರಣ ಆಗಿದೆ. ಹುಟ್ಟು, ಜಾತಿ, ಲಿಂಗ, ಧರ್ಮ, ಪ್ರಭಾವೀ ಲಾಬಿ ಇವನ್ನು ನಿಯಂತ್ರಿಸುತ್ತದೆ ಎಂಬ ಸಂಶಯ ಸಹಜವಾಗಿಯೇ ಉದ್ಭವಿಸುತ್ತದೆ.

ಸಂಬಂಧಿಸಿದವರು ಈ ಕುರಿತು ಚಿಂತಿಸಬೇಕು. ಆಯ್ಕೆಗೆ ಸೂಕ್ತ ಮಾರ್ಗದರ್ಶನ ಸೂತ್ರಗಳನ್ನು ರೂಪಿಸಬೇಕು. ಇಲ್ಲದೆ ಹೋದಲ್ಲಿ ಅರ್ಹರನ್ನು ಗಟಾರಕ್ಕೆ ನೂಕಿ, ಯಾವುದೋ ಬಾದರಾಯಣ ಸಂಬಂಧ ಹೇಳುತ್ತಾ ಎಲ್ಲಾ ಪ್ರಶಸ್ತಿ ಅಧ್ಯಕ್ಷತೆಗಳನ್ನು ಅಪಾತ್ರರೇ ಹೊಡೆದುಕೊಳ್ಳುವ ಅಪಾಯ ಇದೆ.

• ಎಚ್.ಎಲ್.ಕೇಶವಮೂರ್ತಿ

ಅಣಕ



ಅಪಾರ್ಥವೇ ಅರ್ಥ!

ಇತ್ತೀಚೆಗೆ ಮಂಡ್ಯ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಅದರಲ್ಲಿ ಒಂದು ಕಾರ್ಯಕ್ರಮ- ನಗೆಹಬ್ಬ. ಎಂ. ಕೃಷ್ಣೇಗೌಡರು ಹೇಳಿದ್ದು ಇದು.

ನಮಗೆಲ್ಲ ಗೊತ್ತು, ಲಂಚ ಕೊಡದೆ ಯಾವ ಕೆಲಸವೂ ಆಗುವುದಿಲ್ಲ ಅಂತ. ಆದರೆ ಸಮಸ್ಯೆ ಅಂದರೆ ಯಾರಿಗೆ ಕೊಡಬೇಕು ಅನ್ನೋದು. ಈ ಸಂಶಯ ಬೇಕಿಲ್ಲ, ಅಧಿಕಾರಿ ಚೇಂಬರ್ ಮುಂದೆ ಅವರ ಹೆಸರು ಇರುತ್ತದೆ. ಅದರ ಮುಂದೆ 'ಭಾಆಸೇ' ಅಂತಾನೋ 'ಕಆಸೇ' ಅಂತಾನೋ ಬರಿದಿರ್ತಾರೆ. ಹಂಗಂದ್ರೇನು ಗೊತ್ತ?

ಭಾಆಸೇ ಅಂದರೆ ಭಾರೀ ಆದಾಯದ ಸೇವೆ ಅಂತ!

ಕಆಸೇ ಅಂದರೆ ಕಡಿಮೆ ಆದಾಯದ ಸೇವೆ ಅಂತ!

ಬಾಗಿಲಲ್ಲಿರ್ತಾನಲ್ಲ ಜವಾನ ಆತನು ಹೆಂಗೆ?

ಬಾಗಿಲ ಮೇಲೆ ಬರ್ದಿರ್ತದೆ 'ತಳ್ಳಿರಿ' ಅಂದರೆ ಬಾಗಿಲು ಕಾಯುತ್ತ ಇರುವವನಿಗೆ 'ತಳ್ಳಿದರೇ' ಒಳಗೆ ಹೋಗಲು ಪರ್ಮಿಷನ್ನು!

ಒಳಗಿರುವ ಆಸಾಮಿ ಹೆಂಗೆ?


ಬಾಗಿಲು ತಳ್ಳಿ ಒಳಕ್ಕೆ ಕಾಲಿಡ್ತೀರಿ. ಅದು 'ಟಪ್' ಅಂತ ನಿಶಬ್ಧವಾಗಿ ಮುಚ್ಚಿಕೊಳ್ಳುತ್ತೆ. ಹಿಂತಿರುಗಿ ನೋಡ್ತೀರಿ. 'ಎಳೆಯಿರಿ' ಎಂದು ಇರುತ್ತೆ. ಅಂದರೆ ನೋಟುಗಳನ್ನು ಜೋಬಿನಿಂದ ಎಳೆದು ಕೊಡಿ ಅಂತ!

ಇದನ್ನು ಕೇಳಿದಾಗ ನನಗೆ ನೆನಪಾದವರು ಯಾರು ಗೊತ್ತ?


ಜೈಲಿಗೆ ಹೋಗಿ ಬಂದ ಡಿಸಿ ಐಯ್ಯಪ್ಪ! ○

'ಕರ್ನಾಟಕ ಜನಸಾಹಿತ್ಯ ಸಮಾವೇಶ' ಸಂಭ್ರಮದ ಪರ್ಯಾಯವಲ್ಲ

ಸಮಕಾಲಿನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಸಹಜವಾಗಿ ನಡೆಯಬಹುದಾದ ಉತ್ಸವಗಳು, ಸಂಭ್ರಮಗಳು ಬಹುತೇಕವಾಗಿ ವಾದಗ್ರಸ್ಥ ವಿಷಯಗಳಾಗಿ ಪರಿಣಮಿಸುವ ಜೊತೆಗೆ ಬೆಳಕಾಗದೇ, ಬಯಲಾಗದೇ ಬರೀ ಕಿಡಿ ಇಲ್ಲವೆ ಹೊಗೆ ಎಬ್ಬಿಸುವ ಸನ್ನಿವೇಶಕ್ಕೆ ನಾಂದಿಯಾಗಿ ಬಿಡುವ ಸಂದರ್ಭಗಳೇ ಹೆಚ್ಚು. ಅದಕ್ಕೆ ಕಾರಣವಾಗಿ ಅವು ಹುಟ್ಟುಹಾಕಬಹುದಾದ ಅನೇಕ ಬಗೆಯ ತಾತ್ವಿಕ ಭಿನ್ನಾಭಿಪ್ರಾಯಗಳು ಮತ್ತು ವಾಗ್ವಾದದ ಟಿಸಿಲುಗಳನ್ನು



ಮರೆಯಲಾಗುವದಿಲ್ಲ. ಸಮಾಜವೇ ಸಾಹಿತ್ಯದ ಮೂಲ ಸಾಮಗ್ರಿ ಎನ್ನುವ ನಗ್ನ ಸತ್ಯವನ್ನು ಮರೆಮಾಚಿಯೂ ಒಂದು ಸಾಹಿತ್ಯ ಸಂಭ್ರಮವನ್ನು ಸಂಘಟಿಸಿ, ಅದನ್ನೇ ಸರಿ ಎಂದು ಸಮರ್ಥಿಸಿಕೊಂಡಾಗ, ತಾತ್ವಿಕವಾದ ಭಿನ್ನತೆಗಳು ಹುಟ್ಟುವುದು ಸಹಜವೇ. ಧಾರವಾಡದ ಸಾಹಿತ್ಯ ಸಂಭ್ರಮದ ಸಂದರ್ಭದಲ್ಲಿ ಅಲ್ಲಿದ್ದ ತರಾವರಿ ಹೇರಿಕೆಗಳು ಮೊಹತುಶಾಹಿ ವ್ಯವಸ್ಥೆಯನ್ನು ನೆನಪಿಸು ವಂತೆ, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಅಣಕಿಸುವಂತೆ ವ್ಯಕ್ತಿಯ ಆಯ್ಕೆ, ಅಭಿಪ್ರಾಯಗಳಿಗೆ ಅವಕಾಶವಿಲ್ಲದಂತೆ, ಸಾಮಾನ್ಯ ಓದುಗನೆಡೆಗೆ ಬೆನ್ನು ಮಾಡಿ ನಿಂತು, ಜೈಪುರದ ಅನುಕರಣೆಯನ್ನು ಧಾರವಾಡದ ಸರಳ, ಸಾಂಸ್ಕೃತಿಕ ಸಜ್ಜನಿಕೆಯ ನೆಲದಲ್ಲಿ ಮಾಡಿ ಮುಗಿಸುವಾಗಲೇ ರಾಜ್ಯದ ಬೇರೆ ಬೇರೆ ಭಾಗಗಳಿಂದ ಕಸಿವಿಸಿಕೊಂಡ ಪ್ರಗತಿಪರ ಮನಸುಗಳು, ಬರಹಗಾರರು ಸಂಭ್ರಮಕ್ಕೆ ತಮ್ಮದೇಯಾದ ರೀತಿಯಲ್ಲಿ ತಾರ್ಕಿಕ, ತಾತ್ವಿಕ ಭಿನಾಭಿಪ್ರಾಯಗಳನ್ನು ಎತ್ತುವ ಮೂಲಕ ಜನರಿಂದ ದೂರ ಸರಿಯುವ, ವಿಮುಖವಾಗುವ ಮೂಲಕ ಸಂಘಟಿಸಬಹುದಾದ ಸಂಭ್ರಮಗಳ ಸಾರ್ಥಕತೆಯನ್ನು ಕುರಿತು ನಾಡಿನ ಅನೇಕ ಜಾಗೃತ ಮನಸುಗಳು ಪ್ರತಿಕ್ರಿಯಿಸಿದ್ದೂ ಆಯಿತು. ಸಾಹಿತ್ಯವನ್ನು ಸಾಧ್ಯವಾದಷ್ಟು ವ್ಯವಹಾರಿಕವಾದ ಕಕ್ಷೆಗೆ ಒಳಪಡಿಸಬಾರದು ಎನ್ನುವ ಹಂಬಲವಿರುವವರಿಗೆ ಈ ಸಂಭ್ರಮದಂಥಾ ಕಟ್ಟಳೆಗಳ ಬಿಗಿಬಂಧನದ ಹಬ್ಬಗಳು ಹುಟ್ಟುಹಾಕಬಹುದಾದ ಸಾಹಿತ್ಯಕ, ಸಾಂಸ್ಕೃತಿಕ ಪರಿಸರದ ಪೂರ್ವಾಪರಗಳ ಬಗ್ಗೆ ಒಂದು ಬಗೆಯ ದುಗುಡ ಇದ್ದೇ ಇತ್ತು. ಆ ಹಿನ್ನೆಲೆಯಲ್ಲಿ ಒಂದು ತಾತ್ವಿಕವಾದ ಭಿನ್ನಾಭಿಪ್ರಾಯದ ಬರಹಗಾರರ ಸಮೂಹವೊಂದು ಅತ್ಯಂತ ಮುಕ್ತವಾಗಿ ಒಂದು ಜನಪರವಾದ ಸಾಹಿತ್ಯ ವೇದಿಕೆಯನ್ನು ಹುಟ್ಟುಹಾಕಬೇಕು ಎಂದು ಹಂಬಲಿಸಿದ ಪರಿಣಾಮವೇ ಈಗ ಧಾರವಾಡದಲ್ಲಿ ಇದೇ ಮಾರ್ಚ್ 23-24 ರಂದು ಜರುಗಲಿರುವ ಕರ್ನಾಟಕ ಜನಸಾಹಿತ್ಯ ಸಮಾವೇಶ. ಈ ಸಮಾವೇಶ ಖಂಡಿತ ಸಂಭ್ರಮಕ್ಕೆ ಪರ್ಯಾಯವಲ್ಲ, ಎರಡರ ದಾರಿಗಳು ಬೇರೆ ಬೇರೆ.. ಧೋರಣೆ, ತಾತ್ವಿಕತೆಗಳು ಕೂಡಾ ಸಂಪೂರ್ಣವಾಗಿ ಭಿನ್ನ. ಅನೇಕರು ಇದು ಅದಕ್ಕೆ ಪರ್ಯಾಯವೇ..? ಎಂದು ಕೇಳುವಾಗ ಖಂಡಿತ ಅಲ್ಲ, ಸಂಭ್ರಮದ ತಾತ್ವಿಕತೆಯೇ ಬೇರೆ.. ಜನಸಾಹಿತ್ಯ ಸಮಾವೇಶದ್ದೇ ಬೇರೆ. ಹಾಗಾಗಿ ಇದು ಅದಕ್ಕೆ ಪರ್ಯಾಯವಲ್ಲ ಎನ್ನುವದಂತೂ ಖಚಿತ.




ಸಾಹಿತ್ಯಕ ಚಟುವಟಿಕೆಯಲ್ಲಿ ಒಂದೇ ಒಂದು ನಿರ್ಬಂಧವೂ ಇರಕೂಡದು ಎನ್ನುವ ಜಾಗೃತಿಯಿಂದ, ಪಕ್ಕಾ ಪ್ರಜಾಸತ್ತಾತ್ಮಕ ನೆಲೆಯಲ್ಲಿ ಹುಟ್ಟಿಕೊಂಡ ವೇದಿಕೆ ಈ ಕರ್ನಾಟಕ ಜನಸಾಹಿತ್ಯ ಸಮಾವೇಶ. ಇದು ಯಾವುದೋ ಒಂದು ಸಂಸ್ಥೆಯ ಕೃಪಾಪೋಷಿತ ಮಂಡಳಿ




ಅಲ್ಲ, ಸರಕಾರದಿಂದ ಯಾವುದೇ ಅನುದಾನವನ್ನೂ ಇದು ಪಡೆದಿಲ್ಲ. ಪಡೆಯುವುದೂ ಇಲ್ಲ. ಇಲ್ಲಿರುವ ಪದಾಧಿಕಾರಿಗಳೇ ಪ್ರತಿಯೊಬ್ಬರೂ ಐದೈದು ಸಾವಿರ ರೂಪಾಯಿ ಕೂಡಿಸುವ ಮೂಲಕ ಕಾರ್ಯಚಟುವಟಿಕೆಗಳನ್ನು ಆರಂಭಿಸಿ ಈ ವೇದಿಕೆ ನಾಡಿನ ಎಲ್ಲ ಪ್ರಗತಿಪರ ಮನಸುಗಳ ಬೆಂಬಲದೊಂದಿಗೆ ಒಂದು ಅರ್ಥಪೂರ್ಣವಾದ ಕಾರ್ಯಕ್ರಮವನ್ನು ರೂಪಿಸಿದೆ. ಇದು ತೀರಾ ಸರಳವಾದ ಸಮಾವೇಶ. ಇಲ್ಲಿ ಗಂಭೀರವಾದ ಚರ್ಚೆಗಳು, ಸಂವಾದಗಳಿವೆಯೇ ಹೊರತು ಊಟದಲ್ಲಿ ಪಟ್ಟು ಮಾಡಬಹುದಾದ ವಗೈರೆ..ವಗೈರೆಗಳಿಲ್ಲ, ಇಲ್ಲಿರುವುದು ತೀರಾ ಸೀದಾ ಸಾದಾ ಅನ್ನ ಸಾರು ಮಾತ್ರ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಜರುಗುವ ಈ ಎರಡು ದಿನಗಳ ಕಾರ್ಯಕ್ರಮದಲ್ಲಿ ಸುಮಾರು 500 ರಷ್ಟು ಪ್ರಗತಿಪರ ಬರಹಗಾರರು, ಹೊಸ ತಲೆಮಾರಿನ ಲೇಖಕರು ಒಂದೆಡೆ ಸೇರುವ ಸಾಧ್ಯತೆಗಳಿವೆ. ಹೊಸ ತಲೆಮಾರಿನ ಬರಹಗಾರರನ್ನು ಒಳಗೊಂಡು ರೂಪಿತವಾದ ಈ ಕರ್ನಾಟಕ ಜನ ಸಾಹಿತ್ಯ ಸಮಾವೇಶದಲ್ಲಿ ಬೀದರ, ಮಂಗಳೂರು, ಬೆಂಗಳೂರು, ಮೈಸೂರು ಹೀಗೆ ಇಡೀ ರಾಜ್ಯದ ಮೂಲೆ ಮೂಲೆಯಿಂದಲೂ ಬರುವವರಿದ್ದಾರೆ. ಇವರೆಲ್ಲರೂ ಬಹುತೇಕವಾಗಿ ಟಿ.ಎ.ಡಿ.ಎ. ಖಯಾಲಿಯಿಂದ ದೂರ ನಿಂತವರು. ಬಹುತೇಕರು ತಮ್ಮದೇ ಖರ್ಚು ವೆಚ್ಚದಲ್ಲಿ ಬಂದು ಹೋಗಲು ಒಪ್ಪಿಕೊಂಡವರು. 'ಉಚಲ್ಯಾ' ಕೃತಿಯ ಖ್ಯಾತಿಯ ಲಕ್ಷ್ಮಣ ಗಾಯಕವಾಡ ಉದ್ಘಾಟನೆ ಮಾಡುವರು. ನಾಡಿನ ಸಾಂಸ್ಕೃತಿಕ ಚಿಂತಕರಾದ ರಹಮತ್ ತರೀಕೆರೆ, ಬಾನು ಮುಷ್ತಾಕ್, ನಾಗೇಶ ಹೆಗಡೆ, ಕುಂ.ವಿ. ಎಸ್.ಜಿ. ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ, ಇಂದೂಧರ ಹೊನ್ನಾಪುರ, ಜಿ.ಪಿ. ಬಸವರಾಜು, ನಟರಾಜು ಬೂದಾಳ, ತಾರಿಣಿ ಶುಭದಾಯಿನಿ ಹೀಗೆ ಇನ್ನೂ ನೂರಾರು ಸಾಹಿತಿ ಚಿಂತಕರು ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿರುವರು. ಇಲ್ಲಿ ಸಾಹಿತ್ಯ ಆಸಕ್ತರಿರುವ ಯಾರು ಬೇಕಾದರೂ ಭಾಗವಹಿಸಬಹುದು. ಯಾವುದೇ ರೀತಿಯ ಪ್ರವೇಶ ಶುಲ್ಕವಾಗಲೀ, ಕಟ್ಟಳೆಗಳಾಗಲೀ ಇಲ್ಲ, ಮುಕ್ತವಾದ ಪ್ರವೇಶ, ಮುಕ್ತವಾದ ಆಲೋಚನೆ. ಸಾಹಿತ್ಯ ಎನ್ನುವುದು ಪಾರಿಜಾತ ಪುಷ್ಪವಲ್ಲ, ಸಾಹಿತಿಯಾದವನು ಯಕ್ಷ ಲೋಕದ ಕಿನ್ನರನಲ್ಲ, ಜನರ ಬದುಕು-ಭಾವನೆಗಳನ್ನು ಬಟ್ಟಿ ಇಳಿಸಿ, ಸೃಜನಶೀಲ ಎಂದು ಕರೆದುಕೊಂಡು ಜನರಿಂದ ದೂರ ಉಳಿಯುವ ಪರಿಪಾಠ ಸಾಹಿತ್ಯಕ ವಲಯದಲ್ಲಿ ಒಂದು ಬಗೆಯ ಮುಗಮ್ಮಾದ ಯಜಮಾನಿಕೆಯನ್ನು ಹುಟ್ಟುಹಾಕುತ್ತದೆ. ಬಹುದೊಡ್ಡ ಮೌಖಿಕ ಪರಂಪರೆಯಿರುವ ಈ ನೆಲದಲ್ಲಿ ಅದನ್ನೇ ಬಳಸಿಕೊಂಡು ಕತೆ, ನಾಟಕ, ಕಾವ್ಯ ಬರೆದು ಪ್ರಶಸ್ತಿ ಪಡೆದು ಇದ್ದಕ್ಕಿದ್ದಂತೆ ಮೌಖಿಕ ಪರಂಪರೆಯ ವಾರಸುದಾರರನ್ನೇ ಅಜ್ಞಾತರಂತೆ ಪರಿಗಣಿಸುವ ಯಾವ ಉತ್ಸವಗಳೂ ಜನಮುಖಿಯಾಗಲಾರವು ಎನ್ನುವುದನ್ನು ಪ್ರಾಜ್ಞರಾದವರು ಅರಿಯಬೇಕಿದೆ. ಓದುಗ ಮತ್ತು ಬರಹಗಾರನ ನಡುವೆ ಸೇತುಸಂಬಂಧದ ಅವಶ್ಯಕತೆ ಇದೆಯೇ

ಮದನ್-ಮಯೂರ್ ಹಿಂದಿಗೆ ವಲಸೆ



ಮದನ್ ಪಟೇಲ್ ನಿರ್ದೇಶನದ 'ಯಾರಿವನು' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಸಂಪೂರ್ಣವಾಗಿ ಮುಗ್ಗರಿಸಿದೆ. ಮಕ್ಕಾಡೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಸ್ವಭಾವದ ಮದನ್ ಪಟೇಲ್ ಈಗ ಈ ತೋಪು ಚಿತ್ರವನ್ನು ಹಿಂದಿಯಲ್ಲಿ ನಿರ್ಮಿಸುವ ಮಾತನ್ನಾಡು ...ದ್ದಾರೆ. "'ಯಾರಿವನು' ಚಿತ್ರವನ್ನು ಮಾಡುವಾಗ ಕೊನೆ ಕ್ಷಣದಲ್ಲಿ ಕೆಲವು ...ಂದಲ ಮೂಡಿದ್ದರಿಂದ ನಾನು ಅಂದುಕೊಂಡಿದ್ದ ದೃಶ್ಯಗಳನ್ನು ಅದರೊಳಗೆ ...ಸಲಾಗಲಿಲ್ಲ. ಈ ಕಾರಣಕ್ಕೆ ಇದನ್ನು ಹಿಂದಿಯಲ್ಲಿ ಮಾಡುವಾಗ ಅಂತಹ ...ಗಳನ್ನು ಸೇರಿಸುತ್ತೇನೆ" ಎಂದು ಘೋಷಿಸಿದ್ದಾರೆ ಮದನ್ ಮಲ್ಲು.

...ಅಂದಹಾಗೆ, ಹಿಂದಿ ಸಿನಿಮಾವನ್ನು ನಿರ್ದೇಶಿಸುವ ಜವಾಬ್ದಾರಿಯನ್ನು ಅವರು ತಮ್ಮ ಪುತ್ರರತ್ನ ಮಯೂರ್ ಪಟೇಲ್‌ಗೆ ವಹಿಸಿದ್ದಾರೆ. ಈ ಹಿಂದೆ ಈ ಮಯೂರ್ ಕನ್ನಡ ಸಿನಿಮಾದಲ್ಲಿ ಭರವಸೆಯ ನಾಯಕ ನಟನಾಗಿ ಕಾಣಿಸಿದ್ದರು. ಆದರೆ ಯಾವ ಸಿನಿಮಾದಲ್ಲೂ ಅವಕಾಶ ಸಿಗದೆ ಸೊರಗಿದ್ದರು. ಹೀಗೆ ನಾಯಕ ನಟನಾಗಿ ವಿಜೃಂಭಿಸುವಲ್ಲಿ ಸೋತ ಮಯೂರ್ ಈಗ ಹಿಂದಿಯಲ್ಲಿ ನಿರ್ದೇಶಕನಾಗಲು ಹೊರಟಿದ್ದಾರೆಂದು ಎಲ್ಲರು ತರ್ಕಿಸುತ್ತಿದ್ದಾರೆ.



'ಯಾರಿವನು' ಸಿನಿಮಾ ಹಿಂದಿಯಲ್ಲಿ ತಯಾರಾಗುತ್ತದೋ ಇಲ್ಲವೋ ಅದು ಬೇರೆ ಮಾತು. ಆದರೆ ಇಂತಹ ಸರ್ಕಸ್‌ಗಳಿಂದ ಮದನ್ ಮತ್ತು ಮಯೂರ್ ಎಂಬ ತಂದೆ-ಮಗ ಜೋಡಿ ಸುದ್ದಿ ಮಾಡುತ್ತಲೇ ಇರುತ್ತದೆ.

'ಚಂದ್ರು' ವಿವಾದ ಮಾಡುತ್ತಾನಾ?

ಇದು ಗಾಸಿಪ್ ಸುದ್ದಿ ಅಲ್ಲವೇ ಅಲ್ಲ. ಹಾಗೆ ನೋಡಿದರೆ ಸ್ವಲ್ಪ ಹೆಚ್ಚುಕಮ್ಮಿಯಾದರೆ ಇದು ದೊಡ್ಡ ವಿವಾದವಾಗಿ ಸ್ಫೋಟಿಸಿದರೂ ಅಚ್ಚರಿ ಇಲ್ಲ.

ವಿಷಯ ಏನೆಂದರೆ ರೂಪಾ ಅಯ್ಯರ್ ನಿರ್ದೇಶಿಸಿರುವ 'ಚಂದ್ರು' ಎಂಬ ಸಿನಿಮಾದ ಹಂಚಿಕೆ ಜವಾಬ್ದಾರಿಯನ್ನು ಖ್ಯಾತ ಹಂಚಿಕೆದಾರ ಗಂಗರಾಜ್ ಅವರಿಗೆ ವಹಿಸಿದ್ದಾರೆ. 'ಇದರಲ್ಲೇನಿದೆ ವಿವಾದ?' ಎಂದು ನೀವು ಮೂಗಿನ ಮೇಲೆ ಬೆರಳಿಡಬಹುದು. ವಾಸ್ತವವಾಗಿ ಈ ಚಿತ್ರವನ್ನು ರೂಪಾ ಅಯ್ಯರ್ ಆರಂಭಿಸಿದಾಗ ಆಗಷ್ಟೇ ಗಾಂಧಿನಗರಕ್ಕೆ ಹಂಚಿಕೆದಾರನಾಗಿ ಕಾಲಿಟ್ಟಿದ್ದ ಪ್ರಸಾದ್ ಅವರನ್ನು ನಿರ್ಮಾಪಕರನ್ನಾಗಿ ಜೊತೆ ಸೇರಿಸಿಕೊಂಡಿದ್ದರು. ಆಗ ದೊಡ್ಡ ನಟರ ಸಿನಿಮಾಗಳನ್ನು ದೊಡ್ಡ ಬೆಲೆ ಕೊಟ್ಟು ಖರೀದಿಸುತ್ತಿದ್ದ ಪ್ರಸಾದ್ ಬಾರೀ ಸುದ್ದಿಯಲ್ಲಿದ್ದರು.

ಈಗ ಎಲ್ಲರ ಪ್ರಶ್ನೆ ಇಷ್ಟೇ: 'ಚಂದ್ರು' ಚಿತ್ರದಲ್ಲಿ ಪಾಲುದಾರರಾಗಿರುವ ಪ್ರಸಾದ್ ಅವರಿಗೇ ಈ ಸಿನಿಮಾದ ಹಂಚಿಕೆಯ ಜವಾಬ್ದಾರಿಯನ್ನು ರೂಪ ಯಾಕೆ ನೀಡಲಿಲ್ಲ? ರೂಪಾರ ಈ ಕ್ರಮದಿಂದಾಗಿ ಪ್ರಸಾದ್‌ಗೆ ಸಿಕ್ಕಾಪಟ್ಟೆ ಬೇಸರ ಮತ್ತು ಕೋಪ ಬಂದಿದೆ ಎಂಬ ಸುದ್ದಿ ಗಾಂಧಿನಗರದಲ್ಲಿ ಕೇಳಿಬರುತ್ತಿದೆ.




ಈ ಹಿಂದೆ ಇಂತಹ ವಿವಾದಗಳನ್ನು ತುಂಬಾ ಜಾಣ್ಮೆಯಿಂದ ಪರಿಹರಿಸಿರುವ ರೂಪಾ ಈ ಬಾರಿಯೂ ಇದನ್ನು ಆದಷ್ಟು ಬೇಗ ತಣ್ಣಗೆ ಮಾಡಿದರೂ ಆಶ್ಚರ್ಯವಿಲ್ಲ. ಆದರೆ ಒಂದು ಮಾತಂತೂ ನಿಜ. ಈ ಚಿತ್ರ ಬಿಡುಗಡೆಯಾಗುವ ಮುನ್ನ ಪ್ರಸಾದ್ ರೂಪಾ ವಿರುದ್ಧ ಮುಗಿಬಿದ್ದರೂ ಆಶ್ಚರ್ಯವಿಲ್ಲ. ಮೊನ್ನೆ ಮೊನ್ನೆ ಎಸ್. ನಾರಾಯಣ್ ವಿರುದ್ಧ ಇದೇ ರೀತಿ ಚೇಂಬರ್‌ಗೆ ದೂರು ನೀಡಿ, ಅವರ ನಿರ್ದೇಶನದ 'ಅಪ್ಪಯ್ಯ' ಚಿತ್ರ ಬಿಡುಗಡೆಯಾಗದಂತೆ ನೋಡಿಕೊಳ್ಳುವಲ್ಲಿ ಪ್ರಸಾದ್ ಯಶಸ್ವಿಯಾಗಿದ್ದರು. ಅಂತಹ ಬ್ರಹ್ಮಾಸ್ತ್ರವನ್ನು ಪ್ರಸಾದ್ ಮತ್ತೆ ಬಳಸುತ್ತಾರೆಯೇ? ಅಥವಾ ತಮ್ಮ ಎದುರಾಳಿ ಓರ್ವ ಹೆಣ್ಣು ಎಂಬ ಕಾರಣಕ್ಕಾಗಿ ಮೌನಕ್ಕೆ ಶರಣಾಗು ತ್ತಾರೆಯೇ? ಕಾದು ನೋಡಬೇಕಿದೆ.

...ರಿಕೃಷ್ಣನ ದಶಾವತಾರ

...ಸಂಗೀತ ನಿರ್ದೇಶಕ ಹರಿಕೃಷ್ಣ ಗಾಂಧಿನಗರದಲ್ಲಿ ದಿನಕ್ಕೊಂದು ...ದ್ದಿ ಮಾಡುತ್ತಲೇ ಇದ್ದಾರೆ.

...ಇತ್ತೀಚೆಗೆ ಅವರ ಪತ್ನಿ ವಾಣಿ ಹರಿಕೃಷ್ಣ 'ಲೂಸುಗಳು' ಎಂಬ ...ದ ಮುಖಾಂತರ ಸ್ವತಂತ್ರ ಸಂಗೀತ ನಿರ್ದೇಶಕರಾಗಿದ್ದಾರೆ. ಈ ...ದೆ ವಾಣಿ ಅವರು ಸೂರಿ ನಿರ್ದೇಶನದ 'ಇಂತಿ ನಿನ್ನ ಪ್ರೀತಿಯ' ...ದ ಹಾಡೊಂದಕ್ಕೆ ಅತ್ಯುತ್ತಮ ಹಿನ್ನೆಲೆ ಗಾಯಕಿ ಪ್ರಶಸ್ತಿಯನ್ನು ...ದಿದ್ದಾರೆ. ಇವರಿಬ್ಬರ ಹತ್ತು ವರ್ಷ ವಯಸ್ಸಿನ ಪುತ್ರ ಆದಿತ್ಯ ...ಂತರು' ಎಂಬ ಚಿತ್ರಕ್ಕೆ ಹಾಡನ್ನು ಹಾಡಿದ್ದಾನೆ. ಒಂದೇ ವಾಕ್ಯದಲ್ಲಿ ...ಸುವುದಾದರೆ ಹರಿಕೃಷ್ಣ ತಮ್ಮ ಕುಟುಂಬವನ್ನು ಸಂಗೀತಕ್ಕಾಗಿ ...ಡಿಪಾಗಿಟ್ಟಿದ್ದಾರೆ.



...ಇದೆಲ್ಲದರ ಮಧ್ಯೆ ಹರಿಕೃಷ್ಣ ಎರಡು ಚಿತ್ರಗಳ ನಿರ್ಮಾಣಕ್ಕೆ ಕೈಹಾಕುವ ಮುಖಾಂತರ ತಮ್ಮ ಕಾರ್ಯಚಟುವಟಿಕೆಯನ್ನು ಗಾಂಧಿನಗರದಲ್ಲಿ ವಿಸ್ತರಿಸಿದ್ದಾರೆ. ಅವರ ನಿರ್ಮಾಣದ ಒಂದು ಚಿತ್ರವನ್ನು ಯುವ ನಿರ್ದೇಶಕ ರಮೇಶ್ ನಿರ್ದೇಶಿಸುತ್ತಿದ್ದರೆ, ಮತ್ತೊಂದು ಚಿತ್ರವನ್ನು 'ಅದ್ದೂರಿ' ಚಿತ್ರದ ಅರ್ಜುನ್ ನಿರ್ದೇಶಿಸುತ್ತಿದ್ದಾರೆ.



ಈ ಮಧ್ಯೆ ದರ್ಶನ್ ನಾಯಕನಾಗಿ ನಟಿಸುತ್ತಿರುವ 'ಬುಲ್‌ಬುಲ್' ಚಿತ್ರದ ಆಡಿಯೋ ಹಕ್ಕನ್ನು ಸ್ವತಃ ಹರಿಕೃಷ್ಣ ಅವರೇ ಖರೀದಿಸಿದ್ದಾರೆ. ಇದಕ್ಕಾಗಿ ಅವರು 'ಡಿ-ಬೀಟ್ಸ್' ಎಂಬ ಒಂದು ಹೊಸ ಆಡಿಯೋ ಕಂಪನಿಯನ್ನೂ ಹುಟ್ಟುಹಾಕಿದ್ದಾರೆ. ದರ್ಶನ್ ಚಿತ್ರದಿಂದಲೇ ಸ್ವತಂತ್ರ ಸಂಗೀತ ನಿರ್ದೇಶಕರಾದ ಹರಿಕೃಷ್ಣ ಈಗ ಅದೇ ದರ್ಶನ್ ಚಿತ್ರದಿಂದಲೇ ಆಡಿಯೋ ಕಂಪನಿಯ ಮಾಲೀಕರಾಗಿರುವುದು ಕಾಕತಾಳೀಯ.

ಒಂದು ಕಡೆ ಹಿನ್ನೆಲೆ ಗಾಯನ, ಇನ್ನೊಂದು ಕಡೆ ಸಂಗೀತ ನಿರ್ದೇಶನ, ಮತ್ತೊಂದು ಕಡೆ ಸಿನಿಮಾ ನಿರ್ಮಾಣ, ಮಗದೊಂದು ಕಡೆ ಆಡಿಯೋ ಕಂಪನಿಯ ಸ್ಥಾಪನೆ.. ಇವೆಲ್ಲವನ್ನೂ ಏಕಕಾಲದಲ್ಲಿ ನಿಭಾಯಿಸುತ್ತಿರುವ ಹರಿಕೃಷ್ಣ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಲು ಹೊರಟವರಂತೆ ಕಾಣಿಸುತ್ತಿದ್ದಾರೆ.

ಇದೊಂದು ಸಂತೋಷದ ವಿಷಯ

ಅದೇನೆಂದರೆ, ಕನ್ನಡ ಚಿತ್ರರಂಗದ ಮೂವರು ಯುವ ನಿರ್ದೇಶಕರಿಗೆ ಪರಭಾಷಾ ಚಿತ್ರಗಳನ್ನು ನಿರ್ದೇಶಿಸಲು ಆಹ್ವಾನ ಬಂದಿದೆ. 'ಗೊಂಬೆಗಳ ಲವ್' ಚಿತ್ರದ ನಿರ್ದೇಶಕ ಸಂತೋಷ್, 'ಚಾರ್‌ಮಿನಾರ್' ಚಿತ್ರದ ನಿರ್ದೇಶಕ ಆರ್. ಚಂದ್ರು ಮತ್ತು 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಚಿತ್ರದ ನಿರ್ದೇಶ್ ಸುನಿ - ಈ ಮೂವರಿಗೆ ಪಕ್ಕದ ರಾಜ್ಯದ ನಿರ್ಮಾಪಕರು ತಮ್ಮ ಭಾಷೆಯಲ್ಲಿ ಚಿತ್ರ ನಿರ್ದೇಶಿಸಲು ಕರೆದಿದ್ದಾರೆ. ಅಂದಹಾಗೆ, ಸಂತೋಷ್ ಮತ್ತು ಸುನಿ ಇವರಿಬ್ಬರೂ ಇದೇ ಪ್ರಥಮ ಬಾರಿಗೆ ಚಿತ್ರವನ್ನು ನಿರ್ದೇಶಿಸಿದ್ದಾರೆ. ಇವರಿಬ್ಬರ ಕೆಲಸದಲ್ಲಿ ಹೊಸತನವಿದೆ. ಗಾಂಧಿನಗರದ ಸಿದ್ಧಸೂತ್ರಗಳನ್ನು ಬದಿಗೊತ್ತಿ ನವಿರಾದ ನಿರೂಪಣೆಯನ್ನು ತೋರಿದ ಇವರಿಬ್ಬರ ಪ್ರಯತ್ನಗಳನ್ನು ಕನ್ನಡದ ಪ್ರೇಕ್ಷಕರು ಸ್ವಾಗತಿಸಿದ್ದಾರೆ. ಹಾಗೆಯೇ ಆರ್. ಚಂದ್ರು ಈಗಾಗಲೇ ನಾಲ್ಕು ಚಿತ್ರಗಳನ್ನು ನಿರ್ದೇಶಿಸಿದ್ದರೂ ಅವರಿನ್ನೂ ಯುವಕ ಎಂಬುದನ್ನು ಗಮನಿಸಬೇಕು.

ಇತ್ತೀಚೆಗೆ ಕನ್ನಡ ಚಿತ್ರರಂಗದ ದೊಡ್ಡ ದೊಡ್ಡ ನಾಯಕ ನಟರು ಇಲ್ಲಿ ಒಳ್ಳೆಯ ನಿರ್ದೇಶಕರೇ ಇಲ್ಲ ಎಂಬಂತೆ ತಮ್ಮ ಚಿತ್ರಗಳಿಗೆ ತಮಿಳು ಮತ್ತು ತೆಲುಗಿನ ನಿರ್ದೇಶಕರನ್ನು ಕರೆಸುವ ಹವ್ಯಾಸವನ್ನು ರೂಢಿಸಿಕೊಂಡಿದ್ದಾರೆ. ದೊಡ್ಡವರ ಈ ಹವ್ಯಾಸಕ್ಕೆ ಹೊಸ ನಿರ್ದೇಶಕರು ತಕ್ಕುದಾಗಿ ಉತ್ತರ ನೀಡಿದ್ದಾರೆ ಎಂದು ಹೇಳಬಹುದು.

● ಶೆಣೈ

...ರತು ಗಡಿ ಗೋಡೆಗಳಲ್ಲ. ಆ ದಿಸೆಯಲ್ಲಿ ಕರ್ನಾಟಕ ...ನಸಾಹಿತ್ಯ ಸಮಾವೇಶ ಒಂದು ಔಚಿತ್ಯಪೂರ್ಣ ನೆಲೆಯಲ್ಲಿ ... ಸಮಾವೇಶವನ್ನು ಸಂಘಟಿಸುತ್ತಿದೆ. ಸಾಹಿತ್ಯ ಸಂಸ್ಕೃತಿ ...ನರ ಮಧ್ಯೆಯೇ ಆವಿರ್ಭವಿಸುವ ಆವಶ್ಯಕತೆಯಿದೆ. ...ರೇ ವೇಳೆಗೆ ಯಾವುದೋ ಒಂದು ಸಂಭ್ರಮ, ಉತ್ಸವವನ್ನು ...ಯೋಧಿಸಲಿಕ್ಕಾಗಿಯಾಗಲೀ ಇಲ್ಲವೇ ಅದಕ್ಕೆ ...ರ್ಯಾಯವೆಂತಾಗಲೀ ಈ ಬಗೆಯ ಸಮಾವೇಶಗಳು ...ಟ್ಟುವದಿಲ್ಲ, ಬದಲಾಗಿ ಅಗಾಧವಾದ ಸಾಂಸ್ಕೃತಿಕ ಕಾಳಜಿ ...ತ್ತು ಆತ್ಯಂತಿಕವಾದ ಸಾಹಿತ್ಯಕ ಪರಿಸರದ ನೆಲದಲ್ಲಿಯೇ ...ಜಾಸತ್ತೆಯನ್ನು ಅಣಕಿಸುವಂತೆ ಯಾವುದೇ ಒಂದು ಸಂಘ, ...ಸ್ಥೆ ನಡೆದುಕೊಂಡಾಗ ಅದನ್ನು ತಾತ್ವಿಕವಾಗಿ ...ರೋಧಿಸದಿದ್ದರೆ ಆ ಸಮುದಾಯದ ಜೀವಂತಿಕೆ, ...ಗೃತತೆಯ ಪ್ರಶ್ನೆ ಎದುರಾಗುತ್ತದೆ. ಹಾಗಾಗದೇ ಒಂದು ...ರಿಗೆ ಹತ್ತಾರು ದಾರಿಗಳಿರುವಂತೆ, ಹತ್ತಾರು ತಾತ್ವಿಕವಾದ ...ನ್ನಭಿನ್ನ ಸೆಲೆಗಳೂ ಇರಬೇಕು. ಓದುಗನನ್ನು ...ರಹಗಾರನಿಂದ ದೂರ ಇಟ್ಟು ಮಾಡುವ ಯಾವುದೇ ...ಹಿತ್ಯಕ ಕಾರ್ಯಕ್ರಮಗಳು ಅರ್ಥವಂತಿಕೆಯನ್ನು, ...ರ್ಥಕತೆಯನ್ನು ಪಡೆದುಕೊಳ್ಳುವದಿಲ್ಲ. ಆ ಕಾರಣಕ್ಕಾಗಿಯೇ ...ರ್ನಾಟಕ ಜನಸಾಹಿತ್ಯ ಸಮಾವೇಶ ಜನರ ನಡುವೆಯೇ ...ಮಕಾಲಿನ ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ಉತ್ತರ ...ಡುಕೊಳ್ಳುವ, ಅರ್ಥಪೂರ್ಣವಾದ ಸಂವಾದವನ್ನು ...ರ್ಪಡಿಸುವ ಕೆಲಸ ಮಾಡಲಿದೆ. ಊಟದಲ್ಲಿ ವೆರೈಟಿ ...ತ್ತು ಟಿ.ಎ.ಡಿ.ಎ. ಬಯಸಿ ಬರುವವರಿಗೆ ಮಾತ್ರ ಇಲ್ಲಿ ...ಶೆಯಿದೆ. ಅದನ್ನು ಹೊರತುಪಡಿಸಿ ನಿಜವಾದ ಸಾಹಿತ್ಯಕ ...ಕ್ತಿ, ಅರ್ಥಪೂರ್ಣ ಚರ್ಚೆ, ಸಂವಾದದಲ್ಲಿ ಭಾಗವಹಿಸ ...ಕೆನ್ನುವ ಗೆಳೆಯರು ಯಾರು ಬೇಕಾದರೂ ಬಂದು ...ಗವಹಿಸಬಹುದು. ಇದು ಸುಖಲೋಲುಪತೆ ಯಿಂದ ...ರತಾದ ಜನಸಾಹಿತ್ಯ ಸಮಾವೇಶ. ಇದರ ಸ್ವರೂಪ ...ಥದ್ದು? ಎನ್ನುವದರ ಬಗ್ಗೆ ಸಂಕ್ಷಿಪ್ತವಾಗಿ ಹೇಳಿರುವೆ. ...ಮ್ಮ ತಾತ್ವಿಕತೆ ನಿಮ್ಮದೂ ಆಗಿದ್ದರೆ ಬನ್ನಿ ಪಾಲ್ಗೊಳ್ಳಿ.

ಕೊನೆಯದಾಗಿ ಒಂದು ಮಾತು. ಜರ್ಮನ್ ಚಿಂತಕ ...ರ್, ಹೇಳಿದ್ದು 'ಒಂದು ಸೃಜನಶೀಲ ಆಲೋಚನೆಯಲ್ಲಿ ...ವು ಮರೆತು ಹೋದ ಸಾವಿರ ಸಾವಿರ ರಾತ್ರಿಗಳ ಪ್ರೀತಿ ಮತ್ತೆ ಜೀವ ಪಡೆಯುತ್ತದೆ.' ಇಂಥಾ ನಂಬುಗೆಯನ್ನು ಬಲಗೊಳಿಸುವ ನಿಟ್ಟಿನಲ್ಲಿಯೇ ಕರ್ನಾಟಕ ಜನಸಾಹಿತ್ಯ ಸಮಾವೇಶದ ಆಶಯವಡಗಿದೆ.

- ಡಾ. ಎಸ್.ಬಿ. ಜೋಗುರ, ಧಾರವಾಡ

ಸಾಹಿತ್ಯ ಸಮ್ಮೇಳನ ದೇವಸ್ಥಾನದಲ್ಲಿ ನಡೆಯಕೂಡದು

ಈ ಬಾರಿಯ ಮಂಗಳೂರು ತಾಲೂಕು ಸಾಹಿತ್ಯ ಸಮ್ಮೇಳನವನ್ನು ಕುಳಾಯಿಯ ದೇವಸ್ಥಾನವೊಂದರಲ್ಲಿ ನಡೆಸಲಾಗುವುದಂತೆ. ಈ ರೀತಿ ದೇವಸ್ಥಾನಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಸುವುದು ಇತ್ತೀಚಿನ ಟ್ರೆಂಡ್ ಆಗಿರುವಂತಿದೆ. ಇದರ ಸಮರ್ಥಕರು 'ಇದರಲ್ಲೇನು ಸಮಸ್ಯೆ, ಊಟೋಪಚಾರಕ್ಕೆ ಅನುಕೂಲವಲ್ಲವೇ' ಎಂಬ ಮೊಂಡುವಾದವೊಂದನ್ನು ಮುಂದಿಡುತ್ತಿದ್ದಾರೆ. ಇದಕ್ಕೆ ಉತ್ತರವಾಗಿ ದೇವಸ್ಥಾನವೇ ಏಕೆ, ದರ್ಗಾ ಅಥವಾ ಚರ್ಚ್ ಯಾಕೆ ಬೇಡ ಎಂಬ ಪ್ರತಿವಾದವನ್ನು ಮಂಡಿಸಬಹುದಲ್ಲವೇ?

ವಾಸ್ತವವಾಗಿ ಇಂತಹ ಕಾರ್ಯಕ್ರಮಗಳನ್ನು ಧರ್ಮಾತೀತ, ಜಾತ್ಯತೀತ ಸಾರ್ವಜನಿಕ ಸ್ಥಳಗಳಲ್ಲಿ ನಡೆಸುವುದನ್ನು ಬಿಟ್ಟು ದೇವಸ್ಥಾನಗಳಲ್ಲಿ ಮಾಡಹೊರಟಿರುವುದು ಭಾರೀ ಅಪಾಯಕಾರಿ ಬೆಳವಣಿಗೆ. ಇದು ಖಂಡಿತಾ ಆಕಸ್ಮಿಕವಲ್ಲ. ಇದರ ಹಿಂದೆ ಒಂದು ವ್ಯವಸ್ಥಿತ ಸಂಚು ಇದೆ. ಸಮಾಜದ ವಿವಿಧ ಕ್ಷೇತ್ರಗಳನ್ನು ಕೇಸರೀಕರಣಗೊಳಿಸುತ್ತಿರುವವರ ರಹಸ್ಯ ಕಾರ್ಯಸೂಚಿ ಇದೆ. ಈ ಜೀವ ವಿರೋಧಿ ಶಕ್ತಿಗಳು ಈಗಾಗಲೆ ತುಳುನಾಡಿನ ದೈವಸ್ಥಾನ, ಭೂತಸ್ಥಾನಗಳನ್ನು ವೈದಿಕೀಕರಣಗೊಳಿಸಿ ಅವುಗಳ ಮೂಲಸ್ವರೂಪ, ಮೂಲ ಆಶಯಗಳನ್ನೇ ಸರ್ವನಾಶಗೊಳಿಸಿವೆ. ಅದೇ ಶಕ್ತಿಗಳಿಂದು ಸಾಹಿತ್ಯ ಕ್ಷೇತ್ರಕ್ಕೂ ಕಾಲಿರಿಸಿ ಅದನ್ನೂ ಕೆಡಿಸಲು ಹೊರಟಿವೆ ಎಂಬ ಸತ್ಯವನ್ನು ನಾವು ಮನಗಾಣಬೇಕಾಗಿದೆ.



ಇತ್ತೀಚಿನ ಬಂಟ್ವಾಳ ಸಾಹಿತ್ಯ ಸಮ್ಮೇಳನವನ್ನೇ ನೋಡಿ. ಇಡೀ ಕಾರ್ಯಕ್ರಮವನ್ನು ಹೈಜಾಕ್ ಮಾಡಿ ಅದನ್ನೊಂದು ಪರಸ್ಪರರ ಬೆನ್ನು ತಟ್ಟಿಕೊಳ್ಳುವ ವೈದಿಕ ಸಮ್ಮೇಳನವಾಗಿ ಮಾರ್ಪಾಟು ಮಾಡಿದ್ದು ಇದೇ ಸಂವಿಧಾನ ವಿರೋಧಿ ಶಕ್ತಿಗಳು. ಆದುದರಿಂದ ಎಲ್ಲ ಜನಪರ, ಪ್ರಗತಿಪರ ಸಾಹಿತಿಗಳು ಮತ್ತು ಎಲ್ಲಾ ಸಾಹಿತ್ಯಾಭಿಮಾನಿಗಳು ಒಂದಾಗಿ ಕುಳಾಯಿ ಸಮ್ಮೇಳನವನ್ನು ಬಹಿಷ್ಕರಿಸುವುದರೊಂದಿಗೆ ದೇವಸ್ಥಾನಗಳಲ್ಲಿ ಸಮ್ಮೇಳನ ನಡೆಸುವ ಈ ದುಷ್ಟ ಸಂಪ್ರದಾಯವನ್ನೆ ಕೊನೆಗಾಣಿಸಬೇಕಾಗಿದೆ.

ಸಂಘಟಕರು ಒಪ್ಪದಿದ್ದಲ್ಲಿ ಪರ್ಯಾಯ ಸಮ್ಮೇಳನಗಳನ್ನು ಸರ್ವಸಮ್ಮತವಾದ ಸಾರ್ವಜನಿಕ ಸ್ಥಳಗಳಲ್ಲಿ ಏರ್ಪಡಿಸಲು ಸಿದ್ಧರಾಗಬೇಕಿದೆ. ಇಲ್ಲವಾದರೆ ಸಾಹಿತ್ಯ ಕ್ಷೇತ್ರದ ಕೇಸರೀಕರಣಕ್ಕೆ ನಾವಾಗಿಯೆ ಹಾದಿ ಸುಗಮ ಮಾಡಿಕೊಟ್ಟಂತಾಗುತ್ತದೆ.

-ಸುರೇಶ ಭಟ್ ಬಾಕ್ರಬೈಲು, ಮಂಗಳೂರು

ಕಾಂಗ್ರೆಸ್ ಅನ್ನು ಯಾಕೆ ಬೆಂಬಲಿಸುತ್ತಿದ್ದೀರಿ?

ಪತ್ರಿಕೆಯ ಪ್ರತಿ ಸಂಚಿಕೆಯೂ ಅತ್ಯುತ್ತಮವಾಗಿ ಬರುತ್ತಿದೆ. ಅಂದುಕೊಂಡಂತೆ ರಾಮಾಯಣ ಕುರಿತು ಬಂಜಗೆರೆ ಜಯಪ್ರಕಾಶ್ ಅವರ ಹೊಸ ವಿಮರ್ಶೆ ಪ್ರಾರಂಭದಲ್ಲೇ ಆಸಕ್ತಿ ಕೆರಳಿಸಿದೆ. ಉಳಿದಂತೆ ಪತ್ರಿಕೆಯಲ್ಲಿರುವ ಎಲ್ಲಾ ಅಂಕಣಗಳು ಯೋಚನೆಗೆ ಹಚ್ಚಿಸುತ್ತಲೇ ಓದುಗರನ್ನು ಎಚ್ಚರಿಸುತ್ತಿವೆ. ಧನ್ಯವಾದಗಳು.

ನನ್ನಂತಹ ಬಹುತೇಕ ಏಕಲವ್ಯರಿಗೆ ಪಿ. ಲಂಕೇಶ್ ಅವರೇ ಗುರುಗಳು. ಸಾಮಾಜಿಕವಾಗಿ, ಸಾಹಿತ್ಯಕವಾಗಿ, ರಚನಾತ್ಮಕ ಬದುಕನ್ನು ಪ್ರೀತಿಸುವ ಪ್ರಚೋದನಾತ್ಮಕ ಜೀವನೋತ್ಸಾಹವನ್ನು ಹುಟ್ಟು ಹಾಕಿದವರೇ ಲಂಕೇಶ್. ಅವರು ಎಂದೆಂದಿಗೂ ನಮ್ಮ ಮನಸ್ಸಿನಲ್ಲಿ ಜೀವಂತವಿದ್ದಾರೆ. ಅವರ ಹುಟ್ಟಿದ ಜಿಲ್ಲೆ ಶಿವಮೊಗ್ಗೆಯಲ್ಲಿ ಅವರ ನೆನಪಿನ ಹಬ್ಬ ಮಾಡಿದ್ದು ಸಂತೋಷವಾಗಿದ್ದರೂ ಭಾಗವಹಿಸಲಾಗದ್ದಕ್ಕೆ ವಿಷಾದವಿದೆ. ಮುಂದಿನ ವರ್ಷ 'ಲಂಕೇಶ್ -79' ಕಾರ್ಯಕ್ರಮವನ್ನು ಮಂಡ್ಯದಲ್ಲಿ ಮಾಡೋಣವೇ?

ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿಗೆ ಗುದುಮುರಿಗೆ ಬಿದ್ದಿದೆ. ಅದರಲ್ಲೂ ಕರಾವಳಿಯಲ್ಲಿ ಜನ ಬಿಜೆಪಿಗೆ ಸರಿಯಾಗೇ ಬೆವರಿಳಿಸಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂಲೆ ಸೇರುವುದು ನಿಶ್ಚಯವಾಗಿದೆ. ಆದರೆ ನೀವು ಕಾಂಗ್ರೆಸ್‌ಗೆ ಹುರುಪು ನೀಡುತ್ತಿರುವುದು ನಮಗೆ ಗೊಂದಲವಾಗಿದೆ.

ದಿನದಲ್ಲಿ 30 ರೂಪಾಯಿ ಸಂಪಾದಿಸುವಾತ ಬಡವನಲ್ಲ ಎನ್ನುವ, ಮನೆಗೆ ತಿಂಗಳಿಗೊಂದು ಸಿಲಿಂಡರ್ ನೀಡಲಾರದ, ರೈತರ ಎದೆ ಮೇಲೆ ಸಮಾಧಿ ಕಟ್ಟಿ ಸಬ್ಸಿಡಿ ಹಣವನ್ನೂ ಬಿಡದ, ವಿದೇಶಿ ಕಂಪನಿಗಳಿಗೆ ಮಣೆ ಹಾಸುವ, ಹತ್ತು ಹಲವು ಹಗರಣಗಳ ಸರದಾರರಾಗಿರುವ, ಎಲ್ಲಕ್ಕಿಂತ ಹೆಚ್ಚಾಗಿ ಆಂಧ್ರ ಮತ್ತು ತಮಿಳು ನಾಡುಗಳನ್ನು ಓಲೈಸುತ್ತಾ ಕಾವೇರಿ ಕಣಿವೆ ರೈತರನ್ನು ತೊಟ್ಟು ನೀರಿಲ್ಲದೆ ಮಕ್ಕಾಡೆ ಮಲಗಿಸಿರುವ ಕಾಂಗ್ರೆಸ್‌ಗೆ ನೀವು ಗ್ಲುಕೋಸ್ ನೀಡುತ್ತಿದ್ದೀರಿ.

ಬಹುಶಃ ಲಂಕೇಶ್ ಇದ್ದಿದ್ದರೆ ಖಂಡಿತ ಕಾಂಗ್ರೆಸ್‌ಅನ್ನು ಬೆಂಬಲಿಸುತ್ತಿರಲಿಲ್ಲ. ತಮ್ಮದು ಜಾತ್ಯತೀತ ಪಕ್ಷ ಎನ್ನುವ ಕಾಂಗ್ರೆಸಿಗರೇಕೆ ಪಕ್ಷಕ್ಕೆ ಅತ್ಯಂತ ನಿಷ್ಠ ಪರಮೇಶ್ವರರನ್ನು ಮುಂದಿನ ಮುಖ್ಯಮಂತ್ರಿಯಾಗಿ ಬಿಂಬಿಸುತ್ತಿಲ್ಲ? ಬಿಜೆಪಿ ಮತ್ತು ಕಾಂಗ್ರೆಸ್‌ಅನ್ನು ಸಮಾನಾಂತರಂತರದಲ್ಲಿ ಕಾಣುವ ನಮಗೆ ಪರ್ಯಾಯ ವೇದಿಕೆಯೊಂದನ್ನು (ತೃತೀಯ ರಂಗ) ನಿಮ್ಮಂಥವರು ಸೃಷ್ಟಿಸಬೇಕಿದೆ.

- ಮಮತಾ ಪುಟ್ಟರಾಜು, ಮಂಡ್ಯ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

ಸುಮ್‌ಸುಮ್ನೆ ಮದುವೆಯಾಗುವ ರಾಜೇಶ್‌ಕೃಷ್ಣ



2011ರ ನವೆಂಬರ್ ತಿಂಗಳಲ್ಲಿ ಖ್ಯಾತ ಹಿನ್ನೆಲೆ ಗಾಯಕ, ಸಂಗೀತ ನಿರ್ದೇಶಕ ಮತ್ತು ನಟ ರಾಜೇಶ್ ಕೃಷ್ಣ ಮೂರನೆ ಬಾರಿಗೆ ಮದುವೆಯಾದಾಗ "ಆತ ಈ ಹಿಂದಿನ ಎರಡು ಮದುವೆಗಳಲ್ಲಿ ಮಾಡಿಕೊಂಡಿದ್ದ ಎಡವಟ್ಟುಗಳನ್ನು ಮಾಡಿಕೊಳ್ಳದಿರಲಿ" ಎಂದು ಬರೆದಿದ್ದೆವು. ಆದರೀಗ ಅಂತಹ ಎಡವಟ್ಟನ್ನು ರಾಜೇಶ್ ಮಾಡಿಕೊಂಡಿರುವುದು ಬಯಲಾಗಿದೆ.



ಈತ ಮೊದಲು ಸೌಮ್ಯ ರಾವ್ ಎಂಬ ಹಾಡುಗಾರ್ತಿಯನ್ನು ಪ್ರೀತಿಸಿ ಮದುವೆ ಆಗಿದ್ದರು. ಸೌಮ್ಯ ಖ್ಯಾತ ಗಾಯಕಿ ಬಿ.ಕೆ. ಸುಮಿತ್ರಾ ಅವರ ಪುತ್ರಿ. ಆದರೆ ರಾಜೇಶ್ ಮತ್ತು ಸೌಮ್ಯರ ದಾಂಪತ್ಯ ಜೀವನ ಬಹುದಿನಗಳ ಕಾಲ ಉಳಿಯಲಿಲ್ಲ, ಆಕೆಗೆ ಸೋಡಾ ಚೀಟಿ ಕೊಟ್ಟ ರಾಜೇಶ್ ಅನಂತರ ಹರಿಪ್ರಿಯಾ ಎಂಬ ದಂತವೈದ್ಯೆಯ ಕೈಹಿಡಿದಿದ್ದರು. ಆ ಮದುವೆ ಕೂಡ ಹಲವೇ ತಿಂಗಳುಗಳಲ್ಲಿ ಮುರಿದುಬಿದ್ದಿತ್ತು, ಮೂರನೆ ಬಾರಿಗೆ ರಾಜೇಶ್ ಮದುವೆಯಾಗಿದ್ದು ಗಾಯಕಿ ಮತ್ತು ಕಿರುತೆರೆ ನಟಿ ರಮ್ಯಾ ವಸಿಷ್ಠಳನ್ನು.

ರಾಜೇಶನನ್ನು ಮದುವೆ ಆಗುವ ಮುನ್ನ ರಮ್ಯಾ ಒಂದಿಷ್ಟು ಎಚ್ಚರಿಕೆ ವಹಿಸಿ ಆತನ ಮಾಜಿ ಪತ್ನಿಯರನ್ನು ಮಾತನಾಡಿಸಿದ್ದರೆ ಆಕೆಯ ಬದುಕಿನಲ್ಲಿ ಇಂತಹ ಒಂದು ಪ್ರಕರಣ ಸಂಭವಿಸುತ್ತಿರಲಿಲ್ಲ. ಆದರೆ ರಮ್ಯಾ ಹಾಗೆ ಮಾಡುವ ಬದಲಾಗಿ ರಾಜೇಶ್ ತನ್ನ ಎರಡು ವಿಚ್ಛೇದನಗಳಿಗೆ ಕೊಟ್ಟ ಕಾರಣಗಳನ್ನು ನಂಬಿಬಿಟ್ಟಳು.

ಈಗ ವಿಚ್ಛೇದನ ಕೋರಿ ರಮ್ಯಾ ಕೌಟುಂಬಿಕ ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ರಾಜೇಶನಿಗೆ ಪುರುಷತ್ವವಿಲ್ಲ, ಮದುವೆಯಾಗಿ ಒಂದು ವರ್ಷದ ಮೇಲಾಗಿದ್ದರೂ ತಾನಿನ್ನೂ ಕನ್ಯೆ, ತಮ್ಮ ಈ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಕೃತಕ ಗರ್ಭಧಾರಣೆ ಮಾಡಿಸಲು ಮುಂದಾಗಿದ್ದರು, ತಮ್ಮ ನಡುವಿನ ಸಂಬಂಧವನ್ನು ದಾಂಪತ್ಯ ಎಂದು ಕರೆಯಲಾಗುವುದಿಲ್ಲ ಎಂದೆಲ್ಲಾ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ಅದೆಲ್ಲ ಅದೆಷ್ಟು ಸತ್ಯ ಎಂದು ನ್ಯಾಯಾಲಯದಲ್ಲಿ ತೀರ್ಮಾನವಾಗಲಿದೆ. ಆದರೆ ರಾಜೇಶ್ ಮಾತ್ರ "ಸುಮ್ ಸುಮ್ನೇ ನಗ್ತಾಳೆ" ಎಂದು ಹಾಡಿದಷ್ಟು ಸಲೀಸಾಗಿ ಸುಮ್ ಸುಮ್ನೇ ಮದುವೆಯಾಗುವುದನ್ನು ನಿಲ್ಲಿಸಿದರೆ ಅವರಿಗೂ, ಬೇರೆ ಯುವತಿಯರಿಗೂ ಒಳಿತು, ಅಲ್ಲವೇ?

ಬಿಗ್‌ಬಾಸ್ V/s ಕೋಟ್ಯಾಧಿಪತಿ



ಮುಂದಿನ ವಾರದಿಂದ ಕಿರುತೆರೆಯಲ್ಲಿ ಕನ್ನಡ ಚಿತ್ರರಂಗದ ಇಬ್ಬರು ಯುವ ನಾಯಕ ನಟರ ನಡುವೆ ಸಮರ ಆರಂಭವಾಗುವ ಸಾಧ್ಯತೆಯಿದೆ.

ನಿಮಗೆಲ್ಲ ಗೊತ್ತಿರುವ ಹಾಗೆ ಸುವರ್ಣ ವಾಹಿನಿಯಲ್ಲಿ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದ ಮೂರನೇ ಭಾಗವನ್ನು ನಡೆಸಿಕೊಡುತ್ತಿದ್ದಾರೆ. ಅದು ಸೋಮವಾರದಿಂದ ಶುಕ್ರವಾರದತನಕ ರಾತ್ರಿ 8 ಗಂಟೆಯ ಮುಖ್ಯ ಸಮಯದಲ್ಲಿ ಪ್ರಸಾರವಾಗುತ್ತಿದೆ. ಈ ಹಿಂದೆ ಈ ಕಾರ್ಯಕ್ರಮ ಅದೆಷ್ಟು ಜನಪ್ರಿಯವಾಗಿತ್ತೆಂದರೆ ಅದು ಆ ಚಾನೆಲ್‌ಗೆ ಅತ್ಯಂತ ಹೆಚ್ಚು ಟಿ.ಆರ್.ಪಿ.ಯನ್ನು ತಂದುಕೊಟ್ಟಿತ್ತು, ಅಷ್ಟೇ ಅಲ್ಲ, ಈ ಕಾರ್ಯಕ್ರಮದಿಂದಾಗಿಯೇ ಸುವರ್ಣ ವಾಹಿನಿಯ ಉಳಿದ ಕಾರ್ಯಕ್ರಮಗಳಿಗೂ ಒಂದು ರೀತಿಯಲ್ಲಿ ಪ್ರೇಕ್ಷಕರು ದೊರೆತಿದ್ದರು.

ಹೊಸ ವಿಷ್ಯ ಏನೆಂದರೆ ಬರುವ 24 ರಿಂದ 'ಈ ಟಿ.ವಿ.' ಚಾನೆಲ್‌ನಲ್ಲಿ ಕಿಚ್ಚ ಸುದೀಪ್ ನಡೆಸಿಕೊಡುವ 'ಬಿಗ್ ಬಾಸ್' ಎಂಬ ರಿಯಾಲಿಟಿ ಶೋ ಆರಂಭವಾಗಲಿದೆ. ಈ ಕಾರ್ಯಕ್ರಮ ಕೂಡ ಪುನೀತ್ ನಡೆಸಿಕೊಡುವ 'ಕೋಟ್ಯಾಧಿಪತಿ' ಕಾರ್ಯಕ್ರಮದ ಸಮಯದಲ್ಲೇ - ಅಂದರೆ ರಾತ್ರಿ 8 ಗಂಟೆಗೆ - ಪ್ರಸಾರವಾಗಲಿದೆ.

ಈ ಎರಡೂ ಕಾರ್ಯಕ್ರಮಗಳು ಒಂದೇ ಸಮಯಕ್ಕೆ ಪ್ರಸಾರವಾಗುವುದನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ಮೊದಲನೆಯದಾಗಿ ಕನ್ನಡ ಟಿವಿ ಚಾನೆಲ್‌ಗಳ ನಡುವಿನ ಟಿಆರ್‌ಪಿ ಸಮರ ಈಗ ತಾರಕಕ್ಕೆ ಹೋಗಿದ್ದು ಅದೀಗ ಈ ಎರಡೂ ಕಾರ್ಯಕ್ರಮಗಳ ನಡುವಿನ ಪೈಪೋಟಿಯಲ್ಲೂ ವ್ಯಕ್ತವಾಗುತ್ತಿದೆ. ಎರಡನೆಯದಾಗಿ ಇದು ಪುನೀತ್ ವರ್ಸಸ್ ಸುದೀಪ ನಡುವಿನ ಸಮರ ಎಂದು ಗಾಂಧಿನಗರದವರು ವಿಶ್ಲೇಷಿಸುತ್ತಿರುವುದು.


ಮೊದಲೇ ಸುದೀಪ್ ಮತ್ತು ಪುನೀತ್ ನಡುವಿನ ಸಂಬಂಧ ಕಳೆದೆರಡು ವರ್ಷಗಳಿಂದ ಅಷ್ಟಕ್ಕಷ್ಟಕ್ಕಿದೆ. ಹಲವಾರು ಬಾರಿ ಇವರಿಬ್ಬರ ಚಿತ್ರಗಳು ಒಂದೇ ಸಮಯದಲ್ಲಿ ಬಿಡುಗಡೆಯಾಗಬಹುದೆಂದು ಗಾಂಧಿನಗರದ ಜನ ನಿರೀಕ್ಷೆ ಮಾಡಿದ್ದರು. ಆದರೆ ಪ್ರತಿ ಬಾರಿ ಅಂತಹ ಒಂದು ತಾರಾಸಮರ ಕೊನೆಕ್ಷಣದಲ್ಲಿ ತಪ್ಪಿಹೋಗುತ್ತಿತ್ತು, ಹೀಗೆ ಬೆಳ್ಳಿಪರದೆಯ ಮೇಲೆ ನಡೆಯಬಹುದಾಗಿದ್ದ ಈ ಯುವನಾಯಕರ ತಾರಾಸಮರ ಈಗ ಕಿರುತೆರೆಗೆ ವರ್ಗವಾಗಿದೆ ಎಂ ಗಾಂಧಿನಗರದವರು ಹೇಳುತ್ತಿದ್ದಾರೆ.

ಒಂದು ಮಾತಂತೂ ನಿಜ. ಇವೆರಡೂ ಕಾರ್ಯಕ್ರಮಗಳು ಒಂ ಸಮಯದಲ್ಲಿ ಪ್ರಸಾರವಾದರೆ ಖಂಡಿತವಾಗಿಯೂ ಪ್ರೇಕ್ಷಕ ಗಲಿಬಿಲಿಗೊಳ್ಳುತ ಕೊನೆಗೆ ಆತ ಯಾವುದಾದರೊಂದು ಕಾರ್ಯಕ್ರಮವನ್ನು ಆಯ್ಕೆ ಮಾಡುವು ಶತಸಿದ್ಧ. ಹಾಗೆ ಮಾಡುವ ಮೂಲಕ ಮತ್ತೊಂದು ಕಾರ್ಯಕ್ರಮವು ಪ್ರೇಕ್ಷ ಬೆಂಬಲವಿಲ್ಲದೆ ಸೊರಗುತ್ತದೆ. ಆ ಕಾರ್ಯಕ್ರಮ ಸೊರಗಿದರೆ ಸಹಜವಾಗಿ ಆ ಸೋಲಿನ ಹಣೆಪಟ್ಟಿ ಅದನ್ನು ನಡೆಸಿಕೊಡುವ ನಟನ ಮೇಲೆ ಬೀಳುತ್ತ

ಹಿಂದಿ ಟಿವಿ ಚಾನೆಲ್‌ಗಳಲ್ಲೂ ನಟರು ನಡೆಸಿಕೊಡುವ ಜನಪ್ರಿ ಕಾರ್ಯಕ್ರಮಗಳು ಪ್ರಸಾರವಾಗುವ ಸಂದರ್ಭದಲ್ಲಿ ಅವು ಒಂದೇ ಸಮಯದ ಬಾರದಂತೆ ಆಯಾ ಟಿ.ವಿ. ಚಾನೆಲ್‌ನ ಮುಖ್ಯಸ್ಥರು ಎಚ್ಚರಿಕೆ ವಹಿಸುತ್ತಾ ಆದರೆ ಕರ್ನಾಟಕದಲ್ಲಿ ಯಾಕೆ ಅಂತಹ ಮುತುವರ್ಜಿಯನ್ನು ಟಿ.ವಿ. ಚಾನೆಲ್‌ನ ವಹಿಸುತ್ತಿಲ್ಲ ಎಂಬುದೇ ಆಶ್ಚರ್ಯ.

ಸುದೀಪ್ ಮತ್ತು ಪುನೀತ್ ನಡೆಸಿಕೊಡುವ ಕಾರ್ಯಕ್ರಮಗಳಲ್ಲಿ ಯಾವು ಗೆಲ್ಲುತ್ತದೆ ಎಂದು ಗಾಂಧಿನಗರದವರು ಅತ್ಯಂತ ಕುತೂಹಲದಿದ ಕಾ ಕುಳಿತಿದ್ದಾರೆ.





ಹಂಚಿಕೆದಾರರ ಪೈಪೋಟಿ

ಕನ್ನಡ ಸಿನಿಮಾ ಹಂಚಿಕೆದಾರರ ಕಣ್ಣು ಈಗ ಮೂರು ಚಿತ್ರಗಳ ಮೇಲಿವೆ.

ಅವುಗಳೆಂದರೆ: ಮೊದಲ ಯದು ಶಶಾಂಕ್ ನಿರ್ದೇಶಿಸಿರುವ, ಸುದೀ ನಾಯಕ ನಟನಾಗಿರುವ 'ಬಚನ್'. ಎರಡನೆಯದು ಎಂ. ಶ್ರೀಧರ್ ನಿರ್ದೇಶನದ, ಚಾಲೆಂಜಿಂಗ್ ಸ್ಟಾರ್ ದರ್ಶ ಅಭಿನಯದ 'ಬುಲ್‌ಬುಲ್'. ಮೂರನೆಯದು ಪನೀ ನಿರ್ದೇಶನದ, ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿರು 'ಅಂದರ್‌ಬಾಹರ್'.

ಈ ಮೂರು ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಭರ್ಜ ಜಯಗಳಿಸುತ್ತವೆ ಎಂದು ಲೆಕ್ಕಹಾಕಿರುವ ಹಂಚಿಕೆದಾರ ಇವುಗಳನ್ನು ಖರೀದಿಸಲು ಪೈಪೋಟಿಗೆ ಬಿದ್ದಿದ್ದಾರೆ.

ಇತ್ತೀಚೆಗೆ ಒಂದು ಸಿನಿಮಾ ಮುಗಿದ ನಂತ ಹಂಚಿಕೆದಾರರಿಗೆ ವಿಶೇಷ ಶೋ ಇಟ್ಟು ತೋರಿಸಿದರ ಅದನ್ನು ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲ. ಅಂತ ಪರಿಸ್ಥಿತಿಯಲ್ಲಿ ಈಗ ಎಲ್ಲರೂ ಈ ಮೂರೂ ಚಿತ್ರಗಳ ಮುಗಿಬಿದ್ದಿರುವುದು ಅಚ್ಚರಿ ಮೂಡಿಸುತ್ತಿದೆ.

ಗಾಂಧಿನಗರಿಗಳ ಪ್ರಕಾರ ಈ ಮೂರು ಚಿತ್ರಗಳ ಮೊದಲಿಗೆ 'ಅಂದರ್ ಬಾಹರ್', ಅದಾದ ನಂತರ 'ಬಚ ಮತ್ತು ಕೊನೆಯಲ್ಲಿ 'ಬುಲ್‌ಬುಲ್' ಚಿತ್ರ ಬಿಡುಗ ಯಾಗಲಿವೆಯಂತೆ.

• ಶೆಣೈ

ಶರತ್‌ಕುಮಾರ್ ಉದ್ಧಟತನ

ಇದು ಮೊನ್ನೆ 'ಮೈನಾ' ಚಿತ್ರದ ಸಂತೋಷಕೂಟದಲ್ಲಿ ನಡೆದ ತಮಾಷೆಯ ಘಟನೆ.

ಈ ಚಿತ್ರದಲ್ಲಿ ಡಿ.ಸಿ.ಪಿ ಅಶೋಕ್‌ಕುಮಾರ್ ಅವರ ಪಾತ್ರವನ್ನು ನಿರ್ವಹಿಸಿದ ತಮಿಳು ನಟ ಶರತ್‌ಕುಮಾರ್ ಮಾತನಾಡುತ್ತ "ನನ್ನ ಕನ್ನಡ ಸರಿಯಾಗಿಲ್ಲ ಎಂದು ಯಾರೋ ವಿಮರ್ಶೆಯಲ್ಲಿ ಬರೆದದ್ದು ಓದಿದ ನೆನಪು. ಆದರೆ ಒಂದು ಮಾತು ಹೇಳುತ್ತೇನೆ ಕೇಳಿ. ನಾನು ತಮಿಳುನಾಡಿನವನಾದರೂ ಚೆನ್ನಾಗಿ ಕನ್ನಡ ಮಾತನಾಡಿದ್ದೇನೆ. ಮುಖ್ಯವಾಗಿ ನಿಮ್ಮ ನಾಯಕನಟ ಚೇತನ್ ಅವರ ನ್ಯೂಯಾರ್ಕ್ ಕನ್ನಡಕ್ಕಿಂತ ನನ್ನ ಕನ್ನಡವೇ ಚೆನ್ನಾಗಿತ್ತು" ಎಂದು ಹೇಳುತ್ತ ಪರೋಕ್ಷವಾಗಿ ಚೇತನ್‌ರನ್ನು ತರಾಟೆಗೆ ತೆಗೆದುಕೊಂಡರು. ಶರತ್‌ಕುಮಾರ್ ಅವರ ಕನ್ನಡ ಪ್ರೇಮ ಅಷ್ಟಕ್ಕೇ ನಿಲ್ಲಲಿಲ್ಲ, "ಇನ್ನೊಂದು ಮಾತು. ಇಲ್ಲಿ ನನ್ನ ಎದುರು ಕುಳಿತಿರುವ ನಿಮಗೆಲ್ಲರಿಗಿಂತಲೂ ನನಗೆ ಬೆಂಗಳೂರು ಹೆಚ್ಚು ಗೊತ್ತು. ನಾನು ಬೆಂಗಳೂರಿನ ಮೂಲೆ ಮೂಲೆಯನ್ನೂ ನೋಡಿದ್ದೇನೆ" ಎಂದು ಹೇಳುವ ಮೂಲಕ ಅಲ್ಲಿದ್ದ ಮಾಧ್ಯಮದವರನ್ನು ಮತ್ತು ಇತರೆ ಆಹ್ವಾನಿತರನ್ನೂ ಶರತ್‌ಕುಮಾರ್ ಪರೋಕ್ಷವಾಗಿ ಗೇಲಿ ಮಾಡಿದರು.



ಅವರ ಮಾತಿಗೆ ಯಾರೂ ವಿರೋಧ ವ್ಯಕ್ತಪಡಿಸದಿದ್ದ ಕಾರಣವೋ ಏನೊ, ಶರತ್‌ಕುಮಾರ್ ಇನ್ನಷ್ಟು ಉತ್ಸಾಹದಿಂದ ತಮ್ಮ ಮಾತಿನ ಭರಾಟೆಯನ್ನು ಮುಂದುವರೆಸಿದರು. 'ಮೈನಾ' ಚಿತ್ರದ ನಾಯಕ ಚೇತನ್‌ನನ್ನು ಉದ್ದೇಶಿಸಿ ಶರತ್‌ಕುಮಾರ್ "ಚೇತನ್, ನೀವು ಶೂಟಿಂಗ್ ಟೈಂನಲ್ಲಿ ಸಿಕ್ಕಾಪಟ್ಟೆ ಸಿಟ್ಟು ಮಾಡಿಕೊಳ್ಳುತ್ತಿದ್ದೀರಿ. ಆ ರೀತಿ ನೀವು ಯಾಕೆ ಸಣ್ಣ ಸಣ್ಣ ವಿಷಯಕ್ಕೂ ಕೋಪ ಮಾಡಿಕೊಳ್ಳುತ್ತಿದ್ದೀರಿ? ನನ್ನನ್ನು ನೋಡಿ, 125 ಚಿತ್ರಗಳಲ್ಲಿ ನಟಿಸಿರುವ ನಾನು ಯಾವುದೇ ಟೆನ್ಷನ್ ಮಾಡಿಕೊಳ್ಳದೆ ಕೂಲ್ ಆಗಿ ಇರುತ್ತೇನೆ" ಎಂದು ಮತ್ತೊಮ್ಮೆ ನೇರವಾಗಿ ಚೇತನ್ ಮೇಲೆ ಗದಾಪ್ರಹಾರ ಮಾಡಿದರು.

'ಮೈನಾ' ಚಿತ್ರದ 50ನೇ ದಿನದ ಸಂತೋಷ ಕೂಟದಲ್ಲಿ ಈ ರೀತಿ ಮಾತನಾಡುವ ಅಗತ್ಯವೇ ಇರಲಿಲ್ಲ, ಅದರಲ್ಲೂ ಚೇತನ್‌ಗೆ ಎಲ್ಲರ ಮುಂದೆ ಪಾಠ ತೆಗೆದುಕೊಂಡ ಅವರ ಶೈಲಿ ಖಂಡಿತವಾಗಿಯೂ ಮೆಚ್ಚುವಂಥದ್ದಲ್ಲ, ಅವರಿಗೆ ನಿಜವಾಗಿಯೂ ಚೇತನ್ ಮೇಲೆ ಅಭಿಮಾನವಿದ್ದಲ್ಲಿ ಶೂಟಿಂಗ್ ಸ್ಥಳದಲ್ಲಿ ಪಕ್ಕಕ್ಕೆ ಕರೆದು ಹೇಳಬಹುದಿತ್ತು. ಹಾಗೆ ಮಾಡುವ ಬದಲು ಪತ್ರಿಕಾಗೋಷ್ಠಿಯಲ್ಲಿ ಚೇತನ್ ಮೇಲೆ ಗದಾಪ್ರಹಾರ ಮಾಡುವ ಮುಖಾಂತರ ಶರತ್‌ಕುಮಾರ್ ತನ್ನ ಸಣ್ಣತನವನ್ನು ಪ್ರದರ್ಶಿಸಿದರು ಎಂದೇ ಹೇಳಬೇಕಾಗುತ್ತದೆ.

ಇದಕ್ಕಿಂತಲೂ ಆಶ್ಚರ್ಯವೆಂದರೆ ತಮ್ಮ ಚಿತ್ರದ ನಾಯಕ ನಟನ ಮೇಲೆ ಪರಭಾಷಾ ನಟನೊಬ್ಬ ಈ ರೀತಿ ಟೀಕೆ ಮಾಡುತ್ತಿರುವಾಗ ಚಿತ್ರದ ನಿರ್ದೇಶಕ ನಾಗಶೇಖರ್ ಯಾವುದೇ ಪ್ರತಿಕ್ರಿಯೆ ನೀಡದೆ ಮೌನವಾಗಿದ್ದದ್ದು.



ಚಾರು ಪ್ರಕಾಶನದ
ಜಾಬ್ ನ್ಯೂಸ್
ಹೊಸ ಸಂಚಿಕೆ

ಲಂಕೇಶ್ ಬಳಗದ
ಹೊಸ ಸಂಚಿಕೆಗಳು
ಈಗ ಎಲ್ಲೆಡೆ ಲಭ್ಯ
ಪ್ರತಿಗಳಿಗಾಗಿ
080-26676427
9880302817

ಗೈಡ್ ಪ್ರಕಾಶನದ
ಗೈಡ್
ಏಪ್ರಿಲ್ ತಿಂಗಳ
ಹೊಸ ಸಂಚಿಕೆ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com